(SRI K. HANUMANTHAIYA.)

We are new to the House and naturally the Opposition Party takes some time to consolidate its position. Therefore, the objection that was raised on behalf of the Congress Party need not be pressed. Let the Opposition and its Leader continue with the *status quo* and I am sure, experienced legislators as they are, they will be able to see that the Opposition Party develops on proper lines.

Janab J. MOHAMED IMAM (Jagalur). Well Sir, I thank the Leader of the House for the view he has taken. But I submit it is a matter entirely left to the Chair and that whatever the Chair decides, will be binding on us. Only one thing I want to point out. So far as this matter is concerned, it is open to you to consult the Leader of the House or anybody else personally, as Speaker. But it is not a matter which should be the subject of debate in this House. Recognition or non-recognition of Parties is a matter entirely left to the Speaker and whatever decision the Chair gives will be binding on us. It is open to you to take whatever decision. I appreciate that the Leader of the House has expressed that he is interested in strengthening the Opposition.

Statement by the Speaker *re*: Presence of the Police in the Gallery.

Mr. SPEAKER.—After question-hour yesterday a Member, I remember, Sri Vasan, wanted to know from me whether any officer of the Special Branch of the Police Department had been permitted to watch the Members and take notes of the proceedings of the House. I informed the Member that no officer or official of the Police Department was present in the Hall in his official capacity.

Soon after this statement by the Member, the Secretary got into communication with the Deputy Inspector-General of Police in order to ascertain the facts. He has been informed officially that no special Branch Officer is deputed either to maintain watch over Members or to take notes of proceedings.

As the allegation by the Member, if true, would raise a serious and important case of privilege, I was anxious to ascertain the facts. As Hon'ble Members are aware, the entire responsibility for maintaining order within the precincts of the House rests exclusively on the Speaker and the Executive has no jurisdiction whatsoever. Every Hon'ble Member has a right to demand the fullest freedom from the Executive within the precincts of the Assembly Hall and I can assure him that he will have it. At the same time, I might mention that an officer from the Police Department does not by virtue of his official position get disqualified from attending the Assembly as a visitor. It is only where he uses the permission given to him to attend as a visitor to discharge any part of his official duties, that the matter assumes a different complexion.

In view of this statement, I hope the Hon'ble Member who raised this question will feel satisfied.

BUDGET FOR 1952-53—DEMANDS FOR GRANTS—*contd.*

SECOND STAGE—*contd.*

Demand No. 11.—General Administration.

25. General Administration (Except the sub-major heads B.C. & F.)

Mr. SPEAKER.—Motion moved:

"That a sum not exceeding Rs. 20,98,700 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'General Administration (Except sub-major heads B.C. and F.)"

Effecting economy in Secretariat.

Janab J. MOHAMED IMAM (Jagalur).—Sir, I move:

"That the demand under the head "25. General Administration

(except the sub-major heads B.C. and F.) for Rs. 20,98,700 be reduced by Rs. 100 (to urge the necessity of effecting economy in the establishment of the Secretariat."

Sir, it is agreed by all the Members of this House that there is urgent and absolute need for effecting economy and retrenchment, wherever necessary, so as to improve the financial condition of the State.

The Chief Minister in his speech has indicated the departments wherein he proposes to effect economy. I pointed out in my speech that the Chief Minister, though he has effected retrenchment in some departments, has not really effected economy so far as the financial position is concerned. And I also pointed out at that time that this retrenchment to be effective and to be acceptable to all, should first come from the top and then extended to the lower cadre. That is why at that time I pleaded that the Ministers must set a personal example regarding retrenchment. I also pleaded that under no circumstances the amount allotted for the expenses of the Ministers and their staff should be exceeded. I have tabled this cut motion with another object. You must show to the entire official staff that the Government means business and that the highest office in the, State, the Secretariat, is also subjected to necessary retrenchment. Before dealing with other departments or other officers it is absolutely necessary to effect necessary retrenchments in the Secretariat and remove the unnecessary staff. In my opinion, it is quite possible to effect retrenchment and reduce the number of officers and the staff without interfering with the quantum or quality of the work. In the year 1941 when the Mysore Government was administering all the departments including those that were transferred to the Centre, there were 6 Secretaries and 14 Under Secretaries and Assistant Secretaries and necessarily as the number of Secretaries and Assistant Secretaries was limited, the relevant staff and the establishment also were limited to that number. But now the establishment has increased. I may state at once that the present ministry is not responsible for the huge staff in the Secretariat. Perhaps the Government with which I was associated is also responsible. Since then, the number of Secretaries has increased from six to ten or eleven, subject to correction. The number of Assistant and Under Secretaries at that time was fourteen and now it is about 26. While the number of Departments has gone down and the work has gone down, I find that the staff in the Secretariat remains the same, or I may even state that it has gone up. I have taken my figures from the Civil List. Taking these things into consideration, I feel that there is scope for a good deal of retrenchment in the Secretariat. Instead of ten or eleven Secretaries you can very well manage with half the number, as we were doing prior to 1940 when the work was heavier than now. There is scope to retrench the number of Assistant Secretaries also, having in view the amount of work at present. If you retrench a number of Secretaries and Assistant Secretaries, there will be a corresponding retrenchment in the establishment and staff. This will effect substantial savings. If retrenchment is effected in the Secretariat level and afterwards if it is followed in the district and taluk level, then, they will not have any reason to grumble. On the other hand, if you retrench in the lowest level, *i.e.*, the servants and other menials at the commencement and retain the high paid officers, then there will be dissatisfaction. That is not in the spirit of economy. Any retrenchment or any economy must not only be substantial but must also be effective. Retrenchment of one Head of the Department is equal to the retrenchment of perhaps forty menials.

Sri K. HANUMANTHAIYA (Chief Minister).—How can you retrench the Heads of Departments?

Janab J. MOHAMED IMAM.—I am putting a hypothetical question. If you are in a position to retrench an officer drawing Rs. 1,000 or Rs. 1,500, that will be a subtantial saving as against a similar amount which you can save by

(JANAB J. MOHAMED IMAM).

retrenching a number of menials. I would request the Finance Minister first of all to study what high offices which carry high salaries can be retrenched. But let him effect retrenchment here without prejudice to the work. The Government are the best judge in this respect. With courage and determination, let them have only that much of staff that is absolutely necessary in these hard days. I would also urge on him to take the retrenchment of the lower staff and menials, last. You can abolish one thousand peons. There will not be any substantial savings. On the other hand, a situation would be created where thousand families would be suffering. If you retrench three high offic rs getting a salary of 1,000 or 1,500 rupees each, then only there will be savings effected. The savings would be substantial and that too without the least trouble to society and the persons concerned.

I commend this proposition for the acceptance of this House. I am sure they will recognize the reasonableness of my arguments. My agrument covers three principles. Firstly, retrenchment must commence from the top. Secondly, retrenchment must commence from high offices, and thirdly, retrenchment must be applied last to the low paid servants and staff.

Mr. SPEAKER.—Cut motion moved:

"That the demand be reduced by Rs. 100."

Sri S. SRINIVASA IYENGAR (T.-Narsipur).—In supporting the cut motion moved by the Leader of the Opposition, I beg to place before this House a few points which I consider absolutely necessary before proceeding with the discussion. As it is, out of our revenues, we are sp nding nearly Rs. 21·31 lakhs for the maintenance of the Secretariat and Headquarters establishment, while we are spending about Rs. 34·5 lakhs for the maintenance of the district administration. However efficient the Secretariat may be, all issues that come to the Secretariat for decision originate from taluks. At present, the Government have thought of retrenching at the taluk level and not at the Secretariat level. Though some retrenchment is proposed at the Secretariat level, that retrenchment is not enough. It does not give us appreciable savings. I would like to stress on this occasion that the people of the State come into contact directly with Government only at the taluk level. At present our system of administration at the taluk level, I dare say, is not absolutely efficient. Our aim should be to see that the administration at the taluk level is improved. I may say that, in many of the taluk offices, the complement of Staff is not complete. Many times it will not be possible at the Secretariat level to arrive at decisions on fundamental things. In the circumstances, the expenditure that is incurred at the Secretariat level is too heavy and we are having a top-heavy administration. Every common man feels that the State is having a top-heavy administration. As such, retrenchment is absolutely necessary, and I wholeheartedly support the cut motion moved by Janab Mohamed Imam.

*ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ಸ್ವಾಮಿ, ಈ ಖೋತಾ ಸೂಚನೆಯು ಗತಕ್ಕದ್ದು B. C. F ಸಬ್ ಮೇಜರ್ ಬಾಬುಗಳನ್ನು ಬಿಟ್ಟು ಜನರಲ್ ಅಡ್ಮಿನಿಸ್ಟ್ರೇಷನ್‌ಗೆ 78 ಲಕ್ಷ 57 ಸಾವಿರ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದು ಬಡ್ಜೆಟ್ ಪ್ರಕಾರ ಹೇಳಿರುವುದನ್ನು ಕುರಿತು. B, C, F ಈ ಮೂರು ಬಾಬುಗಳೂ ಹೋದರೆ ಎಷ್ಟು ಹೋಗುತ್ತದೆಯೆಂದು ನೋಡೋಣ. B-ಸಂಸ್ಥಾನದ ಶಾಸನ ಸಭೆಗಳಿಗಾಗಿ 5 ಲಕ್ಷ, 40 ಸಾವಿರ; C. ಚುನಾವಣೆಗೆ 2 ಲಕ್ಷ 5[illegible] ಸಾವಿರ; ಮತ್ತು F ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್‌ಗೆ 34 ಲಕ್ಷ 50 ಸಾವಿರ ಇದೆ. ಈ ಮೂರು ಬಾಬುಗಳನ್ನೂ ಸೇರಿಸಿದರೆ ಒಟ್ಟು 42 ಲಕ್ಷ 40 ಸಾವಿರ ಆಗುತ್ತದೆ. 78 ಲಕ್ಷ 57 ಸಾವಿರದಲ್ಲಿ 42 ಲಕ್ಷ 40 ಸಾವಿರ ಹೋದರೆ ಉಳಿಯುವ 36 ಲಕ್ಷ 17 ಸಾವಿರ ರೂಪಾಯಿಗಳನ್ನು ಈ ಬಡ್ಜೆಟ್ ಪ್ರಕಾರ ಡಿಮ್ಯಾಂಡ್ ಕೇಳಬೇಕಾಗಿದೆ. ಹಾಗಿಲ್ಲದಿರುವುದರಿಂದ ಇದು ನನಗೆ ಅರ್ಥವಾಗಲಿಲ್ಲ. ಈ ಖೋತಾ ಸೂಚನೆಯಲ್ಲಿ ಸೂಚಿಸಿರುವ 28, 97, 700 ರೂಪಾಯಿಗಳಿಗೂ, ನನ್ನ ಲೆಕ್ಕಾಚಾರದ ಪ್ರಕಾರ ಕೇಳಬೇಕಾಗಿದ್ದ 36 ಲಕ್ಷ 17 ಸಾವಿರಕ್ಕೂ ಇರುವ ವ್ಯತ್ಯಾಸ 15 ಲಕ್ಷ 18 ಸಾವಿರದ 300; ಇಷ್ಟು ವ್ಯತ್ಯಾಸಕ್ಕೆ ಕಾರಣ ತಿಳಿಯಲಿಲ್ಲ. ಇದರಲ್ಲಿ ನನಗೆ ತಿಳಿಯುವ ಅರ್ಥವೇನೆಂದರೆ, ಈಗಿನ ಸರ್ಕಾರದವರು ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ 15 18,300 ರೂಪಾಯಿಗಳಷ್ಟು ರಿಟ್ರೆಂಚ್‌ಮೆಂಟ್ ಮಾಡಿದ್ದಾರೆ ಎಂಬುದು.

* Asterisk indicates that the speech has not been revised by the Member concerned.

ಇದು ನಿಶ್ಚಯವಾದರೆ ಅಥವಾ ಮಂತ್ರಿಗಳು ಒಪ್ಪಿಕೊಳ್ಳುವುದಾದರೆ.................

1-30 P.M.

Mr. SPEAKER.—This is for the remaining months and that is for the whole year.

ಶ್ರೀ ಎಂ. ಶಂಕರಲಿಂಗೇಗೌಡರು.—ಹಾಗಾದರೆ ಈಗ ಮೂರು ತಿಂಗಳಿಗೆ 15 ಲಕ್ಷ ರೂಪಾಯಿ ಖರ್ಚಾಗಿದೆ; 9 ತಿಂಗಳಿಗೆ 20 ಲಕ್ಷ ರೂಪಾಯಿ ಬೇಕು ಎಂದು ಅರ್ಥವಾಯಿತು, ಅಧ್ಯಕ್ಷರು ತಿಳಿವಳಿಕೆ ಕೊಟ್ಟ ಮೇಲೆ. ಈಗ ಎಲ್ಲರೂ ಹೇಳುವುದು ಏನೆಂದರೆ, ಎಕಾನಮಿ ಆಗಬೇಕು, ದುಡ್ಡು ಮಿಗಬೇಕು ಎಂದು. ದುಡ್ಡನ್ನು ಉಳಿಸಬೇಕೆಂದು ಏಕೆ ಹೇಳುತ್ತೇವೆ ಎಂದರೆ, ಸಂಬಳ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದಲ್ಲ; ಎಲ್ಲಾ ಇಲಾಖೆಗಳಲ್ಲೂ ಖೋತಾ ಮಾಡಿ. ನೀರಾವರಿ ಕಾಮಗಾರಿಗಳಿಗೆ ಸ್ವಲ್ಪ ದುಡ್ಡು ಒದಗಿಸಬೇಕು ಎಂದು. ಅದರಲ್ಲಿ ಸೆಕ್ರೆಟೇರಿಯಟ್ ಲೆಕ್ಕ ತೆಗೆದುಕೊಳ್ಳೋಣ. ಈಗ ಬಡ್ಜೆಟ್ ಪ್ರಕಾರ ಸೆಕ್ರೆಟರಿಗಳು 10 ಜನ ಇದ್ದಾರೆ. 3 ಜನ ಅಂಡರ್ ಸೆಕ್ರೆಟರಿಗಳಿದ್ದಾರೆ ಮತ್ತು 15 ಜನ ಅಸಿಸ್ಟೆಂಟ್ ಸೆಕ್ರೆಟರಿಗಳಿದ್ದಾರೆ. ಒಬ್ಬ ಅಸಿಸ್ಟೆಂಟ್ ಸೆಕ್ರೆಟರಿಯವರನ್ನು ತೆಗೆದು ಹಾಕಿದ್ದೀರಿ. ಮುದುಕರಾಗಿದ್ದು ರಿಟೈರ್ ಆದರೋ ಏನೋ ಗೊತ್ತಿಲ್ಲ. ನಾನ ಹೇಳುತ್ತೇನೆ: ಈ ಸೆಕ್ರೆಟೇರಿಯಟ್‌ನಲ್ಲಿ ಕೆಲಸ ಮಾಡುವುದಕ್ಕೆ ದಕ್ಷರಾಗಿರುವವರೆಲ್ಲರೂ ಸೇರಿದರೆ, ಚೀಫ್ ಸೆಕ್ರೆಟರಿಗಳನ್ನೂ ಸೇರಿಸಿಕೊಂಡು, 5 ಜನ ಸೆಕ್ರೆಟರಿಗಳು ಸಾಕು. ಕೆಲಸ ಮಾಡುತ್ತಾರೆ, ಮಾಡುವುದಿಲ್ಲ ಎಂದು ಅಲ್ಲ. ಬಂದ ಕಾಗದಗಳನ್ನು ಮೇಲೆ ಮೇಲೆ ಪೇರಿಸಿಕೊಂಡು ಹೋದರೆ ನಾವೇನು ಮಾಡುವುದಕ್ಕಾಗುತ್ತದೆ? ಅದಕ್ಕೆ ಹೊಣೆ ನಾವಲ್ಲ. ದೇಶವನ್ನು ಉದ್ಧಾರಮಾಡಬೇಕು ಎಂದು ಕೆಲಸ ಮಾಡಿದರೆ ಇಲ್ಲಿರತಕ್ಕ ಸೆಕ್ರೆಟರಿಗಳು ಡೆಲ್ಲಿ ಸೆಕ್ರೆಟರಿಯೇಟ್‌ನ ಸೆಕ್ರೆಟರಿಗಳಿಗೆ ಕಡಮೆ ಇಲ್ಲ. ಅವರೆಲ್ಲರೂ ಸೇರಿ ಬಹಳ ಕಷ್ಟಪಟ್ಟು ಕೆಲಸ ಮಾಡಿ ನೀರಾವರಿ ಕಾಮಗಾರಿಗಳಿಗೆ 1 ಲಕ್ಷ ರೂಪಾಯಿಗಳಷ್ಟು ಸೆಕ್ರೆಟೇರಿಯಟ್‌ನಿಂದ ಉಳಿಸಿಕೊಡಬಲ್ಲರು. ಆ ರೀತಿ ಮಾಡಿದರೆ ಅವರಿಗೆ ಒಳ್ಳೆಯ ಹೆಸರು ಬರುತ್ತದೆ. ಈಗಿರತಕ್ಕ ಮಂತ್ರಿಗಳು ರಾತ್ರಿ ಹಗಲು ಕೆಲಸಮಾಡಿದರೆ ಫೈಲು ಕಡಮೆಯಾಗುತ್ತದೆ. ರಾತ್ರಿ ಎಲ್ಲಾ ಕೆಲಸ ಮಾಡಿ ರೂ ಬಹಳ ಒಳ್ಳೆಯದು. (ಸಭೆಯಲ್ಲಿ ನಗು!) ರಾತ್ರಿ ಹಗಲು ಎಲ್ಲಾ ಕೆಲಸ ಮಾಡುವ ಉದ್ದೇಶದಿಂದಲೇ ನೀವು ಬಂದಿರುವುದು. ಈಗ ನಾನು ಹೇಳಿದ ರೀತಿ ಮಾಡುವುದಕ್ಕಾಗುವುದಿಲ್ಲ ಎಂದರೆ, 5 ಜನ ಸೆಕ್ರೆಟರಿಗಳಿಗೆ ಬದಲಾಗಿ, 3 ಜನ ಅಂಡರ್ ಸೆಕ್ರೆಟರಿಗಳ ಜೊತೆಗೆ ಇನ್ನಿಬ್ಬರನ್ನು ಕೊಟ್ಟು 5 ಜನ ಅಂಡರ್ ಸೆಕ್ರೆಟರಿಗಳು, 10 ಜನ ಅಸಿಸ್ಟೆಂಟ್ ಸೆಕ್ರೆಟರಿಗಳು ಕೆಲಸ ಮಾಡಬಹುದು. ಅವರಿಗೆ ಉತ್ತೇಜನ ಕೊಡಬೇಕಾಗುತ್ತದೆ. ಆ ತರಹ ಉತ್ತೇಜನ ಕೊಟ್ಟು ಅವರು ಕೆಲಸ ಮಾಡಬೇಕು ಎಂದು ಪ್ರಯತ್ನ ಪಟ್ಟರೆ ಕೆಲಸ ಆಗಬಹುದು. ಇದು ಆಗುತ್ತದೆಯೋ ಇಲ್ಲವೋ ಎಂದರೆ, ಆಗುವುದಿಲ್ಲ ಎಂದು ಸೆಕ್ರೆಟರಿಗಳು ಮಂತ್ರಿಗಳನ್ನು ಹೆದರಿಸಬಹುದು. ಮಂತ್ರಿಗಳು ನಾವೇನು ಮಾಡೋಣ ಎನ್ನಬಹುದು. ಆ ಸಮಯದಲ್ಲಿ ದಕ್ಷತೆ ಬೇಕು. 'ನೀವು ಇಲ್ಲದೇ ಇದ್ದರೆ ಹೊರಟು ಹೋಗಿ ಪಾರ್ಲಿಮೆಂಟರಿ ಸೆಕ್ರೆಟರಿಗಳು ಕೆಲಸ ಮಾಡುತ್ತಾರೆ, ಎಂದು ಹೇಳುವುದಕ್ಕೆ ಅವರನ್ನು ಟ್ರೈನ್ ಅಪ್ ಮಾಡಿ; ಅವರು ಕೆಲಸ ಮಾಡುತ್ತಾರೆ. ಅದಕ್ಕೇ ಪಾರ್ಲಿಮೆಂಟರಿ ಸೆಕ್ರೆಟರಿಗಳನ್ನು ಇಟ್ಟಿರುವುದು. ಸೆಕ್ರೆಟರಿಗಳು ಕೈಕೊಟ್ಟರೆ ಪಾರ್ಲಿಮೆಂಟರಿ ಸೆಕ್ರೆಟರಿಗಳು ಅವರ ಚಾರ್ಜ ತೆಗೆದುಕೊಂಡು ಕೆಲಸ ನಡೆಸಬೇಕು. ಈ ರೀತಿ ಸೆಕ್ರೆಟರಿಯೆಟ್‌ನಲ್ಲಿ ಖರ್ಚು ಕಡಮೆ ಮಾಡಿಯೇ ತೀರಬೇಕು. ಕಡಮೆ ಮಾಡದೇ ಇದ್ದರೆ ಯತ್ನವಿಲ್ಲ. ಒಬ್ಬಿಬ್ಬರು ಸೆಕ್ರೆಟರಿಗಳಂತೆಯೇ ಹೆಚ್ಚುಮಾಡಿ 34 ಜನರನ್ನು ಡೆಪ್ಯುಟಿಕಮಿಷನರು ಮತ್ತಿತರ ಕೆಲಸಗಳಿಗಾಗಿ ಹಾಕಿದ್ದಾರೆ. ಸ್ವಾಮಿ, ಹಿಂದಿನ ಕಾಲದಲ್ಲಿ ಒಬ್ಬ ಚೀಫ್ ಸೆಕ್ರೆಟರಿ ಬೆಳಗಿನ ಜಾವ 4 ಘಂಟೆ 5 ಘಂಟೆಗೆ ಎದ್ದು ಕೆಲಸ ಮಾಡಿ ತಿರುಗಿ ಆಫೀಸಿಗೆ ಬಂದು ಪ್ರತಿಯೊಬ್ಬರನ್ನೂ ನೋಡಿಕೊಳ್ಳುತ್ತಿದ್ದರು. ಈಗ ಅವರನ್ನು ನೋಡಬೇಕಾದರೆ 2 ರಿಂದ 3 ಘಂಟೆಯೊಳಗೆ ನೋಡಬೇಕೆಂದು ನಿಗದಿಮಾಡಿದ್ದಾರೆ. ಅಲ್ಲಿಯವರೆಗೆ ಏನು ಮಾಡುತ್ತಾರೋ ಈಶ್ವರನೇ ಬಲ್ಲ! ಬಂದವರಿಗೆ ಕುಳಿತುಕೊಳ್ಳುವುದಕ್ಕೆ ಅವಕಾಶವಿಲ್ಲ. ಈಗೇನೋ ಲೌಂಜ್ ಎಂದು ಮಾಡಿದ್ದೀರಿ, ನಿಂತೂ ನಿಂತೂ ಸಾಕಾಗಿ ಹೋಗಿ ಎಷ್ಟೋ ಜನ ಅವರನ್ನು ನೋಡುವುದು ಬೇಡವೇ ಬೇಡ ಎಂದು ಹೊರಟು ಹೋಗಿದ್ದಾರೆ. ನಾನು ಹೇಳುವುದೇನೆಂದರೆ ಈಗಿರತಕ್ಕ ಮಂತ್ರಿಗಳು 5 ಜನ ಪಾರ್ಲಿಮೆಂಟರಿ ಸೆಕ್ರೆಟರಿಗಳನ್ನು ನೇಮಕ ಮಾಡಿಕೊಂಡು-ಅವರಿಗೇನೂ ಇಷ್ಟು ಸಂಬಳ ಕೊಡಬೇಕಾಗಿಲ್ಲ, ಕೆಲಸ ಕಲಿಯುವುದಕ್ಕೆ 250 ರೂಪಾಯಿ ಕೊಟ್ಟರೆ ಸಾಕು—ಅವರಿಗೆ ಕೆಲಸ ಕಲಿಸಿ ಅನಂತರ ಅವರನ್ನು ಇಟ್ಟುಕೊಂಡು ಸೆಕ್ರೆಟರಿಗಳನ್ನು ಕಡಮೆ ಮಾಡಿ. ಹಾಗೆ ಮಾಡಿದರೆ ಖಂಡಿತವಾಗಿಯೂ 1 ಲಕ್ಷ ರೂಪಾಯಿ ಸೆಕ್ರೆಟರಿಯಟ್‌ನಿಂದ ಉಳಿಸಬಹುದು ಎಂದು ಹೇಳುತ್ತೇನೆ. ಇಷ್ಟು ಹೇಳಿ ಇಮಾಂರವರು ತಂದಿರತಕ್ಕ ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಸೆಕ್ರೆಟೇರಿಯಟ್‌ನಲ್ಲಿ ಸಿಬ್ಬಂದಿ ಖೋತಾ ಮಾಡಬೇಕೆಂದು ಈಗಾಗಲೇ ಅನೇಕ ವರ್ಷಗಳಿಂದಲೂ ಈ ಸಭೆಯ ಮುಂದೆ ನಿರ್ಣಯ ಬರುತ್ತಾ ಇದೆ. ಈಗ 10 ವರ್ಷಗಳ ಹಿಂದೆ 5 ಜನ ಮಾತ್ರ ಸೆಕ್ರೆಟರಿಗಳಿದ್ದರು. ಈಚೆಗೆ ಸರ್ಕಾರದ ಕಾರ್ಯಕಲಾಪಗಳೂ ಕೂಡ 1950ನೇ ಇಸವಿಯಿಂದ ಕಡಮೆ ಯಾಗಿವೆ. ಏಕೆಂದರೆ, 15 ಇಲಾಖೆಗಳು ಸರ್ಕಾರದ ಕೈತಪ್ಪಿ ಕೇಂದ್ರ ಸರ್ಕಾರಕ್ಕೆ ಹೋಗಿವೆ ಎಂದ ಮೇಲೆ ಖೋತಾ ಮಾಡಬೇಕಾದದ್ದು ಅತಿ ಜರೂರು. ಸಾಮಾನ್ಯವಾಗಿ ಸಿಬ್ಬಂದಿ ಕಡಮೆ ಮಾಡಿದರೆ ಎಫಿಷಿಯನ್ಸಿಗೆ ಕುಂದಕ ಬರುತ್ತದೆ ಎಂಬ ಅಭಿಪ್ರಾಯವಿದೆ. ಅದನ್ನು ಒಪ್ಪಿಕೊಳ್ಳಬೇಕು. ಆದರೆ ಕಡಮೆ ಮಾಡಿದಾಗ ಕೆಲಸ ಕಾರ್ಯಗಳಿಗೆ ಆಗತಕ್ಕ ಕುಂದಕವನ್ನೂ ಜಾಸ್ತಿ ಇದ್ದಾಗ ಆಗತಕ್ಕ ಕುಂದಕವನ್ನೂ ಹೋಲಿಸಿನೋಡಿದರೆ, ಜಾಸ್ತಿ ಸಿಬ್ಬಂದಿಮಾಡುವ ಕೆಲಸ ಕಾರ್ಯಗಳು ದಕ್ಷತೆಯಿಂದ ನಡೆಯುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಹೆಚ್ಚು ಜನ ಆಗಿ ಯಾರೂ ಕೂಡ ತಮ್ಮ ಮೇಲೆ ಜವಾಬ್ದಾರಿ ಹಾಕಿಕೊಳ್ಳುವುದಿಲ್ಲ. ಅವರ ಮೇಲೆ ಇವರು, ಇವರ ಮೇಲೆ ಅವರು ಹಾಕುವುದು ಆಗುತ್ತದೆ. ಅಲ್ಲದೆ ಸೋಮಾರಿತನಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಎಷ್ಟು ಮಟ್ಟಿಗೆ ಸಾಧ್ಯವೋ ಅಷ್ಟು ಮಟ್ಟಿಗೆ ಇಳಿಸಬೇಕಾದದ್ದು ಮೊದಲನೆಯ ಕರ್ತವ್ಯ. ಇಳಿಸಬೇಕಾದ್ದಕ್ಕೆ ಕಾರಣವೇನೆಂದರೆ: ಹಿಂದೆ ಎಷ್ಟೋ ಕೆಲಸ ನಡೆಸುತ್ತಾ ಇದ್ದರು. ಇವೊತ್ತು ಕೂಡ ಮಾಡುತ್ತಾ ಇದ್ದಾರೆ, ಅದನ್ನು ಪ್ರಶ್ನಿಸುವುದಿಲ್ಲ, ಆದರೆ ಇವೊತ್ತು ನಿಧಾನವಾಗುತ್ತಾ ಇದೆ. ಕಾಗದ ಪತ್ರಗಳು ಬಹಳ ಮಟ್ಟಿಗೆ ಕಳೆದು ಹೋಗುತ್ತಾ ಇವೆ. ಸೆಕ್ರೆಟೆರಿಯಟ್‌ನಲ್ಲಿ ಕಾಗದಗಳು ಸಿಕ್ಕುವುದಿಲ್ಲ ಎಂಬ ದೂರು ಇದೆ. ಯಾವ ಕಾಗದ ಕೇಳಿದರೂ ಹುಡುಕುತ್ತೇವೆ ಎಂದು ಹೇಳುತ್ತಾರೆ. ಈಚೆಗೆ ಬರುವುದಿಲ್ಲ.

Mr. SPEAKER.—That does not mean they are all lost.

ಶ್ರೀ ಬಿ. ಹುಚ್ಚೇಗೌಡರು.—ತಮ್ಮ ಅವಗಾಹನೆಗೂ ಬಂದಿರಬೇಕು. ಎಷ್ಟೋ ಅಕ್ವಿಸಿಷನ್ ರೆಕಾರ್ಡುಗಳು ಕಳೆದು ಹೋಗಿರುವುದು ಗೊತ್ತಿರಬೇಕು. ಅದನ್ನು ನಾನು ಸೂಚನೆ ಮಾಡಿದರೆ ತಪ್ಪಾಗುವುದಿಲ್ಲ. ಒಬ್ಬ ಅಸಿಸ್ಟೆಂಟ್ ಸೆಕ್ರೆಟೆರಿಯನ್ನು ಕಡಮೆ ಮಾಡಲಾಗಿದೆಯೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇನ್ನೂ ಅನೇಕರನ್ನು ಕಡಮೆ ಮಾಡುವುದಕ್ಕೆ ಅವಕಾಶವಿದೆ. ಏಕೆಂದರೆ ಇಲಾಖೆಗಳು ಕಡಮೆಯಾಗಿವೆ ಮತ್ತು ಕೆಲಸ ಕೂಡ ಬಹಳ ಕಡಮೆಯಾಗಿದೆ. ಅಲ್ಲದೆ ಹಿಂದೆ ಕಡಮೆ ಸಂಖ್ಯೆಯಲ್ಲಿ ಕೆಲಸ ಮಾಡುತ್ತಾ ಇದ್ದ ಅನುಭವ ಕೂಡ ಇದೆ. ಅಂಡರ್ ಸೆಕ್ರೆಟರಿ, ಅಸಿಸ್ಟೆಂಟ್ ಸೆಕ್ರೆಟರಿಗಳು ಒಂದಕ್ಕೆ ಎರಡರಷ್ಟಾಗಿರುವುದು ಅದಷ್ಟು ಜಾಗ್ರತೆ ಹೋಗಬೇಕೆಂದು ಹೇಳಿ, ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪನವರು (ಚಾಮರಾಜನಗರ).—ಅಧ್ಯಕ್ಷರೇ, ಜನಾಬ್ ಇಮಾಂರವರು ಮಂಡಿಸಿರತಕ್ಕ ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತಾ ಜೀವನ ಮಟ್ಟಕ್ಕಿಂತ ಅಧಿಕ ಸಂಬಳ ಸಾರಿಗೆಗಳನ್ನೂ ಭತ್ಯಗಳನ್ನೂ ಪಡೆಯುತ್ತಿರುವ ಉನ್ನತ ಅಧಿಕಾರಿಗಳ ಸಂಬಳ ಸಾರಿಗೆಗಳನ್ನು ಕಡಮೆ ಮಾಡಬೇಕೆಂದು ತಮ್ಮ ಮುಂದಿಡಲು ಇಷ್ಟ ಪಡುತ್ತೇನೆ. ಆಡಳಿತಕ್ಕೆ ಅಗತ್ಯವಿದ್ದಷ್ಟು ಇಲಾಖೆಗಳನ್ನು ಮತ್ತು ಅಧಿಕಾರಗಳನ್ನು ಇಟ್ಟುಕೊಳ್ಳುವ ಮತ್ತು ಕಾಲಕ್ಕನುಗುಣವಾಗಿ ಸಂಬಳ ಸಾರಿಗೆಗಳನ್ನು ಕೊಡುವ ಏರ್ಪಾಡನ್ನು ಸರ್ಕಾರದವರು ಒತ್ತಾಯ ಪೂರ್ವಕವಾಗಿ ಜಾರಿಗೆ ತರುವುದು ಅಗತ್ಯವೆಂದು ನಿವೇದಿಸಲು ಇಷ್ಟಪಡುತ್ತೇನೆ. ಇಲಾಖೆಗಳನ್ನು ಹೆಚ್ಚು ಮಾಡಿಕೊಂಡು ಕಾಗದ ಪತ್ರಗಳ ಕಾರ್ಖಾನೆಗಳನ್ನು ಮಾಡಿಕೊಂಡರೆ ನಾವು ಇಚ್ಛಾಪೂರ್ವಕವಾಗಿ ಯಾವ ಕೆಲಸವನ್ನು ಮಾಡಬೇಕೆಂದು ಇಷ್ಟಪಟ್ಟರೂ ಆ ಉದ್ದೇಶವನ್ನು ನೇರವೇರಿಸಲು ಸಾಧ್ಯವಿಲ್ಲದ ಹಾಗಾಗುತ್ತದೆ. ಈ ಕ್ಲಿಷ್ಟ ಸಮಸ್ಯೆಯನ್ನು ಪರಿಹರಿಸಲು ಜೀವನ ಮಟ್ಟಕ್ಕೆ ಅಧಿಕವಾದ ಸಂಬಳಸಾರಿಗೆಗಳನ್ನು ಪಡೆಯುತ್ತಿರುವವರಿಗೆ ಜೀವನ ಮಟ್ಟಕ್ಕೆ ಸರಿಯಾಗುವಂತೆ ಎಷ್ಟು ಬೇಕೋ ಅಷ್ಟು ಮಾತ್ರ ಸಂಬಳ ಸಾರಿಗೆಗಳನ್ನು ಕೊಡುವುದು ಒಂದು ಉಪಾಯ. ಎರಡನೆಯದು, ಇಲಾಖೆಗಳನ್ನು ಮತ್ತು ಅಧಿಕಾರಗಳನ್ನು ಕಡಮೆಮಾಡುವುದು. ಇದು ಅತ್ಯಗತ್ಯವಾದ ವಿಚಾರವಾದದ್ದರಿಂದ ಮತ್ತೊಮ್ಮೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅಷ್ಟೇ. ಈ ನೀತಿಯನ್ನು ಇಂದು ಸರ್ಕಾರದವರು ಅನುಸರಿಸಿಲ್ಲದಿರುವುದನ್ನು ನೋಡಿದರೆ, ವ್ಯಕ್ತಿಗಳಿಗಾಗಿ ಇಲಾಖೆಗಳು ಸೃಷ್ಟಿಯಾಗುತ್ತವೆಯೋ ಅಥವಾ ಇಲಾಖೆಗಳಿಗಾಗಿ ವ್ಯಕ್ತಿಗಳನ್ನು ಹುಡುಕುತ್ತಿದ್ದಾರೋ ಎಂಬ ಸಂಶಯ ಎದ್ದು ಕಾಣುತ್ತದೆ. ಹೀಗಿರುವಾಗ ನಮ್ಮ ಸರ್ಕಾರದವರು ಈ ನೀತಿಯನ್ನು ಬದಲಾಯಿಸಬೇಕೆಂದು ಒತ್ತಾಯ ಮಾಡದೆ ಗತ್ಯಂತರವಿಲ್ಲ. ದೇಶದ ಹಿತದೃಷ್ಟಿಯಿಂದ ಉನ್ನತಾಧಿಕಾರಿಗಳು ತಾವು ತಾವೇ ಮುಂದೆ ಬಂದು ತಮ್ಮ ಸಂಬಳ ಸಾರಿಗೆಗಳನ್ನು ಕಡಮೆ ಮಾಡಿಕೊಳ್ಳುವುದು ಉತ್ತಮವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಶ್ರೀಮಾನ್ ಕೆ. ತಿಪ್ಪೆರುದ್ರಯ್ಯನವರು ತಾವಾಗಿಯೇ ತಮ್ಮ ಸಂಬಳವನ್ನು ಖೋತಾ ಮಾಡಿಕೊಂಡಿರುವುದಾಗಿ ತಿಳಿದು ಬರುತ್ತದೆ. ಹಾಗಿದ್ದ ಪಕ್ಷದಲ್ಲಿ ನಿಜವಾಗಿಯೂ ಅವರು ಅಭಿನಂದನೀಯರು. ದೇಶವೇ ಅವರಿಗೆ ಚಿರಋಣಿ. ಆ ಆದರ್ಶವನ್ನು ದೇಶದ ಇತರ ಅಧಿಕಾರಿಗಳೂ ಅನುಸರಿಸಲೆಂದು ಈ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಲ್ಲದೆ, ಈಗಾಗಲೇ ಸ್ವಲ್ಪ ದಿವಸಗಳ ಹಿಂದೆ ವರದಿಯಾಗಿರುವಂತೆ, ಶ್ರೀಮಾನ್ ರಾಜಗೋಪಾಲಾಚಾರ್ಯರು ಸಂಬಳವನ್ನೇ ತೆಗೆದುಕೊಳ್ಳುತ್ತಿಲ್ಲವೆಂದು ತಿಳಿದು ಬಂದಿದೆ. ಮದ್ರಾಸ್ ಪ್ರಾಂತದ ಹಣಕಾಸಿನ ಪರಿಸ್ಥಿತಿಯನ್ನು ಪರಿಸಡಿಸಲೋಸುಗ ಈ ತೀರ್ಮಾನವನ್ನು ಮಾಡಿದ್ದಾರೆಂದು ತಿಳಿದಿದ್ದೇನೆ. ಅದೇ ಆದರ್ಶವನ್ನು ನಮ್ಮ ಮಂತ್ರಿಮಂಡಳದವರೂ ಅನುಸರಿಸಲಿ, ತನ್ಮೂಲಕ ದೇಶದ ಉನ್ನತಾಧಿಕಾರಿಗಳಿಗೆ ಮಾರ್ಗದರ್ಶಕರಾಗಲಿ ಎಂದು ದೇಶ ನಿರೀಕ್ಷಿಸುತ್ತದೆ ಎಂದು ಹೇಳುತ್ತಾ ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತೇನೆ.

Sri P. R. RAMAIYA (Basavangudi).—Mr. Speaker, Sir, though I am not supporting this cut motion, I wish to avail myself of this opportunity to sponsor the cause of low-paid officials of the Secretariat. The Bangalore City is full of low-paid and under-paid officials of the Government. They have held many conferences and they have waited in deputation several times on Government. This is a very urgent problem. It is the Government who have to set a high moral standard by keeping these officials contented and in comfort and they should consider it to be their first duty to see that the low-paid and under-paid officials are kept contented and comfortable to enable......

Sri B. HUTCHE GOWDA.—The cut motion is meant to reduce the number of officials, not reducing the pay of the officials.

Sri P. R. RAMAIYA.—I am aware of the scope of the cut motion. But I am only availing myself of this opportunity to place before the House the cause of the low-paid and under-paid Government officials. I invoke the sympathy of this House and the Chief Minister to the cause of these low-paid officials and see that Government satisfies the want of these people.

With regard to the number of people that have Government appointments, I am not going into that question. But, whatever may be the number of officials that Government are going to engage for their work, it is important to keep such officials contented. That is all I am going to say on this motion.

ಶ್ರೀ ಕೆ. ಹನುಮಂತಯ್ಯನವರು (ಮುಖ್ಯ ಮಂತ್ರಿಗಳು).—ಸ್ವಾಮಿ, ಈ ಖೋತಾ ನಿರ್ಣಯವನ್ನು ಜನಾಬ್ ಇಮಾಂರವರು ಸೂಚಿಸಿ ಶ್ರೀಮಾನ್ ಶ್ರೀನಿ

ಘಾಸಯ್ಯಂಗಾರ್‌ರವರೂ ಮತ್ತಿತರರೂ ಸಮರ್ಥನೆ ಮಾಡಿ ಮಾತನಾಡಿದ್ದಾರೆ. ನನಗೂ ಅವರಂತೆ ಒಪ್ಪಿಕೊಳ್ಳಬೇಕೆಂದೇ ಎನ್ನಿಸುತ್ತದೆ ; I feel like agreeing with them. Only I do not subscribe to the cut motion !

ಆ ದಿವಸ ನನ್ನ ಬಡ್ಜೆಟ್ ಭಾಷಣದಲ್ಲಿಯೇ ಈ ತರನಾಗಿ ಸಾಧ್ಯವಾದ ಕಡೆಗಳಲ್ಲೆಲ್ಲಾ ರಿಟ್ರೆಂಚ್‌ಮೆಂಟ್ ಮಾಡಬೇಕೆಂದಿದ್ದೇವೆಂದು ಹೇಳಿದ್ದೇನೆ. ಈಗಾಗಲೇ ಒಂದು ಸೆಕ್ರೆಟೆರಿ ಸ್ಥಾನವನ್ನು ಕಡಮೆ ಮಾಡಿದೆ. ಶ್ರೀ ಶಂಕರಲಿಂಗೇಗೌಡರು ಹೇಳಿದರು, 5 ಸೆಕ್ರೆಟೆರಿಗಳೇ ಸಾಕು ಎಂದು. ಈಗಿರತಕ್ಕ ಸಂಖ್ಯೆ ಒಂಭತ್ತು. ಇದನ್ನು ವಿಮರ್ಶಿಸಿ ನೋಡಿದ್ದರೆ, ಆಗ ಎಷ್ಟು ಮಟ್ಟಿಗೆ ಹೆಚ್ಚು ಕಡಮೆ ಮಾಡಬೇಕೆಂಬುದನ್ನು ಹೇಳಬಹುದೆಂದು ಕಾಣುತ್ತದೆ. ಈಗಿರುವವು : ಫೈನಾನ್ಷಿಯಲ್ ಸೆಕ್ರೆಟೆರಿ ಎಂದು ಒಂದು ಸ್ಥಾನ, ಲಾ ಸೆಕ್ರೆಟೆರಿಯೆಂದು ಒಂದು, ಚೀಫ್ ಸೆಕ್ರೆಟೆರಿಯೆಂದು ಒಂದು, ಪಿ. ಡಬ್ಲ್ಯೂ.ಡಿ. ಸೆಕ್ರೆಟೆರಿ ಒಂದು, ಲೋಕಲ್ ಸೆಲ್ಫ್ ಗೌರ್ನಮೆಂಟ್ ಸೆಕ್ರೆಟೆರಿ ಒಂದು, ರೆವೆನ್ಯೂ ಇಲಾಖೆಗೆ ಒಂದು..............

ಜನಾಬ್ ಜೆ. ಮಹಮದ್ ಇಮಾಂರವರು.—L.S.G. ಸೆಕ್ರೆಟೆರಿ ಬೇಕಾಗಿಲ್ಲ !

ಶ್ರೀ ಕೆ. ಹನುಮಂತಯ್ಯನವರು.—ಹಾಗಲ್ಲ. The District Boards and Municipalities are so large in number that the consequent correspondence actually requires a Secretary to tackle it.

ಈ ರೀತಿ ನೋಡುವುದಾದರೆ ಈ ಸೆಕ್ರೆಟೆರಿಗಳ ಸ್ಥಾನಗಳಲ್ಲಿ ಯಾವುದನ್ನೂ ತೆಗೆದುಹಾಕಿ ಐದಕ್ಕೆ ಇಳಿಸುವುದಕ್ಕಾಗುವುದಿಲ್ಲ. ತಮಗೆ ಗೊತ್ತಿರುವ ಹಾಗೆ 10 ಸೆಕ್ರೆಟೆರಿಗಳಿದ್ದುದನ್ನು ಒಂಭತ್ತು ಮಾಡಿದ್ದೇವೆ. ಇನ್ನೂ ಒಂದಾಗಲಿ, ಎರಡಾಗಲಿ ಕಡಮೆ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡೋಣ. ಆಮೇಲೆ ಅಸಿಸ್ಟೆಂಟ್ ಸೆಕ್ರೆಟೆರಿ ಮತ್ತು ಅಂಡರ್ ಸೆಕ್ರೆಟೆರಿಗಳ ಸ್ಥಾನಗಳ ಸಂಖ್ಯೆ 20 ಇದೆ. ಇದರಲ್ಲೂ ಎರಡು ಅಸಿಸ್ಟೆಂಟ್ ಸೆಕ್ರೆಟೆರಿಗಳು ಮತ್ತು ಒಬ್ಬರು ಅಂಡರ್ ಸೆಕ್ರೆಟೆರಿಗಳ ಸ್ಥಾನವನ್ನು ರಿಟ್ರೆಂಚ್ ಮಾಡಿದೆ.

ಜನಾಬ್ ಜೆ. ಮಹಮದ್ ಇಮಾಂರವರು.—1951ರ ಸಿವಿಲ್ ಲಿಸ್ಟ್ ಪ್ರಕಾರ ಸೆಕ್ರೆಟೆರಿಗಳ ಸ್ಥಾನ 26 ಎಂದಿದೆ. ಇತ್ತೀಚೆಗೆ ಕಡಮೆಯಾಗಿರಬಹುದು ; ಅದು ನನಗೆ ಗೊತ್ತಿಲ್ಲ.

ಶ್ರೀ ಕೆ. ಹನುಮಂತಯ್ಯನವರು.—Sir, many a time I have said, the Leader of the Opposition is far behind the times not only in his facts and figures but also in his ideas.

ಒಟ್ಟಿನಲ್ಲಿ, ಸೆಕ್ರೆಟೆರಿಯಟ್‌ನಲ್ಲಿ ಹೆಚ್ಚು ಸಂಖ್ಯೆಯಲ್ಲಿ ಇರತಕ್ಕಂಥ ಅಧಿಕಾರಿಗಳನ್ನು ಕಡಮೆ ಮಾಡತಕ್ಕಂಥಾದ್ದು ಸರ್ಕಾರದವರ ನೀತಿಯಾಗಿದೆ. ಆದರೆ, ಜನಾಬ್ ಇಮಾಂರವರೇ ಹೇಳಿದ ಹಾಗೆ, ದಕ್ಷತೆಗೆ ಊನ ಬಾರದಿರುವ ಹಾಗೆ ಆ ಸಂಖ್ಯೆಯನ್ನು ಇಡಬೇಕೆಂಬುದು ಎಲ್ಲರೂ, ಸರ್ಕಾರದವರೂ ಒಪ್ಪತಕ್ಕ ನೀತಿಯಾಗಿದೆ. ಆದ್ದರಿಂದ ಸೆಕ್ರೆಟೆರಿಗಳ ಸಂಖ್ಯೆಯನ್ನೂ ಮತ್ತು ಸಿಬ್ಬಂದಿಗಳ ಸಂಖ್ಯೆಯನ್ನೂ ಈ ದೃಷ್ಟಿಯಿಂದ, ದಕ್ಷತೆಗೆ ಚ್ಯುತಿ ಬಾರದಂತೆ ಮತ್ತು ಅನಾವಶ್ಯಕವಾದ ಅಧಿಕಾರ ವರ್ಗ ಇರದಂತೆ, ಎರಡನ್ನೂ ಹೋಲಿಸಿ ನೋಡಿ ಯಾವುದು ನ್ಯಾಯವೋ ಅದನ್ನು ಮಾಡೋಣ.

ಮಾನ್ಯ ಸದಸ್ಯರಾದ ಮಾದಪ್ಪನವರು, ಭಾಷಣ ಮಾಡಬೇಕೆಂಬ ಭರದಲ್ಲಿ, ಏನಾದರೂ ಒಂದು point ಸಿಕ್ಕಿದರೆ ಸಾಕು, ಮಂತ್ರಿಮಂಡಲದ ಮೇಲೆ ಹೇಳೋಣ ಎಂಬ ಆಸೆ ಮತ್ತು ಆತುರದಲ್ಲಿ—(ಅದು ಸ್ವಾಭಾವಿಕ)—ಒಂದು ಮಾತು ಹೇಳಿದರು. ಶ್ರೀಮಾನ್ ರಾಜಾಗೋಪಾಲಾಚಾರಿಯವರು ಸಂಬಳ ತೆಗೆದುಕೊಳ್ಳದೆ ಕೆಲಸಮಾಡುತ್ತಿದ್ದಾರೆ, ಅದೇ ರೀತಿಯಾಗಿ ನಾವೂ ಮಾಡಬೇಕೆಂದು ಹೇಳಿದರು. ಈ ವಿಷಯ ಪತ್ರಿಕೆಯಲ್ಲಿ ಬಂದಿದೆಯೆಂದು ಹೇಳಿದರು. ಒಂದು ವಿಷಯ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ನಾನು ಪಾರ್ಲಿಮೆಂಟಿನಲ್ಲಿದ್ದಾಗ, ಗವರ್ನರ್ ಜನರಲ್ ಆಗಿದ್ದವರಿಗೆ ಪೆನ್ಷನ್ ಕೊಡುವ ಸಂದರ್ಭದಲ್ಲಿ ಒಂದು ಬಿಲ್ಲು ಬಂತು. ಆ ಬಿಲ್ಲು ಬೇಡವೆಂದು ನಾನೇ ಹೇಳಿದೆ. ಈ ರೀತಿ ಪೆನ್ಷನ್‌ಗಳನ್ನು ಕೊಡುವುದು ನ್ಯಾಯವಲ್ಲ, ಆಕಸ್ಮಾತ್ತಾಗಿ ಗವರ್ನರ್ ಜನರಲ್ ಆಗಿದ್ದವರು, ಪ್ರೆಸಿಡೆಂಟ್ ಆಗಿದ್ದವರು ಇನ್ನೊಂದು ಕೆಲಸವನ್ನು ಒಪ್ಪಿಕೊಳ್ಳಬಹುದು ಎಂದು. ಪಾರ್ಲಿಮೆಂಟಿನಲ್ಲಿ ಇದನ್ನು ಪ್ರತಿಭಟಿಸಿದ ಸದಸ್ಯ ನಾನೊಬ್ಬನೇ ! ಕೊನೆಗೆ ಅದು ಪಾಸಾಗಿ income-tax free ಯಾಗಿ ಸಾವಿರ ರೂಪಾಯಿಗಳನ್ನು ಅವರಿಗೆ ಕೊಡಬೇಕೆಂದಾಯಿತು. ಎಲ್ಲರಿಗೂ ಗೊತ್ತಿರುವ ಹಾಗೆ ಯಾರೂ double T. A. ಅಥವಾ double salary ತೆಗೆದುಕೊಳ್ಳಕೂಡದೆಂದು ಒಂದು ನಿಯಮವಿದೆ. ಆ ಪ್ರಕಾರ ಮದ್ರಾಸಿನ ಮುಖ್ಯಮಂತ್ರಿಗಳು ಸಂಬಳ ತೆಗೆದುಕೊಳ್ಳದೆ ಬರೀ ಪೆನ್‌ಷನ್ನು ಯಾವ ರೀತಿ ಸಂದಾಯವಾಗುತ್ತಿದೆಯೋ ಆ ರೀತಿ ತೆಗೆದುಕೊಳ್ಳುತ್ತಿದ್ದಾರೆ ಎಂದು ನನ್ನ ಭಾವನೆ. ಆದ್ದರಿಂದ ವಿಷಯವನ್ನು ತಿಳಿದುಕೊಳ್ಳದೆ ಏನೋ ಒಂದು point ಸಿಕ್ಕಿತಲ್ಲಾ ಎಂದು ಅಪಾದನೆ ಮಾಡಿದರೆ ಅದರಲ್ಲೇನೂ ತಿರುಳಿರುವುದಿಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು.—ಅವರು ಮನಸ್ಸು ಮಾಡಿದ್ದರೆ ಪೆನ್ಷನ್ ಜೊತೆಗೆ ಸಂಬಳವನ್ನೂ ತೆಗೆದುಕೊಳ್ಳುತ್ತಿದ್ದರು.

ಶ್ರೀ ಕೆ. ಹನುಮಂತಯ್ಯನವರು.—ಬಹುಶಃ ಇಮಾಂ ಸಾಹೇಬರು ಅದೇ ರೀತಿ ಅನುಸರಿಸಿಕೊಂಡು ಹೋಗುತ್ತಿದ್ದಾರೆಂದು ಕಾಣುತ್ತದೆ.

Janab J. MOHAMAD IMAM.—ಹಾಗಲ್ಲ ; he is entitled to both.

ಶ್ರೀ ಕೆ. ಹನುಮಂತಯ್ಯನವರು.—Whether he is entitled to both or not, as I have already said, Government rules and traditions are there. You cannot draw double T. A. and double D. A. and double salaries.

ಎಲ್ಲರೂ ಸಂಬಳವಿಲ್ಲದೆ ಕೆಲಸ ಮಾಡಬೇಕೆಂಬ ವಾದವನ್ನು ಹೂಡಿದರೆ, ಅದನ್ನು ಗಮನಕ್ಕೆ ಕೂಡ ತೆಗೆದುಕೊಳ್ಳಬೇಕಾಗಿಲ್ಲವೆಂದು ಸಭೆಗೆ ನನ್ನ ವಿಜ್ಞಾಪನೆ. ಏನೋ ಮಂತ್ರಿಗಳಾಗಲಿ, ಸದಸ್ಯರಾಗಲಿ ಕೆಲವರು ಒಬ್ಬರ ಮೇಲೆ ಒಬ್ಬರು ಪ್ರೈಪೋಟಿಯ ಮೇಲೆ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕೆಂಬ ಆತುರದಲ್ಲಿ ಹಾಗೆ ಹೇಳಬಹುದು. ಆದರೆ ಸಂಬಳವಿಲ್ಲದೆ ಸಾವಿರಾರು ಅಧಿಕಾರಿಗಳ ಜೀವನ ಹೇಗೆ ನಡೆಯಬೇಕೆಂಬುದನ್ನು ಯೋಚನೆ ಮಾಡಿ ಮಾತನಾಡಬೇಕು. ಇನ್ನು ನಾನು ಉತ್ತರ ಹೇಳಬೇಕಾದ ವಾದಗಳಾಗಲಿ ಟೀಕೆಗಳಾಗಲಿ ಹೆಚ್ಚಾಗಿಲ್ಲ. ಒಟ್ಟಿನಲ್ಲಿ ಈ ಖೋತಾ ಸೂಚನೆಯನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸಿ ನನ್ನ ಭಾಷಣವನ್ನು ಪೂರೈಸುತ್ತೇನೆ.

Mr. SPEAKER.—The question is :

"That the demand be reduced by Rs· 100·.

The motion was negatived.

Sri B. RACHIAH.—I am not moving my cut motion, Sir·

Reservation of Government appointments for Scheduled castes candidates.

ಶ್ರೀ ಎಂ. ಚಿಕ್ಕಲಿಂಗಯ್ಯನವರು (ಮಳವಳ್ಳಿ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಖೋತಾ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸುತ್ತಾ ನಾನು ಕೆಲವು ಅಂಕಿ ಅಂಶಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ನನ್ನ ಖೋತಾ ನಿರ್ಣಯ ಈ ರೀತಿ ಇದೆ:

"That the demand under the head 25· General Administration (except the Sub-major heads B· C· and F) for Rs· 20,98,700 be reduced by Rs· 100 (to urge the necessity of impl menting the direction given in the Constitution of India with regard to the Government service to the Scheduled Caste candidates both in Gazetted and Non-Gazetted ranks, *viz.*, 12½ per cent)·

ಇದರಲ್ಲಿ ಶೇಕಡ 12½ ಎಂದು ಮುದ್ರಣವಾಗಿದೆ ನನ. ಅಭಿಪ್ರಾಯದಲ್ಲಿ ಇದು 16¾°/₀ ಎಂದಿರಬೇಕಾಗಿತ್ತು, ಆ ರೀತಿ ತಿದ್ದುಪಡಿ ಮಾಡಿಕೊಳ್ಳಬೇಕೆಂಬುದು ನನ್ನ ಸೂಚನೆ. ನಾನು ಹೇಳುವಾಗ ಹೇಗೆ 16¾°/₀ ಎಂಬುದನ್ನು ಹೇಳುತ್ತೇನೆ.

Sri A. BHEEMAPPA NAIK.—Sir the figure 12½ per cent may not be in consonance with the spirit of the Constitution and it is not laid down in the Constitution also. To that extent, I feel that the motion is not in order. The provision is that consistent with efficiency, reservation must be made in services. 12½ per cent or 16¾ per cent both in gazetted and non-gazetted ranks is not mentioned in the Constitu ion and as such this point cannot be taken up for consideration and it is not in order· This was provisionally admitted· I feel that this mav not be in order and it is for the Speaker to decide.

Mr. SPEAKER.—The objection raised by Sri A. Bheemappa Naik is that the Constitution does not prescribe or fix any percentage of Government appointments to be given to the Scheduled castes people. That is his objection. But the main object of the mover is to see that preference may be shown in recruiting these classes of people, among other things·

Sri A. BHEEMAPPA NAIK.—If that is the object, I have no objection.

Mr. SPEAKER.—The Hon'ble Mover need not insist upon the percentage.

ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ).—ಇಲ್ಲಿ ಅವರು ತಂದಿರುವ ಖೋತಾ ನಿರ್ಣಯದ ಪ್ರಕಾರ preference ಕೊಡಬೇಕೆಂದು ಅವರು ಹೇಳಿದ್ದಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಖಚಿತವಾಗಿ ಶೇಕಡ 12½ ಖುಷ್ಟು ಕೊಡಬೇಕೆಂದು ರಾಜ್ಯಾಂಗದಲ್ಲಿದೆ ಎಂದು ಹೇಳಿದ್ದಾರೆ. ಆದುದರಿಂದ ಈ ಖೋತಾ ನಿರ್ಣಯ ಸರಿಯಾಗಿಲ್ಲವೆಂದು ಕಾಣುತ್ತದೆ.

Mr. SPEAKER.—Article 335 runs as follows :

"The claims of the members of the Scheduled Castes and the Scheduled Tribes shall be taken into consideration, consistently with the maintenance of efficiency of administration, in the making of appointments to services and posts in connection with the affairs of the Union or of a State."

But his objection is, that the Member has not confined his cut motion to the Article. The Hon'ble Member has embodied the Government Order also in this cut motion. That is not admissible and that is their objection. What does the mover say to it?

Sri M. CHIKKLINGIAH.—I am not particular about the percentage for the present, Sir.

Mr. SPEAKER.—Then the Member can speak on the Demand after all the cut motions are over.

2 P.M.

Enforcing the provisions of the Removal of Civil Disabilities Act and the Mysore Temple Entry Authorisation Act.

Sri M. CHIKKALINGIAH.—Sir, I move :

That the demand under the head 25 General Administration.

(Except the sub-major heads B.C. and F.) for Rs. 20,98,700 be reduced by

Rs.100(to urge the necessity of enforcing the provisions of the Removal of the Civil Disabilities Act and the Mysore Temple Entry Authorisation Act.)

ಸ್ವಾಮಿ, ಈ ಖೋತಾ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತಾ ಮುಖ್ಯವಾದ ಒಂದೆರಡು ವಿಷಯಗಳನ್ನು ಈ ಮಾನ್ಯ ಸಭೆಯವರ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ. ಈ ಸಿವಿಲ್ ಡಿಸೆಬಿಲಿಟೀಸ್ ರಿಮೂವಲ್ ಆಕ್ಟ್ ಎಂಬುದು ತಮ್ಮೆಲ್ಲರಿಗೂ ಗೊತ್ತಿರತಕ್ಕದ್ದೇ ಆಗಿದೆ. ಹರಿಜನರಿಗೂ ಮತ್ತು ಇತರ ಸಾರ್ವಜನಿಕರಿಗೂ ಮಧ್ಯೆ ಇದ್ದಂಥ ಒಂದು ಅಸ್ಪೃಶ್ಯತೆಯನ್ನು ದೇಶದ ಹಿತ ದೃಷ್ಟಿಯಿಂದ ಮತ್ತು ಕಾನೂನಿನ ದೃಷ್ಟಿಯಿಂದ ಇದಿರತಕ್ಕುದು ನ್ಯಾಯವಾದುದಲ್ಲವೆಂದು, ಅದನ್ನು ತೆಗೆದುಹಾಕಬೇಕೆಂಬ ಉದ್ದೇಶದಿಂದ ನಮ್ಮ ಕಾನ್ಸ್ಟಿಟ್ಯೂಷನ್ನಿನಲ್ಲಿ ಈ ಬಗ್ಗೆ ಒಂದು ವಿಧಿಯನ್ನೇ ಅಡಕಮಾಡಿ, ಆ ಕಾನೂನನ್ನು ಅನುಸರಿಸಿ ಈಗ ಇದ್ದಂಥ ಅಸ್ಪೃಶ್ಯತೆಯನ್ನು ತೆಗೆದುಹಾಕಲಾಗಿದೆ. ಅಷ್ಟೇ ಅಲ್ಲದೆ ಈ ಕಾನೂನಿಗೆ ವಿರೋಧವಾಗಿ ಯಾರಾದರೂ ನಡೆದರೆ ಅವರಿಗೆ ಶಿಕ್ಷೆಯನ್ನು ಕೂಡ ವಿಧಿಸಬೇಕೆಂದು ಕಾನ್ಸ್ಟಿಟ್ಯೂಷನ್ನಿನಲ್ಲೇ ತಿಳಿಸಲಾಗಿದೆ. ಆದರೆ ಹೀಗೊಂದು ಕಾಗದದ ಮೇಲೆ ಮಾತ್ರ ಇದನ್ನು ಜಾರಿಗೆ ತಂದಿರುವುದಾಗಿರುತ್ತದೆಯೇ ಶಿವಾಯಿ ಕಾರ್ಯರೂಪದಲ್ಲಿ ಖಂಡಿತವಾಗಿಯೂ ನಡೆಯುತ್ತಿಲ್ಲವೆಂಬ ಅಂಶ ನಮ್ಮ ದಿನಚರಿ ಆಡಳಿತಗಳಿಂದ ಗ್ರಾಮಾಂತರ ಪ್ರವಾಸಿಗಳಾದ ನಮಗೆಲ್ಲಾ ಮನದಟ್ಟಾಗಿದೆ. ಈಗ ಹೀಗಿರುವುದು ಅಪಾರವಾದ ಜನಸಂಖ್ಯೆಯನ್ನುಳ್ಳ ಒಂದು ಜನಾಂಗದ ಹಕ್ಕಿಗೇ ಧಕ್ಕೆಯೊದಗಿದಂತಾಗಿದೆ. ಹೀಗೆ ಕಾನ್ಸ್ಟಿಟ್ಯೂಷನ್ನಿನಲ್ಲಿ ಅವಕಾಶವಿದ್ದರೂ, ಆ ರೀತಿ ಜನರು ನಡೆದುಕೊಳ್ಳದಿರುವುದು ಸಮಾಜದ ತಪ್ಪೋ ಅಥವಾ ಆ ಕಾನೂನನ್ನು ಸರಿಯಾಗಿ ಜಾರಿಗೆ ತರದೆ ತಪ್ಪಗಿರತಕ್ಕ ಆಡಳಿತ ವರ್ಗದವರ ತಪ್ಪೋ ನನಗೊಂದೂ ಗೊತ್ತಾಗುವುದಿಲ್ಲ.

ಇದರಲ್ಲಿ ಮುಖ್ಯವಾದ ವಿಚಾರಗಳು ಎರಡು ಇವೆ. ಸಿವಿಲ್ ಡಿಸೆಬಿಲಿಟೀಸ್ ರಿಮೂವಲ್ ಆಕ್ಟ್ ಪ್ರಕಾರ ಕೆಲವು ಸ್ಥಳಗಳಿಗೆ ಎಂದರೆ ಎಲ್ಲಾ ಆಫೀಸುಗಳು, ಮತ್ತೆ ಕೆಲವು ಸಾರ್ವಜನಿಕ ಸ್ಥಳಗಳು ಇವುಗಳಿಗೆ ಪ್ರವೇಶಿಸಲು ಈ ಆದಿಕರ್ಣಾಟಕ ಎಂದರೆ ನಿಮ್ನ ಸಂಗಡದವರಿಗೆ ಸಂಪೂರ್ಣ ಹಕ್ಕುಭಾಧ್ಯತೆಗಳನ್ನು ಕೊಟ್ಟಿದ್ದಾಗ, ಅದಕ್ಕೆ ಅವಕಾಶ ಕೊಡದೆ ಕಾನೂನಿಗೆ ವಿರೋಧವಾಗಿ ನಡೆದಂಥ ಸಂದರ್ಭಗಳು ಅನೇಕವಿವೆ. ಅನೇಕ ಸಂದರ್ಭಗಳಲ್ಲಿ ಅಂಥ ಹಕ್ಕು ಲೋಪವಾದ ಕಾಲದಲ್ಲಿ ಪೋಲೀಸಿನವರಿಗೆ ಬರಹದ ಮೂಲಕ ಫಿರ್ಯಾದನ್ನು ಕೊಟ್ಟಾಗ್ಗೆ ಅವರು ಆ ಕೇಸುಗಳನ್ನು ರಿಜಿಸ್ಟರು ಸಹ ಮಾಡದೆ ಉದಾಸೀನ ಮಾಡುತ್ತಿರುವುದರಿಂದ ಈ ಜನಾಂಗದವರಿಗೆ ಬಹಳ ತೊಂದರೆಯಾಗಿದೆ. ನಾನು ಈ ವಿಷಯಗಳನ್ನೆಲ್ಲಾ ಯಾವ ಒಂದು ದುರುದ್ದೇಶವನ್ನಿಟ್ಟುಕೊಂಡು ಹೇಳುತ್ತಿಲ್ಲ, ಅಥವಾ ಉತ್ಪ್ರೇಕ್ಷೆ ಮಾಡಿ ಹೇಳುತ್ತಲೂ ಇಲ್ಲ. ಇಡೀ ಭಾರತದಲ್ಲೇ ಹೆಚ್ಚು ಜನಭರಿತವಾದಂಥ ಈ ಜನಾಂಗದ ವಿಷಯದಲ್ಲಿ ಹೀಗೊಂದು ದುರ್ಭಾವನೆಯನ್ನಿಟ್ಟುಕೊಂಡು ಹೋಗುವುದರಿಂದ ಇದು ದೇಶದ ಹಿತದೃಷ್ಟಿಯಿಂದ ಸರಿಯಾದದ್ದಲ್ಲವೆಂಬುದನ್ನು ಸರ್ಕಾರದ ಗಮನಕ್ಕೆ ತಂದು ನಾವು ತಕ್ಕ ಪರಿಹಾರ ಮಾರ್ಗವನ್ನು ಹುಡಿಕಿಕೊಳ್ಳದೆ ಹೋದರೆ ನಾವು ಮನುಷ್ಯರೇ ಎಂದು ಭಾವಿಸಬೇಕಾಗಿದೆ.

Mr. SPEAKER.—Those things will not arise in this cut motion. These two Acts, the Hon'ble Member admits, are in force in the State. Whether they have been violated or not, and if there are any violations, whether punishment is prescribed or not, and whether action is being taken by the authorities to enforce those provisions or not, those are the matters which the Member can refer to, and he should not go on speaking in general terms.

ಶ್ರೀ ಎಂ. ಚಿಕ್ಕಲಿಂಗಯ್ಯನವರು.—ತಾವು ಹೇಳಿದ ಹಾಗೆ ಅಷ್ಟೇನೋ ಜಾರಿಯಲ್ಲಿದೆ. ಆದರೆ ಅದು ಕಾರ್ಯರೂಪಕ್ಕೆ ಬರಲಿಲ್ಲ ಎಂಬ ಅಂಶಗಳನ್ನು ಸರ್ಕಾರದವರ ಮುಂದೆ ಅರಿಕೆ ಮಾಡಿಕೊಳ್ಳಬೇಕಾಗಿದ್ದ ಕಾರಣ ಈ ವಿಚಾರಗಳಿಗೆ ನಾನು ಪ್ರವೇಶಿಸಬೇಕಾಯಿತು.

ಈಗ ಟೆಂಪಲ್ ಆಕ್ಟು ಜಾರಿಯಲ್ಲಿದೆ. ಇದು ತಮ್ಮೆಲ್ಲರಿಗೂ ಗೊತ್ತಿದೆ. ಆದರೂ ಅನೇಕ ದೇವಸ್ಥಾನಗಳಿಗೆ ಹರಿಜನರನ್ನು ಇನ್ನೂ ಬಿಡುತ್ತಿಲ್ಲ. ನನ್ನ ಸ್ವಂತ ಉದಾಹರಣೆಯನ್ನೇ ಹೇಳಬೇಕೆಂದರೆ, ನಮ್ಮ ಮಳವಳ್ಳಿ ಟೌನಿನಲ್ಲಿ ಒಂದು ದೊಡ್ಡ ದೇವಸ್ಥಾನವಿದೆ. ಅದರ ಪ್ರವೇಶಕ್ಕೆ ಇನ್ನೂ ಅವಕಾಶ ಕೊಟ್ಟಿಲ್ಲ. ಇದರಿಂದ ಆ ಪ್ರದೇಶದ ಅಂದರೆ ಟೌನ್ ಮತ್ತು ತಾಲ್ಲೂಕಾ ಮಳೆ ಇರತಕ್ಕ ಜನರು, ಇತರ ಕೋಮುಗಳವರ ಹಾಗೆ ಯಾವ ವಿಷಯದಲ್ಲೂ ಹರಿಜನರು ಹಿಂದೆ ಬಿದ್ದಿಲ್ಲದಿದ್ದರೂ ಅವರನ್ನು ಆ ದೇವಸ್ಥಾನಕ್ಕೆ ಪ್ರವೇಶಿಸಲು ಅವಕಾಶಕೊಡದೆ ಅಡ್ಡಿ ಪಡಿಸುತ್ತಿರುವುದರಿಂದ ಅವರಿಗೆಲ್ಲ ಬಹಳ ಖೇದವಾಗಿದೆ. ಈ ಪರಿಸ್ಥಿತಿ ಶೋಚನೀಯವಾಗಿದೆ.

ಶ್ರೀ ಕೆ. ಹನುಮಂತಯ್ಯನವರು (ಮುಖ್ಯಮಂತ್ರಿಗಳು).—ಸ್ವಾಮಿ, ಮಳವಳ್ಳಿ ತಾಲ್ಲೂಕಿನಲ್ಲಿರತಕ್ಕ ಹರಿಜನರು ಯಾವ ವಿಷಯದಲ್ಲೂ ಹಿಂದೆ ಬಿದ್ದಿಲ್ಲ ಎಂದು ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರು ಹೇಳುತ್ತಿರುವುದರಿಂದ, ಇನ್ನು ಮೇಲೆ ಅವರಿಗೆ ಮನೆಗಳಿಗಾಗಿ ಕೊಡುತ್ತಿರುವ ಸರ್ಕಾರಿ ಸಹಾಯವನ್ನು ಮತ್ತು ಅವರಿಗೆ ಉಚಿತವಾಗಿ ಜಮೀನು ವಗೈರೆ ಕೊಡುವುದನ್ನೆಲ್ಲಾ ಇನ್ನು ಮುಂದಕ್ಕೆ ಬಿಟ್ಟುಬಿಡಬಹುದೆಂದು ನಾನು ಹೇಳುತ್ತೇನೆ.

ಒಬ್ಬ ಸದಸ್ಯರು.—ಮಳವಳ್ಳಿಯಲ್ಲಿ ತಾವು ಹೇಳಿದ ದೇವಸ್ಥಾನ ಯಾವುದು ?

ಶ್ರೀ ಎಂ. ಚಿಕ್ಕಲಿಂಗಯ್ಯನವರು.—ನರಸಿಂಹಸ್ವಾಮಿ ದೇವಸ್ಥಾನ.

Mr. SPEAKER.—In that case, what to do ?

ಶ್ರೀ ಎಂ. ಚಿಕ್ಕಲಿಂಗಯ್ಯನವರು.—ಆದುದರಿಂದ ಈಗ ತಮ್ಮೆಲ್ಲರ ಮತ್ತು ಸರ್ಕಾರದ ಉದ್ದೇಶ ಮತ್ತು ಭಾರತ ರಾಜ್ಯಾಂಗದಲ್ಲಿ ಈ ಅಂಶವನ್ನು ಅಡಕಮಾಡಿ ಒಂದು ಕಾನೂನನ್ನೇ......... .....

Mr. SPEAKER.—That is true. It is the Hon'ble Member's complaint that he was not admitted. Has he preferred any complaint ? Has he brought it to the notice of the local authorities? The Member has not made out any case so far except quoting his own instance in support of this cut motion.

ಶ್ರೀ ಎಂ. ಚಿಕ್ಕಲಿಂಗಯ್ಯನವರು.—ಈಗ ತಾವು ಮಾಡಿರತಕ್ಕ ಕಾನೂನನ್ನು ಸರಿಯಾಗಿ ಜಾರಿಗೆ ಕೊಟ್ಟು ತನ್ಮೂಲಕ ಈ ಡಿಪ್ರೆಸ್ಡ್ ಕ್ಲಾಸಿನವರ ಮನಸ್ಸಿನಲ್ಲಿ ಉಂಟಾಗಿರತಕ್ಕ ಕ್ಲೇಶವನ್ನು ನಿವಾರಣೆ ಮಾಡಿ, ಸಾರ್ವಜನಿಕ ರಂಗದಲ್ಲಿ ಭಾಗ ವಹಿಸಲು ಇವರಿಗಿರತಕ್ಕ ಅಡ್ಡಿ ಅಡಚಣೆಗಳನ್ನು ತಪ್ಪಿಸುವಂತೆ ಮಾಡಲು ಸರ್ಕಾರದವರನ್ನು ಒತ್ತಾಯ ಪಡಿಸುವುದಕ್ಕಾಗಿ ಈ ಖೋತಾ ನಿರ್ಣಯವನ್ನು ನಾನು ಸಭೆಯ ಮುಂದೆ ಇಡುತ್ತೇನೆ.

Mr. SPEAKER -Cut motion moved.-

"That the demand be reduced by Rs. 100."

ಶ್ರೀ ಎಸ್. ಎಂ. ಮರಿಯಪ್ಪನವರು (ಹಿರಿಯಾಪಟ್ಟಣ).—ಮಾನ್ಯ ಅಧ್ಯಕ್ಷರೇ, ಈಗ ಶ್ರೀಮಾನ್ ಕೆ. ಚಿಕ್ಕಲಿಂಗಯ್ಯನವರು ಸಭೆಯ ಮುಂದೆ ಮಂಡಿಸಿರತಕ್ಕ ಖೋತಾ ಸೂಚನೆಯನ್ನು ನಾನು ಖಂಡಿಸುತ್ತೇನೆ. ಏತಕ್ಕೆಂದರೆ, ಈಗಾಗಲೇ ಈ ಸಂಬಂಧವಾಗಿ ರಚಿಸಿರತಕ್ಕ ಒಂದು ಕಾನೂನು ಜಾರಿಗೆ ಬಂದು ದೇಶದಲ್ಲಿ ಇಂದು ಜಾರಿಯಲ್ಲಿರುತ್ತೆ. ಮಹಾತ್ಮ ಗಾಂಧಿಯವರು ಎಂದು ಈ ಅಸ್ಪೃಶ್ಯತೆಯನ್ನು ನೀಗಬೇಕೆಂದು ಹೇಳಿದರೋ ಅಂದೇ ಇವರನ್ನೆಲ್ಲಾ ದೇವಸ್ಥಾನ, ಹೋಟಲು ಇತ್ಯಾದಿ ಸಾರ್ವಜನಿಕ ಸ್ಥಳಗಳಿಗೆ ಯಾವ ನಿರ್ಬಂಧವೂ ಇಲ್ಲದಂತೆ ಬಿಡಲಾಗುತ್ತಿದೆ. ಅದರಂತೆ ಇತ್ತೀಚೆಗೆ ಕಾನೂನುಗಳೂ ಜಾರಿಗೆ ಬಂದಿರುತ್ತವೆ. ಇಷ್ಟೆಲ್ಲಾ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದಾಗ್ಯೂ ಇವರು ದೇವಸ್ಥಾನದೊಳಕ್ಕೆ ಪ್ರವೇಶಿಸಲು ಅವಕಾಶವಾಗಿಲ್ಲವೆಂದು ಹೇಳುತ್ತಿರುವುದರಿಂದ, ನಾವೇನು ಇವರನ್ನು ಇನ್ನು ಕತ್ತು ಹಿಡಿದು ದೇವಸ್ಥಾನದೊಳಕ್ಕೆ ನೂಕಬೇಕಾಗಿದೆಯೋ ಏನೋ ಗೊತ್ತಾಗುವುದಿಲ್ಲ.

ನಾನು ಮೊನ್ನೆ ತಿರುಪತಿಗೆ ಹೋಗಿದ್ದೆ. ಆಗ ನಾನು ಕೆಲವು ಆದಿಕರ್ಣಾಟಕರನ್ನೂ ನನ್ನ ಜೊತೆಯಲ್ಲಿ ಅಲ್ಲಿಗೆ ಕರೆದುಕೊಂಡು ಹೋಗಿದ್ದೆ, ನಾನು ಆ ತಿರುಪತಿಗೆ ಹೋದನಂತರ ನನ್ನ ಜೊತೆಯಲ್ಲೇ ಬಂದಿದ್ದ ಆದಿಕರ್ಣಾಟಕರನ್ನೂ "ನೀವೂ ಬನ್ನಿ ದೇವಸ್ಥಾನದೊಳಕ್ಕೆ ಹೋಗೋಣ" ಎಂದು ನಾನು ಕರೆದಿದ್ದಕ್ಕೆ ಅವರು ಏನು ಹೇಳಿದರೆಂದರೆ—"ಅಯ್ಯೋ ಸ್ವಾಮಿ, ನಾವು ದೇವಸ್ಥಾನದೊಳಕ್ಕೆ ಹೋದರೆ, ಉರಿದು ಹೋದೇವು ! ನಮ್ಮ ಮೈ ಶುದ್ಧಿಯಿಲ್ಲ, ನಾವು ಬರುವುದಿಲ್ಲ, ತಾವೇ ಹೋಗಿಬನ್ನಿ" ಎಂದು ಹೇಳಿದರು. ಪರಿಸ್ಥಿತಿಯು ಹೀಗಿರುವಾಗ ನಾವು ಒಂದು ಕಾನೂನನ್ನು ತಂದು, ಅದರ ಮೂಲಕ ಕಡ್ಡಾಯವಾಗಿ ಇದನ್ನು ಮಾಡುವುದಕ್ಕಾಗುವುದಿಲ್ಲ.

ಷೆಡ್ಯೂಲ್ಡ್ ಕ್ಯಾಸ್ಟಿನಲ್ಲೇ ನಾಲ್ಕಾರು ಪಂಗಡಗಳಿರುತ್ತವೆ. ಆದಿಕರ್ಣಾಟಕ ಮತ್ತು ಆದಿದ್ರಾವಿಡ, ಈ ಇಬ್ಬರೂ ಸಾಮಾನ್ಯವಾಗಿ ಒಂದೇ ಜಾತಿಗೆ ಸೇರಿದವರೆಂದು ಕಾಣುತ್ತದೆ. ಆದರೂ ಇವರು ಒಬ್ಬರ ಮನೆಗೊಬ್ಬರು ಹೋಗುವುದಿಲ್ಲ, ಒಬ್ಬರು ನೀರು ಕುಡಿದ ಬಾವಿಯಲ್ಲಿ ಇನ್ನೊಬ್ಬರು ನೀರು ತರುವುದಿಲ್ಲ. ಒಬ್ಬರ ಮನೆಯಲ್ಲಿ ಮದುವೆಯಾದರೆ ಆ ಮತ್ತೊಂದು ಗುಂಪಿನವರು ಸೇರುವುದಿಲ್ಲ. ಹೀಗೆ ಅವರವರಲ್ಲೇ ಬಹಳ ವ್ಯತ್ಯಾಸಗಳೂ ಭಿನ್ನಾಂಶಗಳೂ ಇರುತ್ತವೆ. ಅಂಥವುಗಳನ್ನೇ ಅವರು ಇನ್ನೂ ಸರಿಪಡಿಸಿಕೊಳ್ಳಲು ಸಾಧ್ಯವಾಗಿಲ್ಲದೆ ಇರುವಾಗ, ತಮ್ಮ ಒಳ ಒಡಕುಗಳನ್ನೆಲ್ಲಾ ಮರೆತು ಬಿಟ್ಟು ಹೊರಗೆ ಅವರಿಗೆ ತೊಂದರೆಯಿದೆಯೆಂದು ಹೇಳುತ್ತಿರುವುದು ಸರಿಯಾದ ವಾದವಲ್ಲ. ಈಗಾಗಲೇ ಅವರನ್ನು ದೇವಸ್ಥಾನಗಳಿಗೆ ಬಿಡುತ್ತಿದ್ದೇವೆ; ಸಾರ್ವಜನಿಕ ಸ್ಥಳಗಳಲ್ಲೆಲ್ಲಾ ಅವರಿಗೆ ಅವಕಾಶ ಕೊಟ್ಟಿದ್ದೇವೆ. ಇಷ್ಟೆಲ್ಲಾ ಅನುಕೂಲತೆಗಳನ್ನು ಅವರಿಗೆ ಒದಗಿಸಿ ಕೊಟ್ಟಿದ್ದಾಗ್ಯೂ ಅವರು ಇನ್ನೂ ತೊಂದರೆ ಉಂಟಾಗುತ್ತಿದೆಯೆಂದು ಹೇಳಿಕೊಳ್ಳುವುದರಿಂದ ತೆಪ್ಪಗೆ ಇರತಕ್ಕ ಜನರನ್ನು ಎಚ್ಚರ ಮಾಡಿ ಅವರು ಇವರಿಗೆ ತೊಂದರೆ ಕೊಡಲಿ ಎಂಬ ಉದ್ದೇಶದಿಂದಲೇ ಇವರು ಭಾಷಣ ಮಾಡುತ್ತಿರುವಂತೆ ನನಗೆ ಭಾಸವಾಗುತ್ತಿದೆ. ಇಲ್ಲಿಯತನಕ ಅವರವರ ಒಳಭೇದಗಳನ್ನೇ ತಿದ್ದುಪಡಿ ಮಾಡಿಕೊಳ್ಳಲು ಅವರಿಗೆ ಸಾಧ್ಯವಾಗಿಲ್ಲ, ಇತ್ತಲಾಗಿ ಅವರು ಆರೋಪಣೆ ಮಾಡುತ್ತಿರುವುದಕ್ಕೆ ಒಂದಾದರೂ ನಿದರ್ಶನವನ್ನು ಕೊಟ್ಟಿಲ್ಲ. ಇದನ್ನೆಲ್ಲಾ ನೋಡಿದರೆ ಇವರು ಈ ಸಭೆಯಲ್ಲಿ ಸುಮ್ಮನೆ ಮಾತನಾಡಬೇಕೆಂಬ ಉದ್ದೇಶದಿಂದಲೇ ಇಂಥ ಒಂದು ಖೋತಾ ಸೂಚನೆಯನ್ನು ತಂದಿದ್ದಾರೆಂದು ಕಾಣುತ್ತದೆ. ಅವರಿಗೆ ನಾವು ಯಾವ ಭಿನ್ನಭೇದಭಾವವನ್ನೂ ತೋರಿಸುತ್ತಿಲ್ಲವೆಂಬುದಕ್ಕೆ ಈ ಸಭೆಯಲ್ಲಿ ನಾವು ಅವರೊಡನೆ ಬೆರತು ಕೆಲಸ ಮಾಡುತ್ತಿರುವುದೇ ಒಂದು ನಿದರ್ಶನ ಸಾಕು. ಹಾಗೆ ಅವರು ಹೇಳಿರತಕ್ಕ ನಡವಳಿಕೆಗಳು ಯಾವವೂ ಇಲ್ಲದಿರುವುದರಿಂದ ನಾನು ಈ ಖೋತಾ ನಿರ್ಣಯವನ್ನು ಖಂಡಿಸುತ್ತೇನೆ.

ಶ್ರೀ ಬಿ. ರಾಚಯ್ಯನವರು (ಯಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀ ಎಂ. ಚಿಕ್ಕಲಿಂಗಯ್ಯನವರು ತಂದಿರುವ ಈ ಖೋತಾ ನಿರ್ಣಯವನ್ನು ಸ್ವಾಗತಿಸುತ್ತ, ಅವರು ಇಂಥಾ ನಿರ್ಣಯ ತಂದಿದ್ದಕ್ಕಾಗಿ ನಾನು ಪ್ರಥಮತಃ ಅವರನ್ನು ಅಭಿನಂದಿಸುತ್ತೇನೆ. ಆದರೆ ಈ ಮೊದಲೇ ಖಂಡಿಸಿ ಮಾತನಾಡಿದ ಶ್ರೀಮಾನ್ ಎಸ್. ಎಂ. ಮರಿಯಪ್ಪನವರಿಗೆ ವಾಸ್ತವಾಂಶಗಳೇನಿರುತ್ತವೆ ಎಂಬುದನ್ನು ತಿಳಿಸಲು ನಾನೀಗ ಎದ್ದು ನಿಂತಿದ್ದೇನೆ. ಆ ಸಿವಿಲ್ ಡಿಸೆಬಿಲಿಟೀಸ್ ರಿಮೂವಲ್ ಆಕ್ಟಿನಲ್ಲಿ ಕೇವಲ ಒಂದೆರಡು ವಿಚಾರಗಳನ್ನು ಮಾತ್ರ ಕಾಗ್ನೈಜಬಲ್ ಅಫೆನ್ಸಾಗಿ ಮಾಡಿದ್ದಾರೆ. ಆದರೆ ಸವರ್ಣ ಹಿಂದುಗಳಾದ ತಾವೆಲ್ಲರೂ ನಮಗೆ ಇಲ್ಲಿ ಮತ್ತು ಆ ಕ್ರಸೆಂಟ್ ಭವನದಲ್ಲಿ ಯಾವ ಭೇದಗಳೂ ಇಲ್ಲದಂತೆ ಎಲ್ಲರೂ ಅಕ್ಕಪಕ್ಕದಲ್ಲೇ ಕುಳಿತುಕೊಂಡು ಕೆಲಸ ಮಾಡುವಂಥ ಸಮಭಾವನೆಯನ್ನು ತೋರಿಸುತ್ತಿರುವುದಕ್ಕೆ ನಾವೆಲ್ಲರೂ ತಮಗೆ ಚಿರಋಣಿಗಳಾಗಿದ್ದೇವೆ. ಆದರೆ ಇದೇ ಮೈತ್ರೀಯ ಭಾವನೆಯನ್ನೂ ಮತ್ತು ಪ್ರೀತಿಯನ್ನೂ ಹಳ್ಳಿಗಾಡಿನಲ್ಲೆಲ್ಲಾ ಎಲ್ಲರೂ ತೋರಿಸುತ್ತಿದ್ದರೆ ಈ ದಿವಸ ನಾವಿಲ್ಲಿ ಇಂಥ ನಿರ್ಣಯವನ್ನು ತರತಕ್ಕ ಆವಶ್ಯಕತೆ ಇರಲಿಲ್ಲ. ಆದರೆ ಮಾನ್ಯ ಮರಿಯಪ್ಪನವರ ಊರಿನಲ್ಲೇ ಎಷ್ಟು ಭೇದಭಾವನೆಗಳನ್ನು ತೋರಿಸಿ ಅಲ್ಲಿರತಕ್ಕ ಆದಿಕರ್ಣಾಟಕರನ್ನು ಊರಿನಿಂದಾಚೆ ಇಟ್ಟಿರತಕ್ಕದ್ದು ಅವರಿಗೆ ಗೊತ್ತಿದ್ದರೂ ಸಹ ದೇವಸ್ಥಾನಕ್ಕೆ ಎಲ್ಲೆಲ್ಲಿ ಹಾಗೆ ಬಿಡಲಿಲ್ಲ ಎಂಬುದಕ್ಕೆ ನಿದರ್ಶನ ಕೊಡಬೇಕೆಂದು ಹೇಳಿದರು. ಆದರೆ ನಮ್ಮ ಮಂತ್ರಿಗಳೊಬ್ಬರ ವಿಚಾರದಲ್ಲೇ ಹಿಂದೆ ಇಂಥ ಒಂದು ಪ್ರಸಂಗ ನಡೆದಿತ್ತೆಂಬುದನ್ನು ಪತ್ರಿಕೆಗಳ ಮೂಲಕ ಓದಿ ತಿಳಿದುಕೊಂಡಿದ್ದೇನೆ.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ನಾನು ಶ್ರವಣಬೆಳಗೊಳಕ್ಕೆ ಹೋಗಿಯೇ ಇರಲಿಲ್ಲ.

ಶ್ರೀ ಬಿ. ರಾಚಯ್ಯನವರು.—ನಮ್ಮ ತಾಲ್ಲೂಕಿನಲ್ಲೇ ಉದಾಹರಣೆ ಕೊಡಬಹುದು. ನಾನೇ ಕರೆದುಕೊಂಡು ಹೋಗಿರುವ ಕಡೆ ಎಷ್ಟೋ ತೊಂದರೆಯಾಗಿದೆ. ಆದ್ದರಿಂದ ಪೋಲೀಸು ರಕ್ಷಣೆ ಕೊಡಬೇಕು, ಆ ರೀತಿ

ಕೊಡದೆ ಇರುವುದರಿಂದ ತೊಂದರೆಯಾಗಿದೆ ಎಂದು ಈ ಮೂಲಕ ಹೇಳುತ್ತಿದ್ದೇನೆ.

ಎರಡನೆಯದಾಗಿ, ನೀರಿನ ತೊಂದರೆ. ನೀರು ತರಲು ಹೋದರೆ 'ಹೊರಗೆ ಹೋಗಿ, ದೂರ ಇರಿ' ಎಂದು ಹೇಳುತ್ತಾರೆ. ಚಾಮರಾಜನಗರದ ತಾಲ್ಲೂಕು ಕರಿಯನ ಕಟ್ಟೆ ಕೆರೆಯಲ್ಲಿ ನೀರನ್ನು ತೆಗೆದುಕೊಳ್ಳಲು ಆಗುವುದಿಲ್ಲ. ನಿಮ್ಮ ವರ್ಗದ ಕಮಿಷನರು ಬಂದಾಗ ನೀರು ತೆಗೆದುಕೊಳ್ಳಲು ಮೈಸೂರು ತಾಲ್ಲೂಕು ತಾಳಲೂರು ಕೆರೆಗೆ ಹೋದಾಗ ದೊಣ್ಣೆ, ಕತ್ತಿ ಹಿಡಿದುಕೊಂಡು ನಿಂತರು. ಈ ವಿಚಾರದಲ್ಲಿ ಮಹಜರು ನಡೆದು ಈಗಾಗಲೇ ಸರ್ಕಾರಕ್ಕೆ ವರದಿ ಕೊಟ್ಟಿರಬೇಕು. ನಮಗೆ ಸಿವಿಲ್ ಡಿಸ್ ಎಬಿಲಿಟೀಸ್ ಆಕ್ಟ್, ದೇವಾಲಯ ಪ್ರವೇಶದ ಮಸೂದೆ ಮುಂತಾದ ಕಾನೂನುಗಳ ಮೂಲಕ ಅನುಕೂಲ ಕಲ್ಪಿಸಿದ್ದರೂ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಶಕ್ತಿ, ರಕ್ಷಣೆ ಬೇಡವೆ? ಬಹಳ ಮಟ್ಟಿಗೆ ಸಕಾಲದಲ್ಲಿ ರಕ್ಷಣೆ ಸಾಕಷ್ಟು ಸಿಕ್ಕುತ್ತಿಲ್ಲ ಎಂದು ಈ ಖೋತಾ ನಿರ್ಣಯ ತಂದು ಈ ಮೂಲಕ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳಬೇಕಾಗಿದೆ.

ಮೂರನೆಯದಾಗಿ, ನಮ್ಮಲ್ಲಿ ಸೌಹಾರ್ದವಿಲ್ಲವೆಂದು ಹೇಳುವುದು ಸತ್ಯಕ್ಕೆ ದೂರವಾಗಿದೆಯೆಂದು ಹೇಳಬೇಕಾಗಿದೆ. ಅನೇಕ ಕಡೆ ಸಿವಿಲ್ ಮ್ಯಾರೇಜ್ ಆಕ್ಟ್ ಪ್ರಕಾರ ನಮ್ಮಲ್ಲಿ ಮದುವೆ ಮಾಡಿಕೊಂಡಿದ್ದಾರೆ, ಸೋಷಿಯಲ್ ಮ್ಯಾರೇಜ್ ಆಗಿದೆ. ಆದರೆ ಹರಿಜನರಿಗೆ ಪ್ರತ್ಯೇಕ ಬಾವಿ ಬೇಡ, ಪ್ರತ್ಯೇಕ ಕೆರೆ ಬೇಡ, ಸಾರ್ವಜನಿಕವಾದ ಬಾವಿಗಳೇ ಸಾಕು ಎಂದು ಒಂದು ಕಡೆ ಹೇಳುತ್ತಾರೆ. ಈ ರೀತಿ ಒಂದು ಪಿಶಾಚಿ ಮನೋಭಾವ ನಮ್ಮ ದೇಶದ ಜನರಿಗೆ ಉಂಟಾಗಿ ನಮ್ಮನ್ನು ಸಾರ್ವಜನಿಕ ಬಾವಿಗಳಿಗೆ ಬಿಡುವ ಹಾಗೂ ಇಲ್ಲ, ಬೇರೆ ನಮಗಾಗಿ ಬಾವಿಗಳನ್ನು ತೆಗೆಯಿಸಿಕೊಡುವುದಕ್ಕೂ ಅಡ್ಡಿ ಬರುತ್ತಾರೆ. ಹೀಗಾಗಿ ನಾವು ಒದ್ದಾಡಬೇಕಾಗಿದೆ. ನೋಡುವುದಕ್ಕೆ ಒಳ್ಳೆಯವರಂತೆ ಕಂಡರೂ ಈ ಪ್ರದೇಶದಲ್ಲಿ ನಮ್ಮನ್ನು ಪ್ರಾಣಿಗಳಿಗಿಂತ ಕಡೆಯಾಗಿ ಕಾಣುತ್ತಾರೆ. ನಮ್ಮ ರಾಷ್ಟ್ರ ಪ್ರಗತಿಯಾಗುವುದಕ್ಕೆ ಸೌಹಾರ್ದದಿಂದ ನಡೆಯಬೇಕು ಎಂದು ಹೇಳುವಾಗ ಈ ಸಭೆಯಲ್ಲಿರುವ ಸದಸ್ಯರು ಈ ವಿಚಾರದಲ್ಲಿ ಹೆಚ್ಚು ಗಮನ ಕೊಟ್ಟು ಕೆಲಸ ಮಾಡಬೇಕು. ಹರಿಜನರ ಉದ್ಧಾರವಾಗಬೇಕೆಂದು ಮಹಾತ್ಮ ಗಾಂಧಿಯವರೂ ಹೇಳುತ್ತಿದ್ದರು. ಅವರ ಆತ್ಮಶಾಂತಿಗಾದರೂ ಮಾನ್ಯ ಸದಸ್ಯರು ದುಡಿಯಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—I find it extremely difficult to find out what exactly is the grievance in this case. They have not made out a case, so far as the cut motion is concerned. Their rights are recognized in those two Acts. For any violation of the provisions of those Acts punishments are also prescribed. If Sri M. Chikkalingiah is not allowed to a particular temple, he is at liberty to prefer a complaint and see that his rights are respected. I do not think that there is such a great need for other Members to take part in this debate and spend the time of the House.

ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ಅವರು ಹೇಳಿರುವುದಕ್ಕೆ ನಾವು ಸ್ವಲ್ಪ ಉತ್ತರ ಕೊಡಬೇಕಾಗಿದೆ.

Mr. SPEAKER.—I quite understand the Hon'ble Member's feelings. I request the Chief Minister to answer.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಇದು ಬಹಳ ಮುಖ್ಯವಾದುದು. ದೇಶದಲ್ಲಿ ಅವರು 1/6 ಭಾಗದ ಜನಸಂಖ್ಯೆಯುಳ್ಳವರಾಗಿದ್ದಾರೆ.

Mr. SPEAKER.—All those facts are recognized.

ಶ್ರೀ ಬಿ. ಹುಚ್ಚೇಗೌಡರು.—ಯಾವ ರೀತಿ ಅವರಿಗಾಗಿ ಮಾಡಿರುವ ಆಕ್ಟುಗಳನ್ನು ಜಾರಿಗೆ ಕೊಡಬಹುದೆಂಬುದನ್ನು ಸೂಚಿಸಲು ಈ ಸೂಚನೆ ಬಂದಿದೆ.

Mr. SPEAKER.—If the House wants to spend some more time on this cut-motion, Ihave no objection.

*ಶ್ರೀ ಎಂ. ಶಂಕರಲಿಂಗೇಗೌಡರು.—ಸ್ವಾಮಿ, ನನ್ನ ಮಿತ್ರರಾದ ಶ್ರೀ ಚಿಕ್ಕಲಿಂಗಯ್ಯನವರು ಮತ್ತು ಶ್ರೀ ರಾಚಯ್ಯನವರು ತಮ್ಮ ಪಂಗಡದವರನ್ನು ದೇವಸ್ಥಾನಕ್ಕೆ ಬಿಡುತ್ತಿಲ್ಲ ಎಂದು ಹೇಳಿದರು. ನಮ್ಮ ನಾಗಮಂಗಲದಲ್ಲಿ ಮುಳುಕಟ್ಟಮ್ಮನ ಒಂದು ದೇವಸ್ಥಾನ ಇದೆ. ಅಲ್ಲಿ ಅವರ ಪಂಗಡದವರೇ ಪೂಜಾರರು. ಅವರ ಹತ್ತಿರಹೋಗಿ ನಾವು ತೀರ್ಥಪ್ರಸಾದ ತೆಗೆದುಕೊಂಡು ಬರುತ್ತಿದ್ದೇವೆ. ದೇಶದಲ್ಲಿ ಅನೇಕರು ಬರುತ್ತಿದ್ದಾರೆ. ಆ ದೇವರಿಗೆ ಬಹು ಜನರು ನಡೆದುಕೊಳ್ಳುತ್ತಾರೆ. ಹೀಗಿರುವಾಗ ನಮ್ಮಗಳನ್ನು ಈ ರೀತಿ ದೂರುವುದು ಸರಿಯಲ್ಲ. ಎಲ್ಲೋ ಸ್ವಲ್ಪ ತೊಂದರೆ ಇದ್ದರೆ ಅದನ್ನು ದೊಡ್ಡದುಮಾಡಿ ನಮ್ಮ ಮೇಲೆ ಹೊರೆ ಹೊರಿಸುವುದು ಸೂಕ್ತವಲ್ಲ. ಈ ದಿವಸ ಬೇಕಾದರೆ ಶ್ರೀ ಚಿಕ್ಕಲಿಂಗಯ್ಯನವರು, ಶ್ರೀ ರಾಚಯ್ಯನವರು ಮತ್ತು ಮಾನ್ಯ ಮಂತ್ರಿಗಳು ಈ ಮೂರುಜನರೂ ನನ್ನ ಜೊತೆಯಲ್ಲಿ ಬರಲಿ, ನಮ್ಮ ಮುಜರಾಯಿ ದೇವಸ್ಥಾನಕ್ಕೆ ಬಿಡಿಸುತ್ತೇನೆ. ಅಲ್ಲಿಗೆ ಬರುವವರು ಮೊದಲು ಮೀಸಲು ತರಬೇಕಾದದ್ದು ಅಲ್ಲಿನ ಪದ್ಧತಿ. ಸಾಮಾನ್ಯವಾಗಿ ಆ ರೀತಿ ತರುವವರು ಆದಿಕರ್ಣಾಟಕರೇ ಹೊರತು ಬೇರೆಯವರಲ್ಲ. ಆದ್ದರಿಂದ ನಮ್ಮಮೇಲೆ ವೃಥಾ ಅಪನಂಬಿಕೆಯಿಂದ ಆರೋಪಣೆ ಮಾಡಬಾರದು. ಒಂದುವೇಳೆ ಎಲ್ಲಾದರೂ ತೊಂದರೆಯಾದ ಪಕ್ಷದಲ್ಲಿ ಯಾರು ತೊಂದರೆ ಮಾಡಿದ್ದಾರೋ ಅವರ ಮೇಲೆ ದೂರು ಕೊಡಲಿ, ಆಯಾ ಕ್ಷೇತ್ರಗಳಲ್ಲಿರುವ ಸದಸ್ಯರುಗಳು ಅವರಿಗೆ ಸಹಾಯ ನೀಡಲಿ, ಒಂದುವೇಳೆ ಅವರು ಸಹಾಯ ಮಾಡದಿದ್ದರೆ ಆಗ ಕೇಳಿದರೆ ಹೇಳಬಹುದು. ಈಗ ಸಿವಿಲ್ ಡಿಸ್ ಎಬಿಲಿಟೀಸ್ ಆಕ್ಟ್, ದೇವಾಲಯ ಪ್ರವೇಶದ ಮಸೂದೆ, ಇವೆಲ್ಲಾ ಜಾರಿಯಲ್ಲಿವೆ. ಅವುಗಳ ಪ್ರಕಾರ ಅನುಕೂಲತೆಯನ್ನು ಪಡೆಯಬಹುದಾಗಿದೆ. ಆದ್ದರಿಂದ ನಮ್ಮ ಮೇಲೆ ಆರೋಪಣೆ ಹೊರಿಸಿ ಸುಮ್ಮನೆ ಮಾತಾಡಿದರೆ ಬಹಳ ಅಸಮಾಧಾನವಾಗುತ್ತದೆ ಎಂದು ತಿಳಿಸಬೇಕಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಸ್ವಾಮಿ, ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತಾ ಮಾನ್ಯ ಸದಸ್ಯರಲ್ಲಿ ಒಂದು ವಿಜ್ಞಾಪನೆ ಮಾಡುತ್ತೇನೆ.....................

ಶ್ರೀ ಕೆ. ಹನುಮಂತಯ್ಯನವರು (ಮುಖ್ಯ ಮಂತ್ರಿಗಳು).—ಈಗ ತಾವು ಅಪ್ಪಣೆ ಕೊಡಿಸಿದಹಾಗೆ ಚರ್ಚೆ ಸಾಕಾಗಿದೆ. ಆ ಪಕ್ಷದಲ್ಲಿ ಒಬ್ಬರು ಅಭಿಪ್ರಾಯವನ್ನು ಸೂಚಿಸಿದ್ದಾರೆ.

(ಶ್ರೀ ಕೆ. ಹನುಮಂತಯ್ಯನವರು.)

As I said at the beginning, the opposition party has to develop certain conventions. I suppose they have brought to the notice of the House whatever their greievances are. If every Member of the opposition party goes on talking on the same question, it is not proper, and therefore, I may be allowed to reply.

Mr. SPEAKER.—That is what I said.

ಶ್ರೀ ಬಿ. ಹುಚ್ಚೇಗೌಡರು.—ಮುಖ್ಯವಾಗಿ ಈ ಸಭೆಯಲ್ಲಿರುವವರೆಲ್ಲರೂ ಈ ನಿರ್ಣಯದ ವಿಚಾರದಲ್ಲಿ ಸಹಾನುಭೂತಿ ತೋರಿಸುವುದು ಕರ್ತವ್ಯವೆಂದು ಭಾವಿಸುತ್ತೇನೆ. ನಿಜವಾಗಿಯೂ ಈ ನಿರ್ಣಯವನ್ನು ತಂದಿರುವ ಶ್ರೀ ಚಿಕ್ಕಲಿಂಗಯ್ಯನವರು ಜನರು ಆ ಗೌರವವನ್ನೂ ಮತ್ತು ಅವಮಾನಕರವಾದ ನಡವಳಿಕೆಗಳನ್ನೂ ಅನುಭವಿಸಿ ಚಿಂತೆಪಟ್ಟಿರುವುದನ್ನು ನೋಡಿ ಇದನ್ನು ತಂದಿದ್ದಾರೆ. ಹರಿಜನರಿಗೆ ಸಾರ್ವಜನಿಕ ಬಾವಿಗಳಲ್ಲಿ ನೀರು ತರಲು ಸಾಮಾನ್ಯವಾಗಿ ಅವಕಾಶ ಕೊಡದಿರುವುದನ್ನು ಆಗಲೇ ಹೇಳಿದ್ದಾರೆ. ಅವರಿಗೆ ಬಾವಿಗಳನ್ನು ಮೀಸಲಾಗಿಡಬೇಕಾದ ಅಗತ್ಯವಿಲ್ಲ. ಆದರೆ ಎಲ್ಲರಂತೆ ಅವರೂ ದೇಶದ ಪ್ರಜೆಗಳು ಎಂಬ ಭಾವನೆ ಬರಬೇಕು. ದೇವಸ್ಥಾನದ ವಿಚಾರ ಹಾಗಿರಲಿ, ಮುಖ್ಯವಾಗಿ ಅವರಿಗೆ ಯಾವಯಾವ ವಿಧದಲ್ಲಿ ಸಮಾಜದಲ್ಲಿ ಎಲ್ಲೆಲ್ಲಿ ಕೊರತೆಯಿದೆಯೋ ಅದನ್ನು ನಿವಾರಣೆ ಮಾಡಬೇಕಾದದ್ದು ಪ್ರತಿಯೊಬ್ಬರ ಕರ್ತವ್ಯ. ಅದನ್ನು ಬಿಟ್ಟು ತಮಾಷೆಯಾಗಿ ಕಾಂಗ್ರೆಸ್ ಪಕ್ಷದವರು......

Mr. SPEAKER.—Who said so? What is the basis for such remaıks?

Sri B. HUTCHE GOWDA.—They are laughing at the Speaker.

Mr. SPEAKER.—That cannot be the inference, simply because two Members are talking among themselves.

Sri K. HANUMANTHAIYA (Chief Minister).—May I make an observation? So far as the Congress Party is concerned, in the course of my reply I will be able to make clear that it can take the whole credit for having advanced the Depressed Classes and these very enactments were made by the Congress Ministry. I am sorry to find that the Hon'ble Member again and again speaks with bitterness and makes personal attacks on the Congress and its members. He should realise that it cannot be a one-sided game and this party can hit him much better than he can do. I therefore ask him to desist from such personal and irresponsible remarks.

ಶ್ರೀ ಬಿ. ಹುಚ್ಚೇಗೌಡರು.—ಹರಿಜನರಿಗೆ ಗ್ರಾಂಟ್ ಕೊಡುವುದರ ಮೂಲಕ ಅವರು ಇತರ ಜನಾಂಗಕ್ಕೆ ಅಡಿಯಾಳಾಗಿರಬೇಕೆಂದು ಅರ್ಥವಲ್ಲ. ಮೈಸೂರಿನವರು ಅನುಕೂಲವಾಗಿದ್ದಾರೆ. ಕೊಡದಿದ್ದರೆ ಇಲ್ಲ. ಕೊಡಬೇಕಾದದ್ದು ಸರ್ಕಾರದವರ ಕರ್ತವ್ಯ. ಎಲ್ಲರೂ ಹೇಳಿದ್ದಾರೆ ಗ್ರಾಂಟು ಬರುತ್ತಾ ಇಲ್ಲ ಎಂದು. ಮುಖ್ಯವಾಗಿ ಸಹಾಯಾರ್ಥವನ್ನು ತೋರಿಸಿ ಈ ಜನಗಳಿಗೆ ಇಲ್ಲಿಯವರೆಗೂ ನಡೆಸಿರತಕ್ಕ ಅನ್ಯಾಯವನ್ನು ಸರಿಪಡಿಸದಿದ್ದರೆ ಮುಂದಿನ ಜನಾಂಗಕ್ಕೂ ಸಹ ಅದು ಸರಿಹೋಗುವುದಿಲ್ಲ. ಆದ್ದರಿಂದ ಈ ಕಾನೂನು ಎಷ್ಟು ಜಾಗ್ರತೆ ಆದರೆ ಅಷ್ಟು ಜಾಗ್ರತೆ ನಿರ್ವಂಚನೆಯಿಂದ ಒಂದು ದೃಢ ಮನಸ್ಸಿನಿಂದ ಜಾರಿಗೆ ತಂದು ಈಗಿರತಕ್ಕ ಅಸಮಾನತೆಯನ್ನು ತೊಡೆದು ಹಾಕುವುದು ನಮ್ಮ ಕರ್ತವ್ಯ. ಸೆಕ್ಯುಲರ್ ಸ್ಟೇಟ್‌ನಲ್ಲಿ ಪ್ರತಿಫಲ ಹೊಂದುವುದಕ್ಕೆ ಏರ್ಪಡಿಸಿಕೊಟ್ಟು ಸರಿಸಮಾನತೆಯನ್ನು ಪಡೆಯುವುದಕ್ಕೆ ಅವಕಾಶ ಮಾಡಿ ಕೊಡುವುದು ನಮ್ಮ ಕರ್ತವ್ಯ ಎಂದು ಮತ್ತೊಮ್ಮೆ ಹೇಳುತ್ತೇನೆ.

*ಶ್ರೀ ಎಚ್. ಕೆ. ಶಿವರುದ್ರಪ್ಪನವರು (ಗುಂಡ್ಲುಪೇಟೆ–ಹೆಗ್ಗಡದೇವನಕೋಟೆ).—ಈ ಕತ್ತರಿ ನಿರ್ಣಯದ ವಿಚಾರದಲ್ಲಿ ಸಭೆಯ ಗಮನಕ್ಕೆ ಕೆಲವು ವಿಚಾರಗಳನ್ನು ತರಬಯಸುತ್ತೇನೆ. ದೇವರನ್ನು ಪೂಜಿಸತಕ್ಕ ಹಕ್ಕು ಎಲ್ಲರಿಗೂ ಸಮಾನವಾಗಿದೆ ಎಂದು ನಾನು ಭಾವಿಸಿದ್ದೇನೆ. ಅಂದಮೇಲೆ ಇದರಲ್ಲಿ ಯಾವ ವ್ಯತ್ಯಾಸವಾಗಲಿ ಅಥವಾ ಒಂದು ನಿರ್ಬಂಧವಾಗಲಿ ಯಾವ ದೃಷ್ಟಿಯಿಂದಲೂ ಮಾಡತಕ್ಕದ್ದು ಸರಿಯಲ್ಲ. ಲಿಂಗಾಯಿತರ ಸಮಾಜದ ದೃಷ್ಟಿಯಲ್ಲಿ ಈ ಖೋತಾ ನಿರ್ಣಯನ್ನು ವಿಮರ್ಶೆಮಾಡುವುದಾದರೆ, ಇದರಲ್ಲಿ ಲಿಂಗಾಯಿತರಿಗೆ ಯಾವ ಒಂದು ಅಸಮಾಧಾನವಾಗಲಿ, ಅತೃಪ್ತಿಯಾಗಲೀ ಇಲ್ಲ ಎಂದು ನಾನು ಹೇಳುತ್ತೇನೆ. ಲಿಂಗಾಯಿತರಲ್ಲಿ ಸರ್ವರೂ ಲಿಂಗಧಾರಿಗಳಾಗಿದ್ದಾರೆ. ಲಿಂಗಧಾರಿಗಳಾಗಿರುವವರು ಬೇರೆ ದೇವರನ್ನು ಪೂಜಿಸಬೇಕಾಗಿಲ್ಲ ಎಂದು ಬಸವಣ್ಣನವರು ಹೇಳಿದ್ದಾರೆ. ಅವರು ಹೇಳಿದ್ದು "ಕಟ್ಟಿದ ಲಿಂಗವನ್ನು ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ"........................

Mr. SPEAKER.—Where does the question of Lingayets come in. ಹರಿಜನರಿಗೆ ಸಂಬಂಧಪಟ್ಟ ವಿಚಾರ ಹೇಳಿ

ಶ್ರೀ ಹೆಚ್. ಕೆ. ಶಿವರುದ್ರಪ್ಪನವರು.—

ಬಸವಣ್ಣನವರು..........................

Mr. SPEAKER.—I do not think the Hon'ble Member is relevant. I request the Hon'ble Chief Minister to reply.

ಶ್ರೀ ಕೆ. ಹನುಮಂತಯ್ಯನವರು.—ಸ್ವಾಮಿ, ಶ್ರೀಮಾನ್ ಚಿಕ್ಕ ಲಿಂಗಯ್ಯನವರು ತಂದಿರತಕ್ಕ ಈ ಖೋತಾ ನಿರ್ಣಯದ ಉದ್ದೇಶವನ್ನು ಅರ್ಥಮಾಡಿಕೊಳ್ಳಬಲ್ಲೆ. ಈಗ ಸಿವಿಲ್ ಡಿಸ್‌ಎಬಿಲಿಟೀಸ್ ಆಕ್ಟ್ ಮತ್ತು ಮೈಸೂರು ಟೆಂಪಲ್ ಎಂಟ್ರಿ ಆಥರೈಸೇಷನ್ ಆಕ್ಟ್ ಇವೆರಡನ್ನೂ ಕಾಂಗ್ರೆಸ್ ಮಂತ್ರಿಮಂಡಲದವರು ಹಿಂದೆ ಮಂಡಿಸಿ ಜಾರಿಗೆ ತಂದು ಶಾಸನವನ್ನು ಮಾಡಿದ್ದಾರೆ. ಈ ಶಾಸನದಿಂದ ಎಷ್ಟು ಪರಿಣಾಮ ಆಗಬೇಕೋ ಅಷ್ಟು ಪರಿಣಾಮ ಆಗಲಿಲ್ಲ ಎಂಬುದು ಶ್ರೀಮಾನ್ ಚಿಕ್ಕಲಿಂಗಯ್ಯನವರ ಉದ್ದೇಶವಾಗಿರಬಹುದು, ಒಪ್ಪಿಕೊಳ್ಳೋಣ. ನಮ್ಮ ಇಂಡಿಯಾದೇಶದಲ್ಲಿ ಬರೀ ಹರಿಜನರಿಗೆ ಮಾತ್ರ ಅದು ಅನ್ವಯಿಸುವುದಿಲ್ಲ. ದೇಶದಲ್ಲಿ ಏನು ಒಂದು ಕ್ಯಾಸ್ಟ್ ಸಿಸ್ಟಂ ಇದೆಯೋ ಆ ಕ್ಯಾಸ್ಟ್ ಸಿಸ್ಟಂನ ಪರಿಣಾಮ ಅನೇಕ ಜಾತಿಗಳಲ್ಲಿ ಅನೇಕ ವಿಧವಾಗಿದೆ. ಮಿಕ್ಕ ಜಾತಿಯವರಿಗೂ ಕೂಡ ಸೋಷಿಯಲ್ ಡಿಸ್‌ಎಬಿಲಿಟಿ ಇದೆ. ಆದ್ದರಿಂದ ಇದು ಒಟ್ಟು ಸಮಾಜವೇ ಒಂದು ಹೊಸಮಾರ್ಗವನ್ನು ಹಿಡಿಯ ಬೇಕಾಗಿರತಕ್ಕ

ವಿಷಯ. ಹೊಸ ಮಾರ್ಗವನ್ನು ಹಿಡಿದು ಕ್ರಮಕ್ರಮೇಣ ಮುಂದೆ ಹೋಗುತ್ತಾ ಹರಿಜನರ ಹಕ್ಕುಬಾಧ್ಯತೆಯನ್ನು ಕಾಪಾಡುವುದರಲ್ಲಿ ಕಾಂಗ್ರೆಸ್ ಪಕ್ಷದವರು ಮತ್ತು ಸರ್ಕಾರದವರು ಯಾರಿಗೂ ಹಿಂದುಳಿದಿಲ್ಲ, ಹಿಂದುಳಿಯುವುದಿಲ್ಲ. ಈ ಎರಡು ಆಕ್ಟ್‌ಗಳನ್ನು ಜಾರಿಗೆ ತರತಕ್ಕ ವಿಷಯದಲ್ಲಿ ಲೋಪದೋಷಗಳಿದ್ದರೆ, ಅವನ್ನು ಸರಿ ಪಡಿಸುವುದಕ್ಕೆ ಸರ್ವದಾಸಿದ್ಧರಾಗಿದ್ದೇವೆ ಎಂಬ ಭರವಸೆಯನ್ನು ಕೊಡುತ್ತೇನೆ.

Mr. SPEAKER.—What does the mover of the cut motion propose to do?

Sri M. CHIKKALINGAIYA.—I do not press it but seek the leave of the House to withdraw it.

The cut motion was by leave, withdrawn.

Need for proper representation of Scheduled Castes in Government Services.

ಶ್ರೀ ಕೆ. ಪ್ರಭಾಕರ್‌ರವರು (ನೆಲಮಂಗಲ—ಅನುಸೂಚಿತ ಜಾತಿಗಳು).—ಈಗ 7ನೇ ಖೋತಾ ನಿರ್ಣಯವನ್ನು ಮಂಡಿಸುತ್ತೇನೆ. ಅದು ಹೀಗಿದೆ.

"25. ಸಾಮಾನ್ಯ ಆಡಳಿತ ('ಬಿ,' 'ಸಿ' ಮತ್ತು 'ಎಫ್' ಸಬ್ ಮೇಜರ್ ಬಾಬುಗಳನ್ನು ಬಿಟ್ಟು)" ಎಂಬ ಬಾಬಿನಲ್ಲಿ ಕೋರತಕ್ಕ 20,98,700 ರೂಪಾಯಿಗಳ 'ಡಿಮ್ಯಾಂಡ್' ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನೂ ಕಡಿಮೆಮಾಡಬೇಕು ; ಇದರಲ್ಲಿ 'ಸಂಸ್ಥಾನದ ಸರ್ಕಾರಿ ನೌಕರಿಗಳಲ್ಲಿ ನಿಮ್ನ ತರಗತಿಯವರಿಗೆ ಸರಿಯಾದ ಪ್ರಾತಿನಿಧ್ಯವಿರುವಂತೆ ಏರ್ಪಡಿಸುವುದರ ಅವಶ್ಯಕತೆಯನ್ನು ಕುರಿತು ಚರ್ಚಿಸುವುದಕ್ಕೆ'

ಎಂದು ಇದೆ. ಈ ಸಂದರ್ಭದಲ್ಲಿ ಈ ಖೋತಾ ನಿರ್ಣಯದ ಒಂದು ಔಚಿತ್ಯವನ್ನು ಕುರಿತು ಮಾತನಾಡುವಾಗ ಒಂದಂಶವನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಇದು ಒಂದಲ್ಲ ಒಂದು ರೂಪದಲ್ಲಿ ಇಡೀ ದೇಶದ ಮತ್ತು ಸರ್ಕಾರದ ಒಂದು ಬಗೆಯ ದಯೆ ಮತ್ತು ಅವರ ಸಮಸ್ಯೆಗಳ ಕಡೆಗೆ ಒಂದು ಕರುಣೆ ಏನಿದೆಯೋ ಅವುಗಳಿಗೆ ಸಂಬಂಧಪಟ್ಟಿದೆ. ಸರ್ಕಾರಿ ಹುದ್ದೆಗಳಲ್ಲಿ ಇಂಥ ಕೋಮಿನವರಿಗೆ ಇಷ್ಟು ಹುದ್ದೆ ಕೊಡಬೇಕೆಂದು ಖಚಿತವಾದ ಕಾನೂನು ಕೆಲವು ದೇಶಗಳಲ್ಲಿ ಇದೆ, ಕೆಲವು ದೇಶಗಳಲ್ಲಿ ಇಲ್ಲ. ಅದರಲ್ಲೂ ಭಾರತ ರಾಜ್ಯಾಂಗ ಜಾರಿಗೆ ಬಂದ ಮೇಲೆ ಸರ್ಕಾರಿ ಹುದ್ದೆಗಳ ಹಂಚಿಕೆಯ ವಿಚಾರದಲ್ಲಿ ಯಾವ ನೀತಿಯನ್ನು ಅನುಸರಿಸಬೇಕೆಂಬ ವಿಚಾರದಲ್ಲಿ, ಹಾಗೂ ಕೇವಲ ಹಿಂದುಳಿದಿರತಕ್ಕವರ ಬಗ್ಗೆ ಸಂಸ್ಥಾನದವರು ಮತ್ತು ಕೇಂದ್ರ ಸರ್ಕಾರದವರು ಯಾವ ನೀತಿಯನ್ನು ಅನುಸರಿಸಬೇಕೆಂಬ ಬಗ್ಗೆ, ಮೂಲಭೂತವಾದ ವಿಚಾರಗಳನ್ನು ಅದರಲ್ಲಿ ಅಳವಡಿಸಿದ್ದಾರೆ. ಇಷ್ಟಾದರೂ ಕೂಡ ಒಟ್ಟು ಸರ್ಕಾರದಲ್ಲಿರತಕ್ಕ ನೌಕರಿಯಲ್ಲಿ ಶೇಕಡ ಎಷ್ಟು ಕೆಲಸಗಳನ್ನು ಅವರಿಗೆ ಕೊಡಬೇಕೆಂಬ ಬಗ್ಗೆ ಖಚಿತವಾಗಿ ಅದರಲ್ಲಿ ನಮೂದಿಸಿಲ್ಲ. ಅಲ್ಲಿ ನಮೂದಿಸದೇ ಇರುವದರಿಂದ, ಯಾವ ಪ್ರಮಾಣದಲ್ಲಿ ಕೊಡಬೇಕು ಹೇಗೆ ವಿನಿಮಯ ಮಾಡಬೇಕೆಂಬ ವಿಚಾರ ಅನೇಕ ಸಂದರ್ಭಗಳಲ್ಲಿ ಆಯಾ ಸಂಸ್ಥಾನಗಳಿಗೇ ಸೇರಿದೆಯೆಂದು ಭಾವಿಸಬೇಕಾಗಿದೆ. ಮೈಸೂರು ಸಂಸ್ಥಾನದಲ್ಲಿ, ನಾವು ತಿಳಿದು ಮನವರಿಕೆ ಮಾಡಿಕೊಳ್ಳುತ್ತಾ ಇರುವ ರೀತಿ ಅನೇಕ ವಿಚಾರಗಳಲ್ಲಿ ಹರಿಜನರ ವಿಷಯದಲ್ಲಿ ಒಂದು ದಯಾರಸವನ್ನಿಟ್ಟುಕೊಂಡು, ಸಮಯೋಚಿತವಾಗಿ ಕಾನೂನು ರಚಿಸಿ, ಹರಿಜನರ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಂಡು ಬರುತ್ತಾ ಹೆಚ್ಚಿನ ಸೌಹಾರ್ದ ತೋರಿಸುತ್ತಾ ಬಂದಿದ್ದಾರೆ.

2-30 P.M.

ಹೊಸರಾಜ್ಯಾಂಗ ಸ್ಥಾಪನೆಯಾದ ಮೇಲೆ ಅವರ ಪ್ರಿವಿಲೇಜಸ್‌ಗಳು, ಅವರಿಗೆ ಹೆಚ್ಚಿನ ಹಕ್ಕುಬಾಧ್ಯತೆಗಳು, ಮತ್ತು ರಕ್ಷಣೆಗಳ ವಿಚಾರದಲ್ಲಿ ಒಂದು ಕಾಲಮಿತಿಯನ್ನು ಕೂಡ ಇಟ್ಟುಕೊಂಡು 10 ವರ್ಷಗಳಲ್ಲಿ ಅವರ ಏಳಿಗೆಗಾಗಿ ಈ ರೀತಿಯಲ್ಲಿ ನಡೆಯಬೇಕೆಂಬ ಒಂದು ಕ್ಲಾಜನ್ನು ಕೂಡ ಅದರಲ್ಲಿ ಸೇರಿಸಿದ್ದಾರೆ. ಇದನ್ನು ನಾವು ನೋಡಿದ ಮೇಲೆ, 10 ವರ್ಷಗಳಾದ ಮೇಲೆ ಹರಿಜನರ ಚಿತ್ರವೇನು, ಇಂಥ ಹರಿಜನರಿಂದ ಕೂಡಿರುವ ಸಮಾಜದ ಚಿತ್ರವೇನು, ಸಮಾಜದಲ್ಲಿ ಇಂಥ ಹರಿಜನರನ್ನೊಳಗೊಂಡ ರಾಷ್ಟ್ರದ ಚಿತ್ರವೇನು ಎಂಬದನ್ನು ಗಮನದಲ್ಲಿಟ್ಟುಕೊಂಡು, ಏನೇನು ಅವಶ್ಯಕವಾದ ಯೋಜನೆಗಳನ್ನು ಮಾಡಬೇಕೆಂಬುದನ್ನು ಪರಿಶೀಲಿಸಿ ಕೆಲಸ ಮಾಡಬೇಕಾದ ಒಂದು ಪ್ರಮೇಯ ಬಂದಿದೆ. ಇಂಥ ಸಂದರ್ಭದಲ್ಲಿ ನಾನು ಮಾತನಾಡುವಾಗ ಹರಿಜನರೆಂಬ ಜನರ ಜೀವನದ ನಾನಾ ಬಾಧೆಗಳೇನೆಂಬುದನ್ನು ಹೇಳುವುದು ಅನುಚಿತವೆಂದು ಕಾಣುತ್ತದೆ. ಈಗ ಮುಖ್ಯವಾಗಿ ಸರ್ಕಾರಿ ನೌಕರಿಗಳಲ್ಲಿ ಹಾಗೂ ಹುದ್ದೆಗಳಲ್ಲಿ ಎಷ್ಟು ಭಾಗದಷ್ಟು ನೌಕರಿಗಳನ್ನು ಅವರಿಗೆ ಕೊಡಬೇಕೆಂಬುದನ್ನು ಮಾತ್ರ ಕುರಿತು ಹೇಳಬಯಸುತ್ತೇನೆ. ಸ್ಥೂಲವಾಗಿ ಹೇಳುವುದಾದರೆ, ಸಾಂಪ್ರದಾಯಿಕವಾಗಿ ಅನೇಕ ಸಂದರ್ಭಗಳಲ್ಲಿ ಬೆಳೆದು ಬಂದಿರುವ ಔಚಿತ್ಯವೇನೆಂದರೆ, ಅವರ ಜನಸಂಖ್ಯೆಯ ಪ್ರಕಾರ ಅಂದರೆ 1/5 ಭಾಗದಷ್ಟು ಸ್ಥಾನಗಳನ್ನು ಅನೇಕ ಕಡೆಗಳಲ್ಲಿ ಕೊಟ್ಟಿದೆ. ಈ ಸಭೆಯಲ್ಲಿ ಸ್ಥಾನಗಳನ್ನು ರಿಸರ್ವ್ ಮಾಡುವುದರಲ್ಲೂ ಇದೇ ನೀತಿಯನ್ನನುಸರಿಸಿದ್ದಾರೆ. ಅಂಥಾದ್ದರಲ್ಲಿ ಈಗ ನಮ್ಮ ಸಂಸ್ಥಾನದ ನೌಕರಿಗಳನ್ನು ನೋಡುವುದಾದರೆ, 1917ನೆಯ ಇಸವಿಯಿಂದಲಾಗಾಯಿತು ಹಾಸ್ಟಲು ವೆಚ್ಚ, ಬಟ್ಟೆ, ವಿದ್ಯೆ ಎಲ್ಲಾ ಕೊಟ್ಟು ಎಲ್ಲ ಕೆಲಸಗಳಲ್ಲೂ ಕೂಡ ಪ್ರೋತ್ಸಾಹಿಸಿಕೊಂಡು ನಮ್ಮ ಸರ್ಕಾರದವರು ಬಂದಿದ್ದರೂ, ಈ 28 ವರ್ಷದಲಾಗಾಯಿತು ಹರಿಜನರ ವಿಚಾರದಲ್ಲಿ ಮೈಸೂರು ದೇಶದಲ್ಲಿ ಆಗಿರುವ ಕೃಷಿಯೇನು, ಅದರ ಫಲವೇನು, ಇವೊತ್ತಿನ ದಿವಸ ಯಾವ ಯಾವ ಗ್ರೇಡಿನಲ್ಲಿ ಆ ಜನರು ನೌಕರಿಯಲ್ಲಿ ಎಷ್ಟೆಷ್ಟು ಸಂಖ್ಯೆಯಲ್ಲಿದ್ದಾರೆಂದು ನೋಡಿದರೆ, ಡೆಪ್ಯುಟಿ ಕಮಿಷನರಲ್ಲಿ ಯಾರೂ ಇಲ್ಲ ! ಮೊನ್ನೆ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾ ಅಮಲ್ದಾರರು, ಅಸಿಸ್ಟೆಂಟ್ ಕಮಿಷನರು ಮತ್ತು ಡೆಪ್ಯುಟಿ ಕಮಿಷನರುಗಳು ಸಂಸ್ಥಾನದಲ್ಲಿ ಒಟ್ಟು 332 ಜನರಿದ್ದಾರೆಂದು ಅಪ್ಪಣೆಕೊಡಿಸಿದರು. ಇಷ್ಟೊಂದು ಮಂದಿಯಲ್ಲಿ ಡೆಪ್ಯುಟಿಕಮಿಷನರುಗಳಾಗಿರುವ ಹರಿಜನರು ಯಾರೂ ಇಲ್ಲ! ಅಲ್ಲದೇ ಅವರು ಕೊಟ್ಟಿರತಕ್ಕ list ನೋಡುವುದಾದರೆ, ವಿದ್ಯಾ ಇಲಾಖೆಯಲ್ಲಿ 5 ಜನ ಲೆಕ್ಚೆರರುಗಳಾಗಿದ್ದಾರೆ, ಪೋಲೀಸ್ ಇಲಾಖೆಯಲ್ಲಿ ಎ. ಎಸ್. ಪಿ. ಗಳಾಗಿರುವವರು ಒಬ್ಬರು, ಮೆಡಿಕಲ್ ಇಲಾಖೆಯಲ್ಲಿ ಇ. ಎಲ್. ಟಿ. ಸ್ಪೆಷಲಿಸ್ಟ್ ಆಗಿರುವವರು ಒಬ್ಬರು ಕೈಗಾರಿಕಾ ಇಲಾಖೆಯಲ್ಲಿ ಇಬ್ಬರು, ರೆವಿನ್ಯೂ ಇಲಾಖೆಯಲ್ಲಿ ಸೀನಿಯರ್ ಅಸಿಸ್ಟೆಂಟ್ ಕಮಿಷನಾಗಿರುವವರು ಒಬ್ಬರು ಇಬ್ಬರು, ಅಸಿಸ್ಟೆಂಟ್ ಕಮಿಷನರಾಗಿಯೂ 8 ಜನರನ್ನೂ ಅಮಲ್ದಾರರಾಗಿ 3 ಜನರು ಅಮಲ್ದಾರಿ ಪಟ್ಟಿಯಲ್ಲಿ

(ಶ್ರೀ ಕೆ. ಪ್ರಭಾಕರ್‌ರವರ)

9 ಜನರು, ಆಮೇಲೆ ಪ್ರೊಬೇಷನರಾಗಿ 2 ಜನರು, ಹೀಗೆ ಇವರುಗಳನ್ನು ಕಾಣಬಹುದು. ಹೀಗೆ ನೋಡುತ್ತಾಹೋದರೆ ನಮ್ಮ ಸಂಸ್ಥಾನದಲ್ಲಿರುವ ಒಟ್ಟು ಆಫೀಸರುಗಳ ಸಂಖ್ಯೆಯಲ್ಲಿ ಇವರುಗಳ ಪ್ರಮಾಣ ಕೇವಲ ಕಡಮೆಯೆಂದು ಖಚಿತವಾಗಿ ಗೊತ್ತಾಗುತ್ತದೆ. ಮೊನ್ನೆ ತಾನೆ ಐ. ಎ. ಎಸ್. ಮತ್ತು ಐ. ಪಿ. ಎಸ್. ಸ್ಥಾನಗಳಿಗೆ interview ನಡೆಯಿತೆಂದು ತಿಳಿದು ಬಂತು; 8 ಜನರ interview ಆಯಿತಂತೆ. ಇದಕ್ಕೆ ಮೊದಲೇ ಒಂದು ಲಿಸ್ಟ್ ತಯಾರು ಮಾಡಿದ್ದರು. ಈಗೊಂದು ಬೇರೆ ಲಿಸ್ಟ್ ತಯಾರಾಗುತ್ತಿದೆಯಂತೆ. ಸರ್ಕಾರದವರಿಂದ ಒತ್ತಾಯ ಹಾಕಿಸಿ ಕಮಿಟಿಯವರನ್ನು ಒಪ್ಪಿಸಿ ಹರಿಜನರಲ್ಲಿ ಕೆಲವರನ್ನು ಆ ಲಿಸ್ಟಿನ ಕೊನೆಯಲ್ಲಿ ಸೇರಿಸಿದರೆ ಇದರಿಂದಾಗುವ ಪ್ರಯೋಜನವಾದರೂ ಏನು ? ಮೊದಲನೆಯ ಪಟ್ಟಿ ಪೂರೈಸಿ ಎರಡನೆಯ ಪಟ್ಟಿಯ ಕೊನೆಗೆ ಬಂದು ನಮ್ಮ ಜನರಿಗೆ ಈ chance ಸಿಕ್ಕುವ ಹೊತ್ತಿಗೆ ಅವರು ರಿಟೈರಾಗಿ ಮನೆಗೆ ಹೋಗಿರುತ್ತಾರೆ. ಈ ದೃಷ್ಟಿಯಿಂದ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಸರ್ಕಾರದವರು ಅವರ ವಿಷಯದಲ್ಲಿ ತಮ್ಮ ದಯಾರಸವನ್ನು ತೋರಿ ದೇಶ ಮುಂದಕ್ಕೆ ಬಂದಂತೆಲ್ಲಾ ಹರಿಜನರಿಗೂ ನೌಕರಿಗಳಲ್ಲಿ ಹೆಚ್ಚಿಗೆ ಹಂಚಿಕೆ ಕೊಟ್ಟು ಅವರಿಗೆ ಸಹಕಾರಕೊಟ್ಟು ಕೆಲಸಮಾಡಿಸಿಕೊಂಡು ಬಂದಿಲ್ಲ. ಅವರು ಕಾಲೇಜುಗಳಲ್ಲಿ ವ್ಯಾಸಂಗಮಾಡಿ ಒಂದು ಪದವಿ ತೆಗೆದುಕೊಂಡಿರುವುದನ್ನು ಮಾತ್ರವೇ ನೋಡುವುದಲ್ಲದೆ ಬಾಕಿ ವಿಚಾರಗಳನ್ನೂ ನೋಡಿ ಪ್ರಮೋಷನ್ ಕೊಡಬೇಕಾಗುತ್ತದೆಂದು ಹೇಳುತ್ತಾರೆ. ಡಿಗ್ರಿ ವಿಷಯದಲ್ಲಿ ಯಾರಿಗೂ ಹೆಚ್ಚುಕಡಮೆ ಕಾಣದಿರಬಹುದು. ಬಾಕಿ ವಿಚಾರಗಳೆಂದು ಹೇಳುವಾಗಲೇ ಕಷ್ಟ ಬರುವುದು. It depends upon many factors ಎಂದು ಹೇಳುತ್ತಾರೆ. Many factors ಎಂಬುದರ ಅರ್ಥ ಖಚಿತವಾಗಿಲ್ಲ ; ಅದರ implications ಯಾರಿಗೂ ಗೊತ್ತಾಗುವುದಿಲ್ಲ. ಒಂದು ಉದಾಹರಣೆ ಹೇಳುವುದಾದರೆ ಒಬ್ಬಾನೊಬ್ಬ ಸಬ್ ಇನ್ಸ್‌ಪೆಕ್ಟರು ಮನೆಯೊಳಕ್ಕೆ ತನಿಖೆ ಮಾಡಲಿಕ್ಕೆ ಪ್ರವೇಶ ಮಾಡಬೇಕಾಗಿ ಬರುತ್ತದೆ, ಅವನಿಗೆ ಅಧಿಕಾರ ಇರುತ್ತದೆ. ಆದರೆ ಷೆಡ್ಯೂಲ್ಡ್ ಪಂಗಡದವನಾಗಿ ಮನೆಯೊಳಕ್ಕೆ ಪ್ರವೇಶಿಸಲಾರ, ಪ್ರವೇಶಿಸದಿದ್ದರೆ ಕರ್ತವ್ಯಲೋಪವಾಗುತ್ತದೆ. ಹೊರಗಡೆ ತಾನಿದ್ದು, ಬೇರೊಬ್ಬ ಮನುಷ್ಯನನ್ನು ಒಳಗೆ ಕಳುಹಿಸಿ ಅವನು ಹೇಳಿದ ವಿಷಯಗಳ ಮೇಲೆ record ಮಾಡಬೇಕಾಗುತ್ತದೆ. ಹೀಗೆಮಾಡಿದರೂ ತಾನೇ ನೋಡಿಮಾಡಲಿಲ್ಲವೆನ್ನುತ್ತಾರೆ. ಆದ್ದರಿಂದ ಸುಮ್ಮನೆ ಬಿಟ್ಟರೂ Duty ಗೆ ಲೋಪವಾಗುತ್ತದೆ. ಇಂಥ ಸಂದರ್ಭಗಳಲ್ಲಿ ಸಿಕ್ಕಿ ಅವನು ನರಳುತ್ತಿರುತ್ತಾನೆ. ಇದನ್ನು ಮೇಲಿನ ಆಫೀಸರಿಗೆ ಹೇಳಿದರೆ "you have no tact ; you do not know how to manage the situation" ಎಂದು ಹೇಳಿ ಆತನ ದಕ್ಷತೆ ವಿಷಯದಲ್ಲಿ ತನ್ನ ಇಷ್ಟಬಂದಂತೆ ಬರೆದುಬಿಡುತ್ತಾನೆ. ಇಂಥ ಸಂದರ್ಭಗಳನ್ನು ಪರಿಶೀಲಿಸಿ ತಾವು promotion ಕೊಡುವಾಗ "depending upon other factors" ಎಂಬುದಕ್ಕೆ ನಮ್ಮ ಹರಿಜನರ ವಿಷಯದಲ್ಲಿ ಯಾವ ಅರ್ಥವನ್ನು ಕಲ್ಪಿಸಬೇಕು, ಯಾವ ದೃಷ್ಟಿಯಿಂದ ಪರಿಶೀಲಿಸಬೇಕೆಂಬುದನ್ನು ನಾವು ಖಚಿತವಾಗಿ ಹೇಳಬೇಕಾಗುತ್ತದೆ. ಆದ್ದರಿಂದ ಈ ಐ. ಎ. ಎಸ್, ಐ. ಪಿ. ಎಸ್. ಚುನಾವಣೆಗಳಲ್ಲಿ ಕೇವಲ ಈ ರೀತಿ ರಿಕಾರ್ಡ್‌ಗಳಲ್ಲಿ ಬರೆಯುವುದನ್ನು ನೋಡಿ ಮಾಡುವುದಲ್ಲ. Though they are officers they belong to Depressed classes. So, they have certain social troubles. ಈ ಅಂಶವನ್ನೂ ತಾವು ಗಮನಿಸಬೇಕು. ಅಲ್ಲದೆ ಮೇಲಿನ ಆಫೀಸರುಗಳು ಒಬ್ಬರ ದಕ್ಷತೆಯ ವಿಚಾರದಲ್ಲಿ ಬರೆಯುವಾಗ ಅವರ ಮನಸ್ಸು ಯಾವರೀತಿಯಿತ್ತು, ಯಾವ psychology ಅವರ ಮನಸ್ಸಿನಲ್ಲಿ ಕೆಲಸಮಾಡುತ್ತಿತ್ತು ಎಂಬುದನ್ನೂ ಯೋಚನೆ ಮಾಡಬೇಕು. ಅವರು ಏನೋ ಬರೆದಿಟ್ಟು ಹೋಗಿಬಿಡುತ್ತಾರೆ. 20-25 ವರ್ಷದ ಮೇಲೆ ಈ ರಿಕಾರ್ಡ್‌ನ ಆಧಾರದಮೇಲೆ ಆಫೀಸರುಗಳ ದಕ್ಷತೆ ವಿಷಯ ತೀರ್ಮಾನ ಮಾಡುವುದೆಂದರೆ ಎಷ್ಟು ಕಷ್ಟವಾಗುತ್ತದೆಂಬುದನ್ನು ನೋಡಬೇಕು. ಯಾವ ಸಂದರ್ಭದಲ್ಲಿ ರೇಗಿ ಏನು ಬರೆದರು ಎಂಬುದನ್ನು ಕಮಿಟಿಯ ಮುಂದೆ ಹೇಳುವುದಕ್ಕಾಗುತ್ತದೆಯೇ ? ಮನೆಯಿಂದ ಆಫೀಸರು ಹೊರಟಾಗ ಬಿಸಿ ಕಾಫಿ ಕುಡಿದು ನಾಲಿಗೆ ಸುಟ್ಟುಕೊಂಡು ಆಫೀಸಿಗೆ ಬಂದು ನೌಕರನ ಮೇಲೆ ತನ್ನ ಕೋಪ ತೀರಿಸಿಕೊಂಡಿರುವುದನ್ನೂ ಕೇಳಿದ್ದೇವೆ. ಆದ್ದರಿಂದ 25 ವರ್ಷಗಳ ಹಿಂದೆ ಸರ್ವಿಸ್ ರಿಜಿಸ್ಟರಿನಲ್ಲಿ ಬರೆದಿರುವ ಯಾವುದೋ ಬರೆವಣಿಗೆಯನ್ನೇ ಆಧಾರವಾಗಿ ತೆಗೆದುಕೊಳ್ಳುವುದು ಸರಿಯಲ್ಲ. ಒಬ್ಬಾನೊಬ್ಬ ಡಿಪ್ರೆಸ್ಡ್‌ಕ್ಲಾಸ್ ಆಫೀಸರು ಯಾವುದೋ ರಾಗಿ ಕೇಸನ್ನು book ಮಾಡುವುದಕ್ಕೆ ಹೋಗಿರಬಹುದು. ಆಗ ಆ 'ದೊಡ್ಡ ಮನುಷ್ಯರು' ಮೇಲಿನ ಆಫೀಸರಲ್ಲಿಗೆ ಹೋಗಿ 'He has pulled the chain too much' ಎಂದು ದೂರು ಹೇಳಿಬಿಡುತ್ತಾರೆ. ಹೀಗೆ ಇತ್ತ ಕೇಸನ್ನು ಬಿಟ್ಟರೂ ಕಷ್ಟ, ಬಿಡದೆ ಇದ್ದರೂ ಕಷ್ಟ. ಆದ್ದರಿಂದ ಐ. ಎ. ಎಸ್. ಸ್ಥಾನಗಳನ್ನು ನಿರ್ಧರಿಸುವುದರಲ್ಲಿ ಇಂಥ ವಿಷಯಗಳನ್ನೆಲ್ಲಾ ಗಮನಿಸದೆ ತೀರ್ಮಾನ ಮಾಡುವುದಾದರೆ, ನಮ್ಮ ಷೆಡ್ಯೂಲ್ಡ್ ಜಾತಿಯವರ ಗತಿ ಏನಾಗುತ್ತದೆಂದು ನಾನು ಹೇಳಬೇಕಾಗಿಲ್ಲ. ಆದ್ದರಿಂದ ದೇಶದ ಇಂದಿನ ಪರಿಸ್ಥಿತಿಯಲ್ಲಿ, ಅವರಿಗಿರುವ ಕೊರತೆಯೇನು, ಅವರಿಗಿರುವ ಪ್ರಾತಿನಿಧ್ಯವೇನು ಎಂಬುದನ್ನು ತೂಕಮಾಡಿನೋಡಿ ಒಂದು ನಿರ್ಧಾರಕ್ಕೆ ಬರುವಾಗ, ನಾವು ಮೇಲಕ್ಕೆ ನಿಯೋಗ ಹೋಗಿ ಕೇಳಿಕೊಳ್ಳಬೇಕಾದ ದೂರು ನಿಮ್ಮ ಮೇಲೆ ಬರದಿರಲಿ ಎಂದು ಬಯಸುತ್ತೇನೆ. ಏಕೆಂದರೆ ನಮ್ಮ ಸಂಸ್ಥಾನಕ್ಕೆ ಒಂದು ಗೌರವವಿದೆ, ನಮ್ಮ ಮಂತ್ರಿ ಮಂಡಳಿದವರು ಎಲ್ಲವನ್ನೂ ಸರಿಯಾಗಿ ನೋಡಿಕೊಳ್ಳುತ್ತಾರೆ ಎಂಬ ಹೆಮ್ಮೆಪಡುತ್ತೇವೆ. ನನ್ನ ಮಿತ್ರರಲ್ಲೊಬ್ಬರು ಈ ಸಂದರ್ಭದಲ್ಲಿ ಪ್ರಶ್ನೆ ಒಂದನ್ನು ಕೇಳುತ್ತಿದ್ದಾಗ ನಮ್ಮ ನಾಯಕರ ಮುಖ ಸ್ವಲ್ಪ ಕೆಂಪಾಯಿತು. ಕೇಂದ್ರ ಸರ್ಕಾರದಿಂದ ಈ ವಿಚಾರದಲ್ಲಿ ಏನು ಸೂಚನೆಗಳು ಬಂದರೂ ಅದನ್ನು ಅನುಸರಿಸುವುದಿಲ್ಲವೆಂದು ಹೇಳಿದರು. ಅಂಥ ಸೂಚನೆ ಬಂದಿದೆಯೋ, ಬಂದಿಲ್ಲವೋ ಅಥವಾ ಬರುವುದಿಲ್ಲವೋ, ಅಂತೂ ಅದಕ್ಕೆ ಇಂಥ ಜವಾಬು ಹೇಳಿ ಆಶೆಯಿಂದ ಕೂಡಿದ್ದ ನಮ್ಮಗಳಿಗೆ ಹೀಗೆಂದರಲ್ಲಾ ಎನ್ನಿಸಿತು. ಆದರೂ ಮಾತಿನಿಂದಲೇ ಹೃದಯವನ್ನು ಪರೀಕ್ಷಿಸುವುದಕ್ಕಾಗುವುದಿಲ್ಲವೆಂಬುದನ್ನು ಬಲ್ಲೆ. ಸಾಮಾನ್ಯವಾಗಿ ಒಂದು ನಾಣ್ಣುಡಿಯಿದೆ ; ಬೈಯುತ್ತಾ ಹೇಳಿದವರು ಬದುಕುವುದಕ್ಕೆ ಹೇಳಿದರು, ನಗುತ್ತಾ ಹೇಳಿದವರು ಕೆಡುವುದಕ್ಕೆ ಹೇಳಿದರು ಎಂದು. ಅವರು ಹೇಳಿದ ರೀತಿ ಹಾಗೆಯೇ ಇದೆಯೆಂದು ಕಾಣುತ್ತದೆ. ಐ. ಎ. ಎಸ್. ವಿಚಾರದಲ್ಲಿ ಶ್ರೀಮಾನ್ ಸಿದ್ದಯ್ಯನವರೂ ಒಂದು ಪ್ರಶ್ನೆ ಕಳುಹಿಸಿದ್ದರು, ಶ್ರೀಮಾನ್ ಮುನಿಸ್ವಾಮಯ್ಯನವರೂ ಒಂದು ಪ್ರಶ್ನೆಯನ್ನು ಕೇಳಿದರು. ಇದನ್ನು ನೋಡಿ ಬಹುಶಃ ಸ್ವಲ್ಪ ಬೇಸರ

ಗೊಂಡು 'ಇವರೇನು ಮಾತೆತ್ತಿದರೆ ಈ ಒಂದೇ ಪ್ರಶ್ನೆ ತರುತ್ತಾರೆ' ಎಂದು ರೇಗಿ ಹಾಗೆ ಉತ್ತರ ಕೊಟ್ಟಿರಬಹುದೆಂದು ತೋರುತ್ತದೆ. ಅಥವಾ, ಹೇಗಿದ್ದರೂ ಒಂದು ಪಾಲಿಸಿ ಕಮಿಟಿಯನ್ನು ಮಾಡಿದೆ, ಹರಿಜನರಿಗೆ ಸೇರಿದ ಸಮಗ್ರ ಪ್ರಶ್ನೆಗಳೂ ಅಲ್ಲಿ ಬರುತ್ತವೆ, ಅದರ ಮುಖಾಂತರ ಒಂದು workable condition ಗೆ ಬರುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದರೂ ಹಾಗೆ ಕೇಳುತ್ತಾರಲ್ಲಾ ಎಂದು ಭಾವಿಸಿ ಇಂಥ ಉತ್ತರ ಕೊಟ್ಟರೆಂದು ಭಾವಿಸುತ್ತೇನೆ. ಈ ರೀತಿ ಒಂದು ಕಮಿಟಿಯಿದ್ದರೂ, ಆ ಕಮಿಟಿಯಲ್ಲಿರುವ ಸದಸ್ಯರೆಲ್ಲರೂ ಡಿಪ್ರೆಸ್ಡ್ ಕ್ಲಾಸಿನವರಾಗಿದ್ದರೂ, ಅವರ ಅಧ್ಯಕ್ಷತೆಯಲ್ಲಿ ಹರಿಜನರ ವಿಷಯದಲ್ಲಿ ಪೋರ್ಟ್‌ಫೋಲಿಯೋ ಹೊಂದಿರುವ ಮಂತ್ರಿಗಳೇ ಇರುವಾಗ ಅಲ್ಲಿಂದ ಬಂದ ತೀರ್ಮಾನಗಳೇನೇ ಇರಲಿ ದೇಶದ ಮುಂದೆ ಹರಿಜನರ ಸಮಸ್ಯೆ ಹೇಗಿದೆಯೆಂಬುದನ್ನು ಮಾನ್ಯ ಸದಸ್ಯರುಗಳಿಗೆ ನೇರವಾಗಿ ತಿಳಿಸುವುದಕ್ಕಾಗುವುದಿಲ್ಲ. ಆದುದರಿಂದ ಸಮಸ್ಯೆಯನ್ನು ಈ ಮಾನ್ಯ ಸಭೆಗೂ ತನ್ಮೂಲಕ ದೇಶಕ್ಕೂ ತಿಳಿಸಬೇಕೆಂಬ ಉದ್ದೇಶದಿಂದ ನಾನು ಈ ನಿರ್ಣಯವನ್ನು ತಮ್ಮ ಮುಂದಿಡುತ್ತಿದ್ದೇನೆ. ಒಂದು ವೇಳೆ ನಮ್ಮಗಳಿಗೆ percentage ನ್ನು ಗೊತ್ತುಮಾಡುವುದರಲ್ಲಿ ಮುಖ್ಯ ಮಂತ್ರಿಗಳು ಬಹಳ ಉದಾರವಾಗಿ 40% ಕೊಡೋಣವೆಂದು ಹೇಳಬಹುದು. ಪಾಲಿಸಿ ಕಮಿಟಿಯಲ್ಲಿ ನಾವುಗಳೇ ಬಹುಮತದಲ್ಲಿದ್ದು ಅದನ್ನೊಪ್ಪಿದರೂ, ಮುಂದೆ ಈ ಸಭೆಯವರು ಒಪ್ಪುತ್ತಾರೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಆ ಉದ್ದೇಶದಿಂದ ಮುಖ್ಯವಾಗಿ ಇಷ್ಟೊಂದು ತೀವ್ರತೆಯಿಂದ ಈ ವಿಷಯವನ್ನು ಸಭೆಯ ಮುಂದಿಡುತ್ತಿದ್ದೇನೆ, ಅಷ್ಟೇ. ನಾನೇನೂ ಹೆಚ್ಚು ಉದಾಹರಣೆಗಳನ್ನು ಹೇಳಬೇಕಾಗಿಲ್ಲ. ಯಾವ ಇಲಾಖೆಯನ್ನು ನೋಡಿದರೂ ಗೆಜೆಟೆಡ್ ದರ್ಜೆಯಲ್ಲಿ ನಮ್ಮವರ ಪ್ರಾತಿನಿಧ್ಯ ಕಡಮೆಯಿದೆ. ಇಷ್ಟು shortage ಇದೆಯೆಂದು ನಾನು ಹೇಳಿದರೆ ನಗೆ ಮುಖದಿಂದಿರಬಾರದು.

ನಮ್ಮ ಆಶೋತ್ತರಗಳನ್ನು ನೆರವೇರಿಸಿ ಮೈಸೂರಿನ ಗೌರವವನ್ನು ಹೆಚ್ಚಿಸಿ ಮೈಸೂರಿನ ರಾಜಕೀಯವನ್ನು ಮೇಲ್ಮಟ್ಟಕ್ಕೆ ತೆಗೆದುಕೊಂಡು ಹೋಗುವ ಶಕ್ತಿ, ಜಾಣ್ಮೆ ನಮ್ಮ ಸರ್ಕಾರದವರಿಗೆ ಇದೆ. ಇದರಲ್ಲಿ ನನಗೆ ಸಂಪೂರ್ಣ ನಂಬಿಕೆಯೂ ಇದೆ.

ಆದರೆ ಅವಶ್ಯಕತೆ ಇದೆ ಎಂಬುದನ್ನು ತೋರಿಸುವಾಗ ಇದನ್ನು ಬೇಗ ಸರಿಮಾಡುತ್ತಾರೆಂಬ ನಂಬಿಕೆಯೂ ನನಗಿದೆ. ಹತ್ತಾರು ಸಾರಿ ತೋಟಿ ತಳವಾರರ ತೊಂದರೆಗಳ ವಿಷಯದಲ್ಲಿ ಸರ್ಕಾರದ ಮುಂದೆ ಕೂಗು ಬಂದ ಹಾಗೆ ಇದೂ ಬಂದಿರುತ್ತದೆ ಎಂದು ಭಾವಿಸಲಾಗದು. ಇತರ ಸಂಸ್ಥಾನಗಳಿಗಿಂತ ಮೈಸೂರು ಎಷ್ಟೋ ವಿಷಯಗಳಲ್ಲಿ ಮುಂದೆ ಇರುವಾಗ, ಇತರ ಕಡೆ ಈ ವಿಷಯದಲ್ಲಿ ಇನ್ನೂ ಶೇಕಡಾವಾರು ಗೊತ್ತುಮಾಡದೇ ಇರುವಾಗ, ಮೈಸೂರಿನಲ್ಲಿ ಹೆಚ್ಚಿನ ಶೇಕಡಾವಾರು ಹುದ್ದೆಗಳನ್ನು ಹರಿಜನರಿಗೆ ಗೊತ್ತುಮಾಡಿ, ಜಾರಿಗೆ ತಂದು ಇನ್ನೆಲ್ಲೂ ಬಾರದೇ ಇರುವ ಕೀರ್ತಿಯನ್ನು ಸಂಪಾದಿಸಿ, ಮೈಸೂರಿನ ಹರಿಜನರಿಗೆ ಸಂತೋಷ, ನ್ಯಾಯ ಮತ್ತು ಸತ್ಫಲ ದೊರೆಯುವ ಹಾಗೆ ನಮ್ಮ ಮಂತ್ರಿಗಳು ಮಾಡುತ್ತಾರೆಂಬ ನಂಬಿಕೆ ನನಗಿದೆ. ಎದುರು ಪಕ್ಷದವರು, ಹೇಗೆ ಮಾಡುತ್ತಾರೋ ಇಲ್ಲವೋ ಎಂದು ಸಂಶಯಪಟ್ಟರೆ ಅದನ್ನು ನಾನು ನಂಬುವುದಿಲ್ಲ. ಹರಿಜನರ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆಂಬ ಭರವಸೆ ನನಗಿದೆ. Love conquers everything ಎಂದು ಮಹಾತ್ಮಾ ಗಾಂಧಿಯವರು ಹೇಳಿರುವುದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. Decentralisation of power ಇರುವಾಗ ನಮಗೆ ನ್ಯಾಯವನ್ನು ಈ ಸರ್ಕಾರವೇ ದೊರಕಿಸಿಕೊಡಬಹುದು, ಇನ್ನೊಬ್ಬರ ಕೈಕಾಯಬೇಕಾಗಿಲ್ಲ. ಪ್ರಾಸಂಗಿಕವಾಗಿ ಹೇಳಬೇಕೆಂದರೆ ಗ್ರಾಮ ಪಂಚಾಯಿತಿಗಳಿಗೆ ಹರಿಜನರನ್ನು ನೇಮಕ ಮಾಡುವಾಗ two may be co-opted ಎಂದಿದೆ; ಇದನ್ನೂ ಉತ್ತಮ ಪಡಿಸಬೇಕು.

Mr. SPEAKER.—The Member has made himself very clear.

Sri K. HANUMANTHAIYA.—On a cut motion I do not think you insist on time limit. I suppose the Hon'ble Member has said everything he has got to say. Now he can wind up.

Mr. SPEAKER.—I think he will take one or two more minutes. Let him have full satisfaction.

ಶ್ರೀ ಕೆ. ಪ್ರಭಾಕರ್ ಅವರು.—ಸಂತೋಷದ ಭರದಲ್ಲಿ ಹೇಳಬೇಕದ್ದನ್ನೆಲ್ಲಾ ಹೇಳಿದ್ದೇನೆ. ಹೇಳುವಾಗ ಈ ಸಭಾ ಸದಸ್ಯರಲ್ಲಿ ಒಂದು ಅರಿಕೆ ಮಾಡಿಕೊಳ್ಳುತ್ತೇನೆ. ಹರಿಜನರಿಗೆ ಸಂಬಂಧಪಟ್ಟಂತೆ ಇಂಥಾ ವಿಚಾರಗಳು ಎಷ್ಟು ಬಂದಾಗಲೂ ಅವರಿಗೆ ನೋವು ಎಷ್ಟಿದೆ ಎಂಬ ದೃಷ್ಟಿಯಲ್ಲಿ ನೋಡಿದರೆ ದೇಶಕ್ಕೆ ಕ್ಷೇಮ. ಯಾವಾಗಲೂ ಇವರ ಗೋಳು ಇದ್ದೇ ಇದೆ ಎಂಬ ಮನೋಭಾವ ತಮ್ಮಲ್ಲಿ ಉತ್ಪನ್ನವಾಗಬಾರದು. ನಾನು ಸಭೆಯಲ್ಲಿ ಹಿಂದೆ ಹೇಳಿರುವಂತೆ, ತರುಣರಾಗಿ ದೇಶದ ರಥವನ್ನು ಮುಂದೆ ತರಬೇಕೆಂಬ ಅಭಿಮಾನವಿರುವವರ ಕೈಯಲ್ಲಿ ದೇಶ ಇರುವುರುವುದರಿಂದ ನಾವು ಬೇಡವೆಂದರೂ ನಮಗೆ ನ್ಯಾಯವನ್ನು ದೊರಕಿಸಿಕೊಟ್ಟು ಹರಿಜನರ ಉದ್ಧಾರದಿಂದ ದೇಶಕ್ಕೂ ಮತ್ತು ರಾಷ್ಟ್ರಕ್ಕೂ ಕೀರ್ತಿ ಉಂಟಾಗುವಂತೆ ಮಾಡಬೇಕೆಂಬ ಒಳ್ಳೆಯ ದೃಷ್ಟಿಯನ್ನಿಟ್ಟುಕೊಂಡು ಈ ಕಾರ್ಯವನ್ನು ಅವರು ಮಾಡುತ್ತಾರೆಂಬ ನಂಬಿಕೆಯೂ ನನಗಿದೆ. ಈ ದೃಷ್ಟಿಯಲ್ಲಿ ಪ್ರತಿಯೊಂದು ಇಲಾಖೆಯಲ್ಲಿಯೂ ಹರಿಜನ ಅಧಿಕಾರಿಗಳ ಸರ್ವಿಸನ್ನು ಪರೀಕ್ಷಿಸಿ ಎಲ್ಲೆಲ್ಲಿ ಅವರನ್ನು ಕೊಳೆಹಾಕಿದ್ದಾರೆ, ಎಲ್ಲೆಲ್ಲ ಗ್ರೇಡುಗಳನ್ನು ಕೊಟ್ಟಿಲ್ಲ ಎಂಬುದನ್ನು ಪರಿಶೀಲಿಸಿ ಸಹಾಯ ಮಾಡಬೇಕೆಂದು ಸರ್ಕಾರದಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಕೆ. ಹನುಮಂತಯ್ಯನವರು (ಮುಖ್ಯ ಮಂತ್ರಿಗಳು)—ಸ್ವಾಮಿ, ಶ್ರೀಮಾನ್ ಪ್ರಭಾಕರ್ ಅವರು ಹೇಳಿರುವ ವಾದದಲ್ಲಿ ಬಹಳ ಮಟ್ಟಿಗೆ ಸತ್ಯಾಂಶವಿದೆ. ಸರ್ಕಾರದವರು ಕೂಡ ಅದನ್ನು ಒಪ್ಪಿಕೊಳ್ಳುತ್ತಾರೆ. ರಾಜ್ಯಾಂಗದಲ್ಲಿಯೂ ಪ್ರೊವಿಷನ್ ಇದೆ. ಹಿಂದೆ ಮತ್ತೊಂದು ಸಂದರ್ಭದಲ್ಲಿ ನಾನು ಹೇಳಿರುವ ಹಾಗೆ, ರಾಜ್ಯಾಂಗದಲ್ಲಿ ಏನು ತತ್ವವನ್ನು ಪ್ರತಿಪಾದನೆ ಮಾಡಿದ್ದಾರೋ ಅದನ್ನು ನಿಷ್ಠೆಯಿಂದ ನಡೆಸುವುದು ಸರ್ಕಾರದ ಮತ್ತು ಈ ಸಭೆಯ ಕರ್ತವ್ಯ. ಅಲ್ಲಿ ಹೇಳಿರುವ ಮಾತುಗಳನ್ನು ತಾವು ನೋಡಬೇಕು.

"335. The claims of the members of the Scheduled Castes and the Scheduled Tribes shall be taken

(ಶ್ರೀ ಕೆ. ಹನುಮಂತಯ್ಯನವರು).

into consideration, consistently with the maintenance of efficiency of administration, in the making of appointments to services and posts in connection with the affairs of the Union or of a State."

Efficiency of administration ಎಂಬ ಪದ ಇದೆ. ಆದರೆ ಈ ಪದವನ್ನೇ ಒಂದು ಸೋಗಾಗಿಟ್ಟುಕೊಂಡು ಹರಿಜನರ ಹಕ್ಕುಬಾಧ್ಯತೆಗಳನ್ನು ಕಾಪಾಡದೇ ಹೋದರೆ, ಅದು ರಾಜ್ಯಾಂಗಕ್ಕನುಸಾರವಾಗಿರುವುದಿಲ್ಲ. ಆದುದರಿಂದ ಈ ಎರಡನ್ನೂ ಮನಸ್ಸಿನಲ್ಲಿಟ್ಟುಕೊಂಡು ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಅವರಿಗೆ ಸಾಧ್ಯವಾದಷ್ಟು ಸ್ಥಾನವನ್ನು ಕೊಡಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ.

Therefore, so far as this cut motion is concerned, there is no difference whatever between the Member and the Government in the matter of implementing this provision. So I request him to withdraw the cut motion.

Mr SPEAKER.—What does the Hon'ble Member propose to do?

Sri K. PRABHAKAR.—I seek the leave of the House to withdraw the cut motion.

The cut motion was, by leave, withdrawn.

Need for allotting more funds for Malnad improvement.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು (ಚಿಕ್ಕಮಗಳೂರು-ಮೂಡಗೆರೆ).-ಸ್ವಾಮಿ, ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುವುದಕ್ಕೆ ಅಪ್ಪಣೆ ಬೇಡುತ್ತೇನೆ. ಅದು ಹೀಗಿದೆ.

"That the demand under the head 25· General Administration (except the sub major heads B, C and F) for Rs. 20,98,700 be reduced by Rs. 100 (to raise a discussion on the need for alloting more funds for the improvement of Malnad area.)"

ಸ್ವಾಮಿ, ಈ ನಿರ್ಣಯವನ್ನು ಸಭೆಯ ಮುಂದಿಡುತ್ತಾ ಎರಡು ಮಾತುಗಳನ್ನು ಹೇಳುತ್ತೇನೆ. ಮಲೆನಾಡಿನ ಅಭಿವೃದ್ಧಿಗಾಗಿ ಸರ್ಕಾರದವರು ಏನು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂಬ ವಿಚಾರವನ್ನು ಸಭೆಯ ಮುಂದೆ ಹೇಳುತ್ತೇನೆ. ಬಯಲು ಸೀಮೆಯ ಕೆಲವು ಸದಸ್ಯರು ಮಲೆನಾಡು ಪಾಕಿಸ್ತಾನ ಎಂದು ಹೇಳುತ್ತಾರೆ. ಆದರೂ ನಮ್ಮ ಕಷ್ಟವನ್ನು ಸಭೆಯ ಮುಂದೆ ಇಡದೆ ವಿಧಿಯಿಲ್ಲ. ಒಬ್ಬ ತಾಯಿಗೆ ನಾಲ್ಕು ಮಕ್ಕಳಿದ್ದು ಅವುಗಳಲ್ಲಿ ಮೂರು ಚೆನ್ನಾಗಿದ್ದು ಇನ್ನೊಂದು ನಿಶ್ಯಕ್ತವಾಗಿದ್ದರೆ ತಾಯಿ ಆ ನಿಶ್ಯಕ್ತವಾದ ಮಗುವನ್ನೂ ಮಿಕ್ಕ ಮೂರು ಮಕ್ಕಳ ಜೊತೆಗೇ ಸೇರಿಸಿದರೆ ಅದನ್ನು ನೋಡುವವರಾರು? ಅದರ ಪೋಷಣೆ ಚೆನ್ನಾಗಿ ನಡೆಯಲಾರದು. ಆ ಮಗುವಿಗಾಗಿ ಹೆಚ್ಚು ಶ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದರಂತೆ ನಮ್ಮ ಮಲೆನಾಡಿನ ವಿಷಯಕ್ಕೆ ಹೆಚ್ಚು ಗಮನ ಕೊಡಬೇಕು. ನಮ್ಮ ನಿಶ್ಯಕ್ತಿಯನ್ನು ಹೇಳದೆ ನಿರ್ವಾಹವಿಲ್ಲ. ಆದುದರಿಂದ ಮಲೆನಾಡಿನ ಕೆಲವು ವಿಚಾರಗಳನ್ನು ಹೇಳುತ್ತೇನೆ.

ಚಿಕ್ಕಮಗಳೂರು, ಶಿವಮೊಗ್ಗ, ಹಾಸನ ಜಿಲ್ಲೆಗಳನ್ನೊಳಗೊಂಡು ಶೇಕಡ 35 ರ ಭಾಗ ಸಂಸ್ಥಾನದಲ್ಲಿ ಮಲೆನಾಡಿಗೆ ಸೇರಿದೆ. ದೇಶಕ್ಕೆ ಹೆಚ್ಚು ಆಹಾರ ಬೆಳೆದು ಕೊಡುತ್ತಿರುವುದು ಮಲೆನಾಡು. ಅಲ್ಲದೆ ಕಾಫಿ, ಏಲಕ್ಕಿ, ಶ್ರೀಗಂಧ, ಮೆಣಸು ಮುಂತಾದ ವ್ಯಾಪಾರದ ಸಾಮಾನುಗಳನ್ನು ಬೆಳೆದು ನಮ್ಮ ದೇಶಕ್ಕೆ ಡಾಲರ್ ಸಂಪಾದನೆ ಮಾಡಿಕೊಡುವುದೂ ಮಲೆನಾಡು. ಹೀಗಿರುವಾಗ ಇದಕ್ಕೆ ಎಷ್ಟು ನಿಗಾ ಕೊಡಬೇಕೆಂದು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಸರ್ಕಾರ ಹಣ ಉಳಿಸುವುದಕ್ಕೆ ಚಿಕ್ಕಮಗಳೂರು ಡಿಸ್ಟ್ರಿಕ್ಟನ್ನು ಏಕೆ ತೆಗೆಯ ಬಾರದೆಂದು ಶ್ರೀಮಾನ್ ಪಟ್ಟಾಭಿರಾಮಯ್ಯನವರು ನಿನ್ನೆಯ ದಿನ ಕೇಳಿದರು. ಅದಕ್ಕೆ ನಾನು ಒಪ್ಪುತ್ತೇನೆ. ಡಿಸ್ಟ್ರಿಕ್ಟು ತೆಗೆಯಿರಿ ಖರ್ಚು ಕಡಿಮೆಮಾಡಿ, ಆದರೆ ಚಿಕ್ಕಮಗಳೂರನ್ನೇ ತೆಗೆಯಿರಿ ಎಂದು ಏಕೆ ಹೇಳಿದರೋ ಗೊತ್ತಾಗಲಿಲ್ಲ. ಮಹಿಳೆಯರು ಈ ಸಭೆಗೆ ಬಂದ ಕಾಲದಲ್ಲಿ ಈ ಡಿಸ್ಟ್ರಿಕ್ಟ್ ಹೋದರೆ, ಇದಕ್ಕೆ ನಾವೇ ಕಾರಣರು ಎಂಬ ಆಕ್ಷೇಪಣೆ ನಮ್ಮ ಮೇಲೆ ಬೀಳಲಿ ಎಂದು ಹೇಳಿದರೋ ಏನೋ ಎಂದು ನನಗೆ ಆಶ್ಚರ್ಯವಾಯಿತು. ಇನ್ನೊಬ್ಬರು ಮಲೆನಾಡಿನವರು ಅನಾಗರಿಕರು ಎಂದು ಹೇಳಿದರು. ಮಲೆನಾಡಿನಲ್ಲಿ ಸಾವಿರ ರೂಪಾಯಿ ಕಂದಾಯ ಕೊಡುವ ರೈತನ ಹೆಂಡತಿಯೂ ಕೂಡ ಗೊಬ್ಬರ ಹೊರುವುದು, ನೀರು ಹೊರುವುದು ಮುಂತಾದ ಮನೆ ಕೆಲಸಗಳನ್ನೆಲ್ಲಾ ಮಾಡುತ್ತಾಳೆ; ಇಲ್ಲಿ ನೂರೋ ನೂರೈವತ್ತೋ ಸಂಬಳ ಬರುತ್ತಿರುವವರ ಮನೆ ಹೆಂಗಸರು ಸಿನಿಮಾ ನಾಟಕಗಳನ್ನು ನೋಡಿಕೊಂಡು, ಒಳ್ಳೊಳ್ಳೆಯ ಬಟ್ಟೆಗಳನ್ನುಟ್ಟುಕೊಂಡು ನಾಜೂಕಾಗಿರುತ್ತಾರೆ. ಇಲ್ಲಿ ಸ್ಕೂಲು ಕಾಲೇಜು ಮುಂತಾದ ಜನರಿಗೆ ಬೇಕಾದ ಎಲ್ಲಾ ಅನುಕೂಲಗಳೂ ಕೇಂದ್ರೀಕೃತವಾಗಿವೆ. ಈ ದೃಷ್ಟಿಯಿಂದ ಅಲ್ಲಿ ಅನಾಗರಿಕತೆ ಇದೆ. ನೀವು ಈ ಮಲೆನಾಡಿನವರು ನಾಗರಿಕರಾಗುವಂತೆ ಮಾಡುವುದಕ್ಕೆ ಬೇಕಾದ ಸಹಾಯವನ್ನು ಕೊಡಿ ಎಂದು ನಾನು ಕೇಳುತ್ತಿರುವುದು.

ಮೊದಲನೆಯದಾಗಿ, ಮೈದಾನ ಪ್ರದೇಶವಾದ ಇಲ್ಲಿ ರಸ್ತೆ ಸೌಕರ್ಯವಿದೆ; ಮಲೆನಾಡಿನಲ್ಲಿ ರಸ್ತೆ ಸೌಕರ್ಯವಿಲ್ಲದೆ ಬಹಳ ಕಷ್ಟ. ಇರುವ ಕೆಲವು ರಸ್ತೆಗಳೂ ಜನರಿಗೆ ಸಂಚಾರಕ್ಕೆ ಅನುಕೂಲವಾಗಿಲ್ಲ. ಮಧ್ಯೆ ಅಡ್ಡ ಹೊಳೆಗಳು, ಹಳ್ಳಗಳು ಹರಿಯುತ್ತಿರುತ್ತವೆ, ಸೇತುವೆ ಇರುವುದಿಲ್ಲ. ಇದರಿಂದ ಒಂದು ಕಡೆಯಿಂದ ಇನ್ನೊಂದು ಕಡೆ ಹೋಗಲು ಬಹಳ ಕಷ್ಟ. ಅದರಲ್ಲಿಯೂ ಸ್ತ್ರೀಯರು ಕಾಯಿಲೆ ಬಿದ್ದರೆ, ಗರ್ಭಿಣಿಯರಾಗಿದ್ದರೆ ಅವರನ್ನು ಆಸ್ಪತ್ರೆಯಿರುವ ಸ್ಥಳಕ್ಕೆ ಕರೆದು ಕೊಂಡು ಹೋಗಬೇಕಾದರೆ, ಆಗ ಕಷ್ಟವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಮಳೆಗಾಲದಲ್ಲಿ ಹುಡುಗರು ಸ್ಕೂಲಿಗೆ ಹೋಗಬೇಕೆಂದರೆ ಕಷ್ಟ. ಅಲ್ಲಿ ಹೆಚ್ಚು ಹೆಚ್ಚು ರಸ್ತೆಗಳನ್ನೂ ಸೇತುವೆಗಳನ್ನೂ ಮಾಡಿಸಿಕೊಡಬೇಕು. ಮಲೆನಾಡಿನಲ್ಲಿ ದೊಡ್ಡ ದೊಡ್ಡ ಸೇತುವೆಗಳನ್ನು ಮಂಜೂರು ಮಾಡಿದ್ದೇವೆಂದು ಸರ್ಕಾರದವರು ಹೇಳುತ್ತಾರೆ, ಆದರೆ ಯಾವುದರ ಕೆಲ

ಸವೂ ಪ್ರಾರಂಭವಾಗಿಲ್ಲ. ಕಡೂರು ಮಂಗಳೂರು ರಸ್ತೆಗೆ ಮೈಲಿಗೆ ಸಾವಿರ ರೂಪಾಯಿ ಗ್ರಾಂಟ್ ಕೊಡುತ್ತಿದ್ದಾರೆ. ಈ ಹಣವೇನೋ ಖರ್ಚಾಗುತ್ತದೆ, ಆದರೆ ರಸ್ತೆಯ ಸ್ಥಿತಿ ಶೋಚನೀಯವಾಗಿದೆ ಎಂದು ವ್ಯಸನದಿಂದ ಹೇಳುತ್ತೇನೆ. ರಸ್ತೆಗಳನ್ನು I, II, III ಮತ್ತು IV ಎಂದು ನಾಲ್ಕು ದರ್ಜೆಗಳಾಗಿ ಮಾಡಿದ್ದಾರೆ. IVನೆಯ ದರ್ಜೆ ಎನ್ನುವುದನ್ನೆಲ್ಲಾ ಡಿಸ್ಟ್ರಿಕ್ಟ್ ಬೋರ್ಡಿನವರು ನೋಡಿಕೊಳ್ಳುತ್ತಾರೆ. ಈ ರಸ್ತೆಗಳು ತಕ್ಕಮಟ್ಟಿಗೆ ಅನುಕೂಲವಾಗಿರುತ್ತವೆ. ಆದರೆ ಪಬ್ಲಿಕ್‌ವರ್ಕ್ಸ್ ಇಲಾಖೆಯವರು ನೋಡಿಕೊಳ್ಳುವ ರಸ್ತೆಗಳ ಅವಸ್ಥೆಯನ್ನು ಹೇಳುವುದಕ್ಕೇ ವ್ಯಸನವಾಗುತ್ತದೆ. ಈ ರಸ್ತೆಗಳಿಗೆ ಕೊಡುವ ಗ್ರಾಂಟು ಏನಾಗುತ್ತದೆಯೋ ಗೊತ್ತಾಗುವುದಿಲ್ಲ.

ಈಗ ಚಿಕ್ಕಮಗಳೂರು-ನರಸಿಂಹರಾಜಪುರ ರಸ್ತೆ ಬಹಳ ಮುಖ್ಯವಾದದ್ದು. ಈ ರಸ್ತೆಗೆ ಹೆಬ್ಬೆ ಹತ್ತಿರ ಒಂದು ಸೇತುವೆ ಬಹಳ ಅಗತ್ಯವಾಗಿ ಕಟ್ಟಿಸಬೇಕಾಗಿದೆ. ಈ ರಸ್ತೆ ಮತ್ತು ಇದಕ್ಕೆ ಅಗತ್ಯವಾಗಿ ಆಗಬೇಕಾದ ಸೇತುವೆ ಇವುಗಳ ಬಗ್ಗೆ ಇದುವರೆಗೆ ಸರ್ಕಾರಕ್ಕೆ ನೂರಾರು ಅರ್ಜಿಗಳನ್ನು ಹಾಕಿಕೊಂಡಿದ್ದಾರೆ. ಹೀಗೆ ನಾವು ಇವುಗಳನ್ನು ಕೇಳುವುದಕ್ಕೆ ಪ್ರಾರಂಭಿಸಿ 8-10 ವರ್ಷಗಳ ಮೇಲಾಯಿತು. ಇಷ್ಟಾದರೂ ಸರ್ಕಾರದವರು ಮಲೆನಾಡಿನ ವಿಚಾರವಾಗಿ ಹೆಚ್ಚು ಗಮನ ತೆಗೆದುಕೊಂಡಿಲ್ಲ. ಕೇಳತಕ್ಕದ್ದು ನಮ್ಮ ಕರ್ತವ್ಯ; ಮಾಡಿಸತಕ್ಕದ್ದು ಸರ್ಕಾರದವರ ಕರ್ತವ್ಯ. ಆದ್ದರಿಂದ ಈ ಎರಡು ಕೆಲಸಗಳನ್ನು ಆದಷ್ಟು ಜಾಗ್ರತೆಮಾಡಿಸಿಕೊಡಬೇಕೆಂದು ಸರ್ಕಾರದವರಿಗೆ ಸಲಹೆಮಾಡುತ್ತೇನೆ.

ಇನ್ನು ಕಡೂರು-ಚಿಕ್ಕಮಗಳೂರು ರೈಲ್ವೆವಿಚಾರ— ಈ ರೈಲ್ವೆಯನ್ನು ಹಾಕಿಸಿಕೊಡಬೇಕೆಂದು ಅನೇಕ ವರ್ಷಗಳಿಂದಲೂ ಪದೇ ಪದೇ ಸರ್ಕಾರದವರನ್ನು ಒತ್ತಾಯಪಡಿಸುತ್ತಲೇ ಬಂದಿದ್ದೇವೆ. ನಮ್ಮ ಮಲೆನಾಡಿನಲ್ಲಿ ಬಹಳ ಬೆಲೆ ಬಾಳತಕ್ಕ ಬೆಳೆಗಳಾಗುತ್ತವೆ. ಕಾಫಿ, ಏಲಕ್ಕಿ, ಅಡಕೆ ಇತ್ಯಾದಿಗಳಲ್ಲದೆ, ಇನ್ನೂ ಬೇರೆ ಅನೇಕ ಬೆಳೆಗಳನ್ನು ತೆಗೆಯಲಾಗುತ್ತದೆ. ಅಲ್ಲಿ ಮಾವು, ಕಿತ್ತಳೆ, ಬಾಳೆಹಣ್ಣು, ಹಲಸಿನಹಣ್ಣು ಇತ್ಯಾದಿಗಳು ಬಹಳ ವಿಶೇಷವಾಗಿ ದೊರೆಯುತ್ತವೆ. ಆದರೆ ಸರಿಯಾದ ಸಂಚಾರ ಸೌಕರ್ಯಗಳಿಲ್ಲದೆ ಪ್ರಯುಕ್ತ್ಯಯಾರೂ ಅವುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಅನುಕೂಲವಾಗದೆ ಅವುಗಳೆಲ್ಲಾ ಅಲ್ಲೇ ಬಿದ್ದು ಕೊಳೆತು ಹೋಗುತ್ತಾ ಇವೆ. ಹೀಗೆ ಮಲೆನಾಡಿನ ವ್ಯಾಪಾರಾಭಿವೃದ್ಧಿಗೆ ಬಹಳ ಧಕ್ಕೆ ಬಂದಿದೆ. ಆದಕಾರಣ ಸರ್ಕಾರದವರು ಮಲೆನಾಡಿನ ಎಲ್ಲ ಜಿಲ್ಲೆಗಳಿಗೂ ರೈಲ್ವೆ ಸೌಕರ್ಯವನ್ನೊದಗಿಸಿಕೊಡುವಂತೆ ಕೇಂದ್ರ ಸರ್ಕಾರದವರಿಗೆ ಸೂಕ್ತ ಸಲಹೆಗಳನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಇನ್ನು ಮಲೆನಾಡಿನ ಆಸ್ಪತ್ರೆಗಳ ವಿಚಾರವಾಗಿ ಹೇಳಬೇಕೆಂದರೆ, ಸರ್ಕಾರದವರೇನೋ ಅಲ್ಲಿಗೆ ಕೆಲವು ಆಸ್ಪತ್ರೆಗಳನ್ನು ಕೊಟ್ಟಿದ್ದಾರೆ. ಆದರೆ ಅವುಗಳಿಂದ ಪ್ರಯೋಜನ ಮಾತ್ರ ಆಗುತ್ತಿಲ್ಲ. ಆಸ್ಪತ್ರೆಗಳಿದ್ದ ಕಡೆ ಡಾಕ್ಟರುಗಳಿರುವುದಿಲ್ಲ, ಡಾಕ್ಟರಿದ್ದ ಕಡೆ ಔಷಧಿಗಳಿರುವುದಿಲ್ಲ, ಹೀಗೆಲ್ಲಾ ಅವ್ಯವಸ್ಥೆಯಿಂದ ಕೂಡಿದ್ದಾಗಿವೆ, ಮಲೆನಾಡಿನ ಆಸ್ಪತ್ರೆಗಳು. ಉದಾಹರಣೆಗೆ ತಿಳಿಸಬಹುದಾದವು ಗೋಣೀಬೀಡು ಆಸ್ಪತ್ರೆ ಮತ್ತು ಜನ್ನಗದ್ದೆ ಆಸ್ಪತ್ರೆ. ಅಲ್ಲಿ ಆಸ್ಪತ್ರೆಗಳಿದ್ದರೂ ಅವುಗಳಿಂದ ಅಷ್ಟು ಪ್ರಯೋಜನವಾಗಿಲ್ಲ. ಇದಕ್ಕೆಲ್ಲಾ ಕಾರಣ, ತಾವು ಈ ಮೈದಾನ ಪ್ರದೇಶವಾದ ಬೆಂಗಳೂರು, ಮೈಸೂರು ಇತ್ಯಾದಿ ಸ್ಥಳಗಳಲ್ಲಿರತಕ್ಕ ಹುಡುಗರಿಗೇ ಹೆಚ್ಚು ಹೆಚ್ಚಾಗಿ ಮೆಡಿಕಲ್ ಸ್ಕೂಲು ಮತ್ತು ಕಾಲೇಜುಗಳಲ್ಲಿ ಸೀಟುಗಳನ್ನು ಕೊಡುತ್ತಿರುವುದು. ಈ ರೀತಿ ಕೊಟ್ಟು ಪಾಸ್ ಮಾಡಿಸಿ ಇಂಥ ಸ್ಥಳದಿಂದ ನಮ್ಮ ಮಲೆನಾಡಿನ ಪ್ರದೇಶಕ್ಕೆ ಅವರನ್ನು ವರ್ಗಮಾಡಿದರೆ, ಅವರು ಅಲ್ಲಿ 2-3 ತಿಂಗಳ ಕಾಲ ನಿಲ್ಲದೆ ವಾಪಸು ಬಂದು ಬಿಡುತ್ತಾರೆ. ಈ ಕಾರಣದಿಂದ ಮಲೆನಾಡಿನ ಆಸ್ಪತ್ರೆಗಳು ಸರಿಯಾಗಿ ನಡೆಯುತ್ತಿಲ್ಲ. ಅದಕ್ಕಾಗಿ ನಾನು ಏನು ಸಲಹೆ ಮಾಡುತ್ತೇನೆಂದರೆ, ಇನ್ನು ಮುಂದಕ್ಕೆ ಮಲೆನಾಡಿನಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಈ ಮೆಡಿಕಲ್ ಬಾಬಿನಲ್ಲಿ ಅಭ್ಯಾಸಮಾಡಲು ಹೆಚ್ಚು ಪ್ರೋತ್ಸಾಹ ನೀಡಿದ್ದೇ ಆದರೆ ಅವರು ಈ ವಿದ್ಯಾಭ್ಯಾಸ ಮುಗಿಸಿದನಂತರ ಡಾಕ್ಟರಾಗಿ ಬಂದ ಮೇಲೆ, ಅವರು ಆ ಮಲೆನಾಡಿನ ಪ್ರಾಂತದವರೇ ಆಗಿರುವುದರಿಂದ, ಅಲ್ಲಿಯೇ ಸೇವೆ ಮಾಡಲು ಅವಕಾಶವಾಗಿ ನಮ್ಮ ಇಂದಿನ ತೊಂದರೆಗಳೆಲ್ಲಾ ಪರಿಹಾರವಾಗಲು ಬಹಳ ಅನುಕೂಲವಾಗುತ್ತದೆ ಎಂದು. ಆದ್ದರಿಂದ ಮುಂದಕ್ಕೆ ಮಲೆನಾಡಿನಿಂದ ವಿದ್ಯಾಭ್ಯಾಸಮಾಡಲು ಬರತಕ್ಕ ವಿದ್ಯಾರ್ಥಿಗಳಿಗೆ ವಿಶೇಷ ಪ್ರಾಶಸ್ತ್ಯಕೊಟ್ಟು ತನ್ಮೂಲಕ ಮಲೆನಾಡಿನ ಕ್ಷೇಮಾಭಿವೃದ್ಧಿಗೆ ಸಹಾಯಮಾಡಬೇಕೆಂದು ಸರ್ಕಾರದವರಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಈಗ ಮಲೆನಾಡಿನಲ್ಲಿ ಡಿ.ಡಿ.ಟಿ. ಸ್ಪ್ರೇಮಾಡುತ್ತಿರುವುದರಿಂದ ಮಲೇರಿಯಾ ಹಾವಳಿ ಬಹಳ ಕಡಮೆಯಾಗಿದೆಯೆಂಬ ವಿಷಯ ತಿಳಿಸಲು ಬಹಳ ಸಂತೋಷಪಡುತ್ತೇನೆ. ಆದರೆ ಈ ಡಿ.ಡಿ.ಟಿ. ಸ್ಪ್ರೇ ಮಾಡಲು 5 ಮೈಲಿಗಳಿಗೆ ಒಂದರಂತೆ ಒಂದೊಂದು ಸೆಂಟರುಗಳನ್ನು ಮಾಡಲಾಗಿದೆ. ಈ ರೀತಿಯಾಗಿ ಈಗ ಕಳಸ, ಜಾವಗಲ್ಲು, ಹಿರೇಬೈಲು ಮುಂತಾದ ಕೆಲವು ಸ್ಥಳಗಳಲ್ಲಿ ಈ ಸ್ಪ್ರೇ ಮಾಡುವುದು ನಡೆಯುತ್ತಿದೆ. ಬಾಕಿ ಪ್ರದೇಶದಲ್ಲಿ ಮಾಡುತ್ತಿಲ್ಲ. ಆದ್ದರಿಂದ ಈ ಡಿ. ಡಿ. ಟಿ. ಯನ್ನು ಸಾಮೂಹಿಕವಾಗಿ ಸ್ಪ್ರೇಮಾಡುವಂತೆ ಏರ್ಪಾಡು ಮಾಡಬೇಕೆಂದೂ ಮತ್ತು ಇನ್ನೂ ಹೆಚ್ಚು ಹೆಚ್ಚು ಹೆಲ್ತ್ ಸೆಂಟರುಗಳನ್ನು ತೆರೆಯುವುದಕ್ಕೋಸ್ಕರವಾಗಿ ಬಡ್ಜೆಟ್ಟಿನಲ್ಲಿ ಹೆಚ್ಚು ಹಣವನ್ನು ಈ ಬಾಬಿಗೆ ಮೀಸಲಾಗಿಡಬೇಕೆಂದೂ ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಈಗ ಮಲೆನಾಡಿನಲ್ಲಿ ಕಮ್ಯೂನಿಟಿ ಪ್ರಾಜೆಕ್ಟುಗಳನ್ನು ಮಾಡಬೇಕೆಂದು ಮಾಡಿದ್ದೀರಿ. ಆದರೆ ಇವುಗಳನ್ನು ಸೊರಬ-ಶಿಕಾರಿಪುರ ತಾಲ್ಲೂಕುಗಳಲ್ಲಿ ಮಾಡಬೇಕೆಂದು ಮಾಡಿದ್ದೀರಿ. ಅವುಗಳನ್ನು ಅಲ್ಲಿ ಮಾಡುವುದಕ್ಕೆ ಬದಲಾಗಿ ತೀರ ಮಲೆನಾಡಾದ ಕೊಪ್ಪ ಮೂಡಿಗೆರೆ, ನರಸಿಂಹರಾಜಪುರ, ತೀರ್ಥಹಳ್ಳಿ ಮುಂತಾದ ಕಡೆಗಳಲ್ಲಿ ಮಾಡಿದ್ದರೆ, ಅಲ್ಲಿನ ಜನರಿಗೆ ತುಂಬಾ ಅನುಕೂಲವಾಗುತ್ತಿತ್ತು.

ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಮಲೆನಾಡು ಅಭಿವೃದ್ಧಿಯ ಬಗ್ಗೆ ಏನೇನು ಅಗತ್ಯವೆಂಬುದನ್ನು ಪರಿಶೀಲನೆಮಾಡಿ ಸರ್ಕಾರಕ್ಕೆ ಒಂದು ವರದಿಯನ್ನು ಒಪ್ಪಿಸಲು ಒಂದು ಸಮಿತಿಯನ್ನು ನೇಮಕಮಾಡಿದ್ದರು. ಆ ಸಮಿತಿಯವರು ಒಪ್ಪಿಸಿದ ವರದಿಗನುಸಾರವಾಗಿ ಸರ್ಕಾರದವರು ಕೆಲಸಮಾಡಿದ್ದರೆ ಇಂದು ಮಲೆನಾಡಿನಲ್ಲಿ ಚಿನ್ನದ ಹೊಳೆಯೇ ಹರಿಯುತ್ತಿತ್ತು. ಹಾಗೆ ಮಾಡಿರುವುದಿಲ್ಲವಾದ್ದರಿಂದ ಈಗಲಾದರೂ ಸರ್ಕಾರದವರು ಆ ಸಮಿತಿಯವರು ಕೊಟ್ಟಿರತಕ್ಕ ವರದಿಯ ಪ್ರಕಾರ ಕಾರ್ಯಕ್ರಮಗಳನ್ನು ಕೈಕೊಂಡು ಮಲೆನಾಡಿನ ಅಭಿವೃದ್ಧಿಗೆ ಅನುಕೂಲಮಾಡಿಕೊಡಬೇಕೆಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, ತಾವು ಎಲ್ಲಾ ಕೈಗಾರಿಕೆಗಳನ್ನೂ ಬಯಲುಸೀಮೆಗಳಲ್ಲೇ ಮಾಡಿ

(ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.)

ಮಲೆನಾಡಿಗೆ ಯಾವುದರಲ್ಲೂ ಪ್ರಾಶಸ್ತ್ಯಕೊಡದೆ ಹೋದದ್ದರಿಂದ ಅದು ದಿನೇ ದಿನೇ ಹೀನಸ್ಥಿತಿಗೆ ಬರಲು ಕಾರಣವಾಯಿತು. ನಾನಾಗಲೇ ಸೂಚಿಸಿದಂಥ ಮಲೆನಾಡು ಅಭಿವೃದ್ಧಿಸಮಿತಿಯವರು ನೀಡಿರತಕ್ಕ ಸಲಹೆಯಂತೆ, ಮಲೆನಾಡಿನಲ್ಲಿ ಕೆಲವು ಕೈಗಾರಿಕೆಗಳನ್ನಾದರೂ ಸ್ಥಾಪಿಸುವುದಕ್ಕೆ ಬಹಳ ಅನುಕೂಲವಾಗಿದೆ. ಅಲ್ಲಿ ಬೆತ್ತ, ಬಿದಿರು, ಬೆಂಡು, ಶ್ರೀಗಂಧ, ಬಲಗೀ ಇತ್ಯಾದಿ ಕೈಗಾರಿಕೆಗಳಿಗೆ ಅಗತ್ಯವಾಗಿ ಬೇಕಾದಂಥ ಮತ್ತು ಕಾಗದ, ಸಿಮೆಂಟ್ ಮುಂತಾದವುಗಳನ್ನು ತಯಾರಿಸಲು ಅನುಕೂಲವಾದಂಥ ಕಚ್ಚಾಮಾಲುಗಳು ವಿಶೇಷವಾಗಿ ದೊರೆಯುತ್ತಿರುವುದರಿಂದ ಅಲ್ಲಿ ಕೆಲವು ಕೈಗಾರಿಕೆಗಳನ್ನು ತಾವು ಏರ್ಪಾಡುಮಾಡಿದ್ದರೆ, ಈ ದಿವಸ ಅಲ್ಲಿರತಕ್ಕ ಬಡಜನರಿಗೆ ಕೂಲಿ ದೊರೆತು ಅವರಿಗೆ ಜೀವನೋಪಾಯವನ್ನು ಸುಲಭವಾಗಿ ನಡೆಸಿಕೊಂಡು ಹೋಗಲು ಒಂದು ಅನುಕೂಲವಾಗುತ್ತಿತ್ತು ; ಅಷ್ಟೇ ಅಲ್ಲದೆ ಸರ್ಕಾರದವರಿಗೂ ಅನುಕೂಲವಾಗುತ್ತಿತ್ತು. ಆದ್ದರಿಂದ ಅವರ ಸಲಹೆಗಳನ್ನು ಸರ್ಕಾರದವರು ತಕ್ಷಣ ಜಾರಿಗೆ ತರಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

ಮಲೆನಾಡಿನಲ್ಲಿ ಕಾಫಿ ಬೆಳೆ ಹೆಚ್ಚಾಗಿದೆ. ಈ ದಿವಸ ಎಲ್ಲ ವಸ್ತುಗಳ ಬೆಲೆಗಿಂತಲೂ, ಈ ಕಾಫೀ ಬೀಜದ ಬೆಲೆ ಹೆಚ್ಚಾಗಿದೆ. ಅದು ಬೆಳೆಯುವವರಿಗೆ ಸಿಕ್ಕುತ್ತಿಲ್ಲ. ನಮ್ಮ ಇಡೀ ಇಂಡಿಯಾ ದೇಶದಲ್ಲಿ ಉತ್ಪತ್ತಿಯಾಗತಕ್ಕ ಸುಮಾರು ಇಪ್ಪತ್ತೊಂದು ಸಾವಿರ ಟನ್ ಕಾಫಿ ಬೀಜದಲ್ಲಿ ಅರ್ಧ ಭಾಗದಷ್ಟು ಕಾಫಿ ಬೆಳೆ ನಮ್ಮ ಮೈಸೂರಿನಲ್ಲಿ ಆಗುತ್ತದೆ. ನಮ್ಮ ಜಿಲ್ಲೆಯಲ್ಲೇ ಹೆಚ್ಚಾಗಿ ಬೆಳೆಯುತ್ತದೆ. ಯುದ್ಧಕ್ಕೆ ಮುನ್ನ ನಮ್ಮ ಇಂಡಿಯಾ ದೇಶದಿಂದ ಪರದೇಶಗಳಿಗೆ ಸುಮಾರು 10 ಸಾವಿರ ಟನ್ ಕಾಫೀಬೀಜವನ್ನು ರಫ್ತುಮಾಡಲಾಗುತ್ತಿತ್ತು. ಈಗ ಎರಡು ಸಾವಿರ ಟನ್‌ಗಳನ್ನು ಮಾತ್ರ ಕಳುಹಿಸುತ್ತಿದ್ದಾರೆ. ಪರದೇಶದ ಹಣ ನಮ್ಮ ಸೀಮೆಗೆ ಬರುತ್ತಿತ್ತು. ಹಾಗೆ ಹಿಂದೆ ಬರುತ್ತಿದ್ದಂಥ ಹಣವೆಲ್ಲಾ ನಮ್ಮ ಸಂಸ್ಥಾನಕ್ಕೆ ಬರುತ್ತಿದ್ದುದು ಈ ದಿವಸ ಇಂಡಿಯಾ ಸರ್ಕಾರದವರ ಕೈಸೇರಿದೆ. ಒಂದು ಹಂಡ್ರೆಡ್‌ವೈಟ್ ಕಾಫಿ ಬೀಜದ ಮಾರಾಟದಿಂದ 21 ರೂಪಾಯಿಗಳು ಎಕ್ಸೈಜು ಡ್ಯೂಟಿಯ ರೂಪದಲ್ಲೂ 4 ರೂಪಾಯಿಗಳು ಮಾರಾಟ ತೆರಿಗೆ ರೂಪದಲ್ಲೂ ನಮಗೆ ಬರುತ್ತಿದೆ. ಇಂಥ ಆದಾಯ ಕೊಡತಕ್ಕ ಬೆಳೆ ಬೇರೊಂದಿಲ್ಲ. ಹೀಗೆ ಇನ್ನೂ ಎಷ್ಟೋ ಆದಾಯ ತರತಕ್ಕ ಬೆಳೆಗಳು ಆ ನಮ್ಮ ಮಲೆನಾಡಿನಲ್ಲಿ ಉತ್ಪತ್ತಿಯಾಗುತ್ತವೆಂದು ತಿಳಿಸಿದರ ಅದೊಂದು ನಮ್ಮ ಜಿಲ್ಲೆಯ ಮತ್ತು ಮಲೆನಾಡಿನ ಹಿರಿಮೆಯೆನ್ನಬೇಕು.

ಕೆರೆಗಳ ವಿಚಾರ. ನಮ್ಮ ಜಿಲ್ಲೆಯಲ್ಲಿ ಸುಮಾರು 2,300 ಕೆರೆಗಳಿವೆ. ಅವುಗಳ ಪೈಕಿ ಸುಮಾರು 2,000 ಕೆರೆಗಳು ಹೂತುಹೋಗಿವೆ. ಇನ್ನೂ ಅಷ್ಟಿಷ್ಟು ಜನ, ಜಾನುವಾರುಗಳಿಗೆ ನೀರನ್ನು ಸರಬರಾಯಿ ಮಾಡುತ್ತಿರುವ ಕೆರೆಗಳು 300 ಇವೆ. ಯಾವುದೋ ಪಾಳೇಗಾರರ ಕಾಲದಲ್ಲಿ ಕಟ್ಟಿಸಿದ್ದ ಈ ಕೆರೆಗಳೆಲ್ಲಾ ದುರಸ್ತಿಲ್ಲದೆ ಇಂದು ಹಾಳು ಬಿದ್ದಿವೆ. ಈ ಕೆರೆಗಳನ್ನೆಲ್ಲಾ ಸರಿಯಾಗಿ ಕಾಲ ಕಾಲಕ್ಕೆ ರಿಪೇರಿ ಮಾಡಿಸಿ ಇಟ್ಟುಕೊಂಡಿದ್ದರೆ ಈ ದಿನವೇ ನಮಗೆ ಹೊಟ್ಟೆ ಬಟ್ಟೆಯ ವ್ಯಸನ ಇರುತ್ತಿರಲಿಲ್ಲ. ಆದುದರಿಂದ ಆದಷ್ಟು ಬೇಗ ಈ ಕೆರೆಗಳನ್ನು ದುರಸ್ತುಮಾಡಿಸಿ ಹೆಚ್ಚು ಬೆಳೆ ಬೆಳೆಯಲು ಸಹಾಯಮಾಡಿಕೊಡಿ. ಆದರೆ ನಮ್ಮ ಜಿಲ್ಲೆಯಲ್ಲಿ ರೈತರ ಅನುಕೂಲಕ್ಕಾಗಿ ಒಂದಾದರೂ ಟ್ರಾಕ್ಟರನ್ನು ಕೊಟ್ಟಿಲ್ಲ. ನಾನು ಒಂದಾವರ್ತಿ ಕಳಸಕ್ಕೆ ಹೋಗಿದ್ದಾಗ್ಗೆ ಜನರೆಲ್ಲಾ ಬಹಳವಾಗಿ ಹೇಳಿಕೊಂಡು ಒಂದು ಟ್ರಾಕ್ಟರನ್ನು ತರಿಸಿಕೊಡಿ ಎಂದು ಕೇಳಿಕೊಂಡರು. ಆಗ ನಾನು ಚಿಕ್ಕಮಗಳೂರಿನಲ್ಲಿರತಕ್ಕ ವ್ಯವಸಾಯದ ಇಲಾಖಾಧಿಕಾರಿಗಳಿಗೆ ಒಂದು ಪತ್ರ ಬರೆದು ಕಳುಹಿಸಿದ್ದೆ. ಅದಕ್ಕೆ ಅವರು "ನಮ್ಮ ಜಿಲ್ಲೆಯಲ್ಲಿ ಟ್ರಾಕ್ಟರುಗಳಿಲ್ಲ" ಎಂದು ಉತ್ತರ ಬರೆದಿದ್ದರು. ಆದ ಕಾರಣ ನಾನೀಗ ಸೂಚನೆಕೊಟ್ಟಿರತಕ್ಕ ವಿಚಾರಗಳನ್ನು ಸರ್ಕಾರದವರು ತಮ್ಮ ನಿಗಾಕ್ಕೆ ತೆಗೆದುಕೊಂಡು ಇವುಗಳನ್ನೆಲ್ಲಾ ನರಿಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಚಾರ. ನಮ್ಮ ಜಿಲ್ಲೆಯಲ್ಲಿರತಕ್ಕ ಹಳ್ಳಿಗಳಿಗೆ ತಾವು ಈಗ ಕೊಟ್ಟಿರತಕ್ಕ ಸ್ಕೂಲುಗಳು ಬಹಳ ಕಡಮೆ. ಮೈದಾನಕ್ಕೂ ಮಲೆನಾಡಿಗೂ ಬಹಳ ವ್ಯತ್ಯಾಸವಿದೆ. ಮೈದಾನ ಪ್ರದೇಶದಲ್ಲಿ ಒಂದೊಂದು ಗ್ರಾಮದಲ್ಲಿಯೂ ಸಾವಿರಾರು ಜನರು ವಾಸಮಾಡುತ್ತಿದ್ದಾರೆ. ಆದರೆ ಮಲೆನಾಡಿನಲ್ಲಿ ಹಳ್ಳಿಗೆ 3-4 ಮನೆಗಳಿರುವಂಥ ಹಳ್ಳಿಗಳೂ ಇರುತ್ತವೆ. ಆದ ಕಾರಣ ಯಾವ ಯಾವ ಗ್ರಾಮದಲ್ಲಿ 1,000-1,500 ಜನಸಂಖ್ಯೆಗೆ ಮೇಲ್ಪಟ್ಟ ಪ್ರಜಾಸಂಖ್ಯೆ ಇರುತ್ತದೋ ಅಂಥಾ ಸ್ಥಳಗಳಿಗೆ ಮಾತ್ರವೇ ಸ್ಕೂಲನ್ನು ಕೊಡಬೇಕೆಂಬ ಸರ್ಕಾರಿ ನಿಯಮವು ಕೇವಲ ಬಯಲು ಸೀಮೆಗೆ ಅನ್ವಯಿಸಬಹುದೇ ಶಿವಾಯಿ ಮಲೆನಾಡಿಗೆ ಅದು ಅನ್ವಯಿಸುವುದಿಲ್ಲ. ತಾವು ಕೊಂಚ ಉದಾರಭಾವದಿಂದ ಮಲೆನಾಡನ್ನು ಪರಿಗಣಿಸಿ ನೋಡಬೇಕಾಗಿದೆ. ಅಲ್ಲಿಗೆ ಇನ್ನೂ ಹೆಚ್ಚು ಹೆಚ್ಚು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇಷ್ಟೇ ಅಲ್ಲದೆ ಈ ಪಾಠಶಾಲೆಗೆ ತಾವು ಕಳುಹಿಸತಕ್ಕಂಥ ಉಪಾಧ್ಯಾಯರುಗಳು ಕೇವಲ ಎಲ್. ಎಸ್. ಮಾಡಿದವರು, ಇಲ್ಲವೇ ಅದರಲ್ಲಿ ಫೈಲ್ ಆಗಿರತಕ್ಕಂಥವರಾಗಿರುತ್ತಾರೆ. ಇಂಥವರಿಗೆ ಸರಿಯಾಗಿ ಪಾಠಕ್ರಮ ಮಾಡುವುದು ಗೊತ್ತಾಗುವುದಿಲ್ಲ. ಹಳ್ಳಿಯ ಜನರು ಮಾಡತಕ್ಕ ವಿದ್ಯಾಭ್ಯಾಸವಾದರೋ ಒಂದು ಮಿಡಲ್ ಸ್ಕೂಲ್ ವ್ಯಾಸಂಗ ಅಥವಾ ಇನ್ನೂ ಜಾಸ್ತಿ ಎಂದರೆ ಒಂದು ಎಸ್.ಎಸ್.ಎಲ್.ಸಿ. ಇಷ್ಟನ್ನಾದರೂ ಅವರು ಸರಿಯಾಗಿ ಕಲಿಯಬೇಕಾಗಿದ್ದರೆ ತಾವು ಒಳ್ಳೆಯ ಸುಶಿಕ್ಷಿತ ಉಪಾಧ್ಯಾಯರನ್ನು ಕಳುಹಿಸಬೇಕು. ಅಂಥ ದಕ್ಷರಾದ ಉಪಾಧ್ಯಾಯರು ಈಗ ತಾವು ಕೊಡತಕ್ಕ ಸಂಬಳಕ್ಕೆ ಬರಲು ಸಾಧ್ಯವಿಲ್ಲ. ಆದಕಾರಣ ತಾವು ಉಪಾಧ್ಯಾಯರ ಸಂಬಳವನ್ನು ಇನ್ನೂ ಸ್ವಲ್ಪ ಹೆಚ್ಚುಮಾಡಿ ಮಲೆನಾಡಿನ ಮಕ್ಕಳ ವಿದ್ಯಾಭಿವೃದ್ಧಿಗೆ ಸಹಾಯನೀಡಬೇಕಾಗಿದೆ. ಇನ್ನು ಮಲೆನಾಡಿಗೆ ಬರತಕ್ಕ ಎಲ್ಲ ನೌಕರರಿಗೂ ಸಂಬಳ, ಭತ್ಯ ಮತ್ತು ಮಲೆನಾಡು ಅಲೋಯೆನ್ಸು ಇತ್ಯಾದಿಗಳನ್ನೆಲ್ಲಾ ಕೊಟ್ಟು ಅವರು ಶ್ರದ್ಧೆಯಿಂದ, ದಕ್ಷತೆಯಿಂದ ಅಲ್ಲಿ ಕೆಲಸಮಾಡಿ ಮಲೆನಾಡನ್ನು ಮುಂದಕ್ಕೆ ತರುವಂತೆ ಮಾಡಬೇಕೆಂದು ತಮ್ಮಲ್ಲಿ ನಾನು ಮನವಿಮಾಡಿಕೊಳ್ಳುತ್ತೇನೆ. ಈ ನಿರ್ಣಯಕ್ಕೆ ಎಲ್ಲಾ ಮಾನ್ಯ ಸದಸ್ಯರೂ ಬೆಂಬಲನೀಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಮಲೆನಾಡಿಗೆ ಹೆಚ್ಚು ಪ್ರೋತ್ಸಾಹನೀಡಿದ್ದಿದ್ದರೆ ಇಂದು ಕೋಲಾರ ಜಿಲ್ಲೆಯಲ್ಲಿ ಸಂಭವಿಸಿರುವ ಕ್ಷಾಮವನ್ನು ಒಂದು ವರ್ಷದೊಳಗಾಗಿಯೇ ಪರಿಹಾರಮಾಡಬಹುದಾಗಿತ್ತು. ಈ ನಾನಾ ವಿಚಾರಗಳ ಬಗ್ಗೆ ಸರ್ಕಾರದವರು ತೀವ್ರ ಆಲೋಚನೆಮಾಡಿ ಸಂಸ್ಥಾನದ ಹಾಗೂ ಮಲೆನಾಡಿನ ಸಂಪದಭಿವೃದ್ಧಿಗೆ ಅನುಕೂಲಮಾಡಿ ಕೊಡಬೇಕೆಂದು ತಿಳಿಸಿ, ನಾನು ಈ ಖೋತಾ ಸೂಚನೆಯನ್ನು ಹೃತ್ಪೂರ್ವಕವಾಗಿ ಸಮರ್ಥಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

Personally I feel that the Hon'ble mover has done exceedingly well. I would request the Hon'ble Chief Minister to reply.

3 P.M.

ಶ್ರೀ ಕೆ. ಹನುಮಂತಯ್ಯನವರು (ಮುಖ್ಯ ಮಂತ್ರಿಗಳು).—ಸ್ವಾಮಿ, ಈ ದಿವಸ ಮಲೆನಾಡು ಅಭಿವೃದ್ಧಿಯ ವಿಷಯದಲ್ಲ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಮಲೆನಾಡು ಅಭಿವೃದ್ಧಿ ಹೊಂದಬೇಕೆಂಬ ಉದ್ದೇಶವು ಸರ್ಕಾರಕ್ಕೂ, ಸಭೆಗೂ ಇದೆ. ಈಗ ತಂದಿರುವ ಖೋತಾ ಸೂಚನೆಯಲ್ಲಿ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಅಷ್ಟು ಮಾತ್ರ ಪ್ರಸ್ತಾಪಮಾಡಿದರು. ಈಗ ಬಡ್ಜೆಟ್ಟನ್ನು ಸಭೆಯ ಮುಂದಿಟ್ಟ ಮೇಲೆ ಹಣಕಾಸಿನ ಪರಿಸ್ಥಿತಿ ಹೇಗಿದೆಯೆಂಬುದು ಶ್ರೀಮತಿ ಸುಬ್ಬಮ್ಮನವರಿಗೆ ಗೊತ್ತು. ಹೀಗಿದ್ದರೂ ಕೂಡ ಮಲೆನಾಡು ಅಭಿವೃದ್ಧಿಗಾಗಿ ಕಮ್ಯೂನಿಟಿ ಪ್ರಾಜೆಕ್ಟಿಗೆ ಸುಮಾರು 60–70 ಲಕ್ಷ ರೂಪಾಯಿಗಳನ್ನು ಮಲೆನಾಡು ಪ್ರಾಂತಕ್ಕೆ ಕೊಟ್ಟಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡರು (ಅರಕಲಗೂಡು).—ಮಲೆನಾಡಿಗೆ ಅದು ಜಾಸ್ತಿಯಲ್ಲ.

Mr. SPEAKER.—Wait and see. He is going to tell you that he has provided one crore of rupees under the Five Year Plan.

Sri G. A. THIMMAPPA GOWDA (Arkalgud).—May I know how much of the amount has not been spent under this year's allotment?

Mr. SPEAKER.—He is answering.

ಶ್ರೀ ಕೆ. ಹನುಮಂತಯ್ಯನವರು.—ಈ ಹಣದ ವಿಚಾರದಲ್ಲಿ ಈವಾಗಲೇ ಶ್ರೀ ತಿಮ್ಮಪ್ಪಗೌಡರು ಹೋಲಿಸಿ ನೋಡಿಕೊಳ್ಳುತ್ತಾ ಹೋದರೆ ಆ ಮೇಲೆ ಹೆಚ್ಚಾಗಿ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಈಗ ಇಷ್ಟು ಹಣ ಕೊಟ್ಟಿದೆ, ಮುಂದಕ್ಕೆ ಇಷ್ಟನ್ನು ಕೊಡುತ್ತೇವೆ ಎಂದು ಹೇಳಿ ನಿಗದಿಮಾಡಿಸಿಕೊಳ್ಳುವುದಕ್ಕಿಂತ ಸರ್ಕಾರದ ಅವಗಾಹನೆಗೆ ಇದನ್ನು ಬಿಡಿ. ಆಗ ಸಾಧ್ಯವಾದಷ್ಟು ಹಣ ಒದಗಿದ ಹಾಗೆಲ್ಲಾ ಈ ಮಲೆನಾಡು ಅಭಿವೃದ್ಧಿ ಕೆಲಸಕಾರ್ಯಗಳಿಗೆ ಉಪಯೋಗಿಸೋಣ. ಆದ್ದರಿಂದ ಶ್ರೀಮತಿ ಸುಬ್ಬಮ್ಮನವರು ಈ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ನಮ್ಮ ಸರ್ಕಾರದವರು ಮಲೆನಾಡು ಅಭಿವೃದ್ಧಿಗೆ ಹೆಚ್ಚು ನಿಗ ಕೊಡುತ್ತಾರೆಂಬ ಭರವಸೆಯಿಂದ ಈ ಸೂಚನೆಯನ್ನು ವಾಪಸುತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, withdrawn.

Mr. SPEAKER.—We have only one Demand for today. It may not take more than half an hour to discuss it including this cut motion. That is how I feel. Subject to your decision, we may sit till 3-30 P.M. and rise for the day.

Janab J. MOHAMED IMAM.—We want to speak generally on the Demand

Mr. SPEAKER.—So, the House will now rise for lunch.

The Assembly adjourned for Lunch at Three Minutes past Three of the Clock and re-assembled at Thirty Five Minutes past Three of the Clock.

[**Mr. SPEAKER in the chair.**]

Mr. SPEAKER.—Regarding cut motion No. 10 standing in the name of Sri H. C. Linga Reddy, I would propose that it may be taken up under Demand No. 30 "Famine Relief."

Sri H. C. LINGA REDDY.—I have no objection, Sir.

Mr. SPEAKER.—Now the Demand is before the House.

Janab J. MOHAMED IMAM (Jagalur).—Sir, I oppose the Demand. I feel it is my duty to oppose the Demand just to raise a few points and to bring to the notice of the Government certain salient features. I call this session a session whose primary and main duty is to improve the finances; the Chief Minister has given the lead. I do not propose to make any more proposals. I think, on other occassions, we have given our views on this important subject.

My first duty will be to give my opinion regarding this hall. This hall has been constructed to accommodate only the Members of the Legislative Assembly when they come here for the sessions. On the first day alone, the Chief Minister asked me to give my opinion about this hall, and I said that I would defer my opinion till I know exactly how I felt. It is now my duty to bring to his notice some defects existing in this hall. The Members of this House are very far from one another. I wish we were nearer as we were in the old Legislative Assembly hall. One section is very near and the other section very far off. For example

(JANAB J. MOHAMED IMAM)

the Members sitting on the other side are very far from the Members sitting here. We have little opportunity to see each other's complexion or physiognomy.

Sri K. PATTABI RAMAN (Kolar).—That is why I insisted on that seat (referring to the first seat).

Janab J. MOHAMED IMAM.—I prefer a semi-circular hall.

Secondly, I must point out that the accoustic properties of this hall are not clear. I feel our voices are disturbed by a certain amount of echo. I understand that the Members sitting at the other end do not get a clear idea of what we speak at this end. Specially, when we are a little away from the mike they will not be in a position to get a true account of the statement made by Members this side. I am not entering into the amount that has been spent on the renovation of this hall. I feel that the amount spent is a little more than we are justified to spend under the present circumstances. The other day, information was given that they have spent nearly 30,000 on the seating accommodation and that comes to nearly Rs. 300 for each seat. I must say that it is a little more than what should be spent and we have spent much more than we are justified in spending. The entire amount of one lakh that has been spent is, I think, not justified to be spent at the present time. I believe it is the construction of this hall that delayed the holding of the meeting of the new Legislative Assembly. We had to wait for more than four months. We were elected before 24th January and we met in the middle of June, nearly four months after. I think this is the first time that any Assembly which has been elected has taken such a long time to meet.

Sri K. HANUMANTHAIYA.—The new Ministry came into office on the 1st of April.

Janab J. MOHAMED IMAM.—We could have met in the month of April or early May.

Sri K. HANUMANTHAIYA.—We must give proper notice.

Janab J. MOHAMED IMAM.—There was ample time for all that. If this hall was not ready, it was quite possible for us to meet in any other hall like the Town Hall or the Victory Hall. (Interruption). My friend says that the old Ministry continued too long in the office and the new Ministry should have taken charge much earlier.

Mr. SPEAKER.—I do not think it was said so.

Janab J. MOHAMED IMAM.—My friend here said so.

I must bring to the notice of the Government a few other points over which they have to exercise vigilance and supervision. Just now Srimathi Subbamma made out a strong case on behalf of *malnad*. She said that since *malnad* is a sickly area, it requires special attention. I think, with due deference to the Hon'ble Minister for *Malnad* I have to differ from that. Government have two children; one is *malnad* and the other is *bengadu*. I cannot understand the vociferous voice of the people coming from *malnad* and the big noise they are making on behalf of *malnad*. I am not against giving special attention to *malnad*. But let it not be at the cost of *bengadu*. *Malnad* has all natural resources. You can distinguish it from other districts in that it has got all the natural resources and it is very rich in wealth. Almost all important industries are located in *malnad*. Almost all important commercial crops, money bringing crops are found in *malnad*.

Sri K. HANUMANTHAIYA.—All important men come from *malnad*. (Laughter).

Janab J. MOHAMED IMAM.—Yes, all important men come from *malnad*. Government have spent a lot of money on *malnad*. Coffee, cardamom, areca, fuel, timber and what not? I do not know...

Sri Kadidal MANJAPPA (Minister for Revenue and Public Works).—We are helping you in respect of these requirements.

Janab J. MOHAMED IMAM.—It is your duty to help us. Look at *bengadu* They are entirely helpless. They

entirely depend upon Nature. If there is rainfall they will get food crops.

Sri H. S. RUDRAPPA (Honnali).—We are not getting any crops without rains.

Janab J. MOHAMED IMAM.—*Malnad* has got abundant rainfall. But in *Bengadu*, we are helpless. This year rains have failed throughout *maidan* and the position is very precarious. As I said, I am not against helping the *malnad*. From the point of view of health, perhaps there is a drawback in *malnad*, but even that has been overcome of late.

Sri Kadidal MANJAPPA.—Why not people of bengadu go to *malnad*?

Janab J. MOHAMED IMAM.—All right, take us. You always find distress and famine in *maidan* and we are dependent on the rainfall. Especially this year the situation is very precarious unless Government come forward with proper measures.

Mr. SPEAKER.—The Hon'ble Minister knows that, though you are against him, your own partyman, Sri Gopala Gowda, would differ from you!

Janab J. MOHAMED IMAM.—I said that I am not against helping *malnad*. But while trying to help *malnad* do not forget *maidan*. It is our duty to see from now alone what to do for *maidan* people; how to overcome the famine and distress there. I do not want to take much time. That is why I have not entered into controversial matters.

The next point which I want to bring to the notice of the Government is about the roads.

I said on another occasion that our roads would not do credit to us. Our roads were once upon a time very good. Of late their conditions have very much deteriorated due to increased motor traffic. Government in the year 1944–45 sanctioned a scheme......

Sri Kadidal MANJAPPA.—Is this the proper occasion to speak on this subject?

Janab J. MOHAMED IMAM—I am speaking generally because it is part of the administration.

Mr. SPEAKER.—He has given an assurance that he will not take much time.

Janab J. MOHAMED IMAM.—I know we have to disperse at 4–45.

In the year 1944–45 we laid out a programme of cement concreting. I was mainly responsible for the laying out of thiry or forty miles of cement concrete roads. Afterwards that proposal was given up for want of cement and for want of finance. I am stressing this to point out that the present day conditions of the roads require improvement. We have to change our view in regard to the repairs of roads. Metal and gravel roads were all right prior to 1925 when there was very little motor traffic, when the traffic was mainly confined to cart traffic. With the increase in the number of buses and motor vehicles and with the increase in the heavy traffic including the military, the present system of maintenance is out of date. However much you may spend on metalling or tarring of the roads that service will not stand the present day increased traffic. I have been throughout England and there practically every road is cement concreted.

Sri K. HANUMANTHAIYA.—Not every road.

Janab J. MOHAMED IMAM.—Practically every road.

Sri K. HANUMANTHAIYA.—Not cement but a mixture of tar and cement.

Janab J. MOHAMED IMAM.—There, every road is either concreted or asphalted with the help of the present day machinery. But the mode of repairs, the machinery we use, the agency we have are all out-of-date. You must think of something up-to-date to keep up the present day standard. The only thing is cementing them according to......

Sri Kadidal MANJAPPA.—The cost is prohibitive.

Janab J. MOHAMED IMAM.—Does not matter. You spread it over a number of years.

Sri K. HANUMANTHAIYA.—To be met out of Reserve Funds?

Janab J. MOHAMED IMAM.—Well Sir, I gave that reserve money to you. That apart, there is a programme to cement the road from Mysore to Harihar. You know the road from Mysore to Mandya is cement-concreted. These

(JANAB J. MOHAMED IMAM)

important roads, at least, may be taken up for cement concreting. You spread the cost over a number of years, it does not matter. You take at least 10 miles a year, I am satisfied.

Sri Kadidal MANJAPPA.—We are doing so.

Janab J. MOHAMED IMAM.—It is this which I wanted to bring to the notice of the Government. With this, Sir, I close.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು).—ಸ್ವಾಮಿ ಈ ಡಿಮ್ಯಾಂಡನ್ನು ವಿರೋಧಿಸುತ್ತಾ ಸರ್ಕಾರದವರ ಗಮನಕ್ಕೆ ಒಂದು ಮುಖ್ಯ ವಿಷಯವನ್ನು ತರಬೇಕೆಂದು ಅಪೇಕ್ಷೆ ಪಡುತ್ತೇನೆ. ಈಗ ನಮ್ಮ ದೇಶದ ಎಲ್ಲಾ ಭಾಗಗಳಲ್ಲೂ ಮಳೆ ಪೂರ್ತಿಯಾಗಿ ಹೋಗಿಬಿಟ್ಟಿದೆ. ಈಗಾಗಲೇ ಜುಲೈ ತಿಂಗಳು ಪ್ರಾರಂಭವಾದರೂ ಕೂಡ ಎಲ್ಲಿಯೂ ಮಳೆಯಿಲ್ಲ; ಸಾಮಾನ್ಯವಾಗಿ ಇಷ್ಟರೊಳಗೆ ಎಲ್ಲಾ ಕಡೆಯಲ್ಲೂ ರಾಗಿ ಫಸಲನ್ನು ಬಿತ್ತಿರಬೇಕಾಗಿತ್ತು. ಅಂಥಾದ್ದು ಇವೊತ್ತಿನವರೆಗೂ ಎಲ್ಲೂ ಬಿತ್ತಲು ಸಾಧ್ಯವಾಗಿಲ್ಲ. ಹೀಗಿರುವಾಗ ಮುಂದೆ ಎಷ್ಟರ ಮಟ್ಟಿಗೆ ಇದು ದೇಶದಲ್ಲಿ ಹಾಹಾಕಾರವೆಬ್ಬಿಸುತ್ತದೆಂಬುದನ್ನು ಗಮನಿಸಿ ಈಗಲೇ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ಸರ್ಕಾರದ ಪ್ರಥಮ ಕರ್ತವ್ಯ. ಈಗಾಗಲೇ ನಮ್ಮಲ್ಲಿ ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಕ್ಷಾಮದ ದೆಸೆಯಿಂದ ಎಷ್ಟರಮಟ್ಟಿಗೆ ಜನ ನೊಂದಿದ್ದಾರೆ, ಅದರ ಪರಿಹಾರಕ್ಕಾಗಿ ಎಷ್ಟು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ, ಮತ್ತು ಇಷ್ಟೆಲ್ಲಾ ಮಾಡಿದರೂ ಜನರು ಹೇಗೆ ನಿತ್ರಾಣದಿಂದ ಕೂಡಿದ್ದಾರೆಂಬುದೂ ಗೊತ್ತಿದೆ. ಸಾಮಾನ್ಯವಾಗಿ ಕೆಲವು ಭಾಗಗಳಲ್ಲಿ ಮಳೆಗಾಲದಲ್ಲೇ ವ್ಯತ್ಯಾಸ ಬಂದಿದೆಯೆಂದು ಗೊತ್ತಾಗಿದೆ. ಇದಕ್ಕೇನು ಕಾರಣವೋ ಹೇಳುವುದಕ್ಕಾಗುವುದಿಲ್ಲ. ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಇದಕ್ಕೆ ಮುಖ್ಯವಾಗಿ ಒಂದು ಖಾಯಂ ಆದ ಖಾಯಂ ನಿವಾರಣೋಪಾಯವನ್ನು ಕಂಡು ಹಿಡಿಯಬೇಕಾದುದು ನಮ್ಮೆಲ್ಲರ ಕರ್ತವ್ಯ.

ಈ ಸಂದರ್ಭದಲ್ಲಿ ಒಂದನೆಯದಾಗಿ ಅಲ್ಲಿನ ನೀರಾವರಿ ಏರ್ಪಾಡುಗಳ ಕಡೆ ಗಮನ ಕೊಡಬೇಕಾಗುತ್ತದೆ. ಇದರಿಂದ ಅಕಸ್ಮಾತ್ತಾಗಿ ಮಳೆ ಬಂದರೆ ಅದರಿಂದ ಹೆಚ್ಚಿನ ಅನುಕೂಲ ಪಡೆಯಲು ಸಾಧ್ಯವಾಗುತ್ತದೆ. ಈಚೀಚೆಗೆ ಆ ಪ್ರದೇಶಗಳಲ್ಲಾಗುವ ಮಳೆಗಾಲವನ್ನು ನೋಡಿಕೊಂಡರೆ, ಯಾವ ವರ್ಷವೂ ಮಳೆ ಸರಿಯಾಗಿ ನಡೆಯುವಂತೆ ಕಾಣುವುದಿಲ್ಲ. ನಮ್ಮ ಕಡೆಯಲ್ಲಿ ನೊಣವಿನಕೆರೆ, ಅಣತಿ, ಮಲ್ಲಾಗಟ್ಟ ಮುಂತಾದ ಕೆರೆಗಳು ತುಂಬಿ 8 ವರ್ಷ—10 ವರ್ಷಗಳಾದುವು. ಒಂದು ಬೆಳೆಯನ್ನೂ ಕೂಡ ಅವರು ತೆಗೆದುಕೊಂಡಿಲ್ಲ. 50 ವರ್ಷಗಳ ಸರಾಸರಿ ಮಳೆಯ ಲೆಕ್ಕ ನೋಡಿದರೆ ಯಾವ ವರ್ಷ 28 ಅಂಗುಲಕ್ಕಿಂತ ಹೆಚ್ಚಿಗೆ ಮಳೆ ಬರುತ್ತದೆಯೋ ಆ ವರ್ಷ ಈ ಕೆರೆಗಳು ತುಂಬಿವೆ, ಮಿಕ್ಕ ವರ್ಷಗಳಲ್ಲಿ ತುಂಬಲ್ಲ ಎಂದು ತಿಳಿದುಬರುತ್ತದೆ. ಹೀಗಿರುವಾಗ ಕಳೆದ 8—10 ವರ್ಷಗಳಿಂದ 18 ಇಂಚು 20 ಇಂಚುಗಳೊಳಗೇ ಮಳೆಯಾಗಿದೆ ಅಂದ ಮೇಲೆ ಮಳೆಗಾಲವೇ ಕಡಮೆಯಾಗಿದೆಯೆಂದು ಗೊತ್ತಾಗುತ್ತದೆ. ಇದೇ ನಮ್ಮಲ್ಲನೇಕ ಕಡೆಗಳಲ್ಲಿ ಕ್ಷಾಮಕ್ಕೆ ಕಾರಣವಾಗಿದೆ.

ಈಗ ನಮ್ಮ ಕಡೆಯಲ್ಲಿನ ಸದ್ಯದ ಪರಿಸ್ಥಿತಿಯನ್ನು ಹೇಳುವುದಾದರೆ, ಅಲ್ಲಿ ಜನಗಳಿಗೆ ಹುಲ್ಲನ್ನು ಒದಗಿಸಿಕೊಳ್ಳುವುದೇ ಬಹಳ ದೊಡ್ಡ ಸಮಸ್ಯೆಯಾಗಿದೆ. ಜನಗಳ ಮತ್ತು ದನಗಳ ಈ ಕಷ್ಟವನ್ನು ಪರಿಹಾರ ಮಾಡಬೇಕೆಂದು ಒತ್ತಾಯ ಮಾಡಿದ್ದರಲ್ಲಿ ರೈಲ್ವೆ ಸೌಕರ್ಯವಿಲ್ಲದಿರುವುದರಿಂದ ಬೇಗ ಯಾವ ಸಹಾಯವನ್ನೂ ಒದಗಿಸಲು ಸಾಧ್ಯವಿಲ್ಲವಾಗಿದೆಯೆಂದು ಗೊತ್ತಾಗಿದೆ. ಇದನ್ನು ಆದಷ್ಟು ಜಾಗ್ರತೆ ಸರಿಪಡಿಸಬೇಕು. ಸದ್ಯಕ್ಕೆ ದನಗಳನ್ನು ಉಳಿಸಿಕೊಂಡರೆ ಎಷ್ಟೋ ಬದುಕಿದಂತಾಗುತ್ತದೆ. ಮೊದಲಿಂದಲೂ ನಮ್ಮ ತುರುವೇಕೆರೆ, ನೊಣವಿನಕೆರೆ, ಚಿಕ್ಕನಾಯ್ಕನಹಳ್ಳಿ, ತಿಪ್ಟೂರು ಹಾಗೆಯೇ ಮಧುಗಿರಿ ಸಬ್‌ಡಿವಿಜನ್‌ಗಳಲ್ಲಿ ಈ ಕಷ್ಟ ಸರ್ವೇ ಸಾಮಾನ್ಯವಾಗಿದೆ.

ಆದ್ದರಿಂದ ಖಾಯಮ್ಮಾಗಿ ಅಲ್ಲಿ ಮಾಡಬೇಕಾಗಿರುವುದೇನೆಂದರೆ, ಹೇಮಾವತಿ ನದಿಗೆ ಗೊರೂರಿನ ಹತ್ತಿರ ಒಂದು ಅಣೆಕಟ್ಟನ್ನು ಕಟ್ಟಿಸುವುದ ಬಹಳ ಹಿಂದಿನಿಂದಲೂ ಯೋಚನೆಯಲ್ಲಿದೆ. ಮೊದಲು 58 ಲಕ್ಷ ರೂಪಾಯಿಗಳ ಒಂದು ಅಂದಾಜು ತಯಾರಾಗಿತ್ತು. ಈಚೆಗೆ ಪದೇ ಪದೇ ಬದಲಾವಣೆಯಾಗಿ ಕೊನೆಗೆ 2½ ಕೋಟಿ ರೂಪಾಯಿಗಳ ಒಂದು ಅಂದಾಜು ತಯಾರಾಗಿದೆ. ಇಷ್ಟಾದರೂ ಆ ಕೆಲಸವನ್ನು ಕೈಕೊಂಡಿಲ್ಲ. ಈ ಅಣೆಕಟ್ಟನ್ನು ಮುಂದುವರಿಸಿದರೆ ಕೆಲವು ಜಮೀನುಗಳು ಮುಳುಗಡೆಯಾಗುತ್ತವೆಯೆಂದು ಬಿಟ್ಟಿರಬಹುದೆಂದು ತೋರುತ್ತದೆ. ಇಂಥಾದ್ದು ಸಂಸ್ಥಾನದ ಅನೇಕ ಕಡೆಗಳಲ್ಲಿದೆ. ಎಲ್ಲಾ ಕಡೆಗಳಲ್ಲೂ ಖಾಯಮಾಗಿ ಕ್ಷಾಮ ನಿವಾರಣೋಪಾಯಗಳನ್ನು ಕೈಗೊಳ್ಳಬೇಕಾದರೆ ಇಂಥ ಯೋಜನೆಗಳನ್ನು ಮಾಡಿಸಿಕೊಡಬೇಕಾದದ್ದು ಮುಖ್ಯ. ನಮ್ಮ ಕಡೆ ಈ ಅಣೆಕಟ್ಟನ್ನು ಮಾಡಿಸಿಕೊಟ್ಟರೆ ಚನ್ನರಾಯಪಟ್ಟಣ, ತಿಪಟೂರು, ತುರುವೇಕೆರೆ, ಗುಬ್ಬಿಯಿಂದ ಮದ್ದೂರಿನವರೆಗೂ ಎಲ್ಲಾ ತಾಲ್ಲೂಕುಗಳಲ್ಲೂ ಶಾಶ್ವತವಾಗಿ ಈ ನೀರಿನ ಅಭಾವ ತಪ್ಪಿಹೋಗುತ್ತದೆ. ಏಕೆಂದರೆ 2-3 ದಿವಸ ಸರಿಯಾಗಿ ಮಳೆ ಬಂದು ನೀರು ಬಂದರೂ ಈ ಕೆರೆಗಳೆಲ್ಲಾ ತುಂಬಿ ಈಗಿರುವ ಜಮೀನುಗಳಿಗೆಲ್ಲಾ ನೀರು ಸರಬರಾಯಾಗುತ್ತದೆ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ವರ್ಷೇ ವರ್ಷೇ ಖರ್ಚು ಮಾಡುವುದಕ್ಕೆ ಬದಲಾಗಿ ಖಾಯಮ್ಮಾಗಿ ಇಂಥ ಏರ್ಪಾಡನ್ನು ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

Mr. SPEAKER.—I think the Hon'ble Member may discuss all these matters under Demand No. 30.

Sri B. HUTCHE GOWDA.—I want to bring to the notice of Government the urgent necessity for irrigation works.

Mr. SPEAKER.—Demand 30 also will be taken up in the course of a day or two.

ಶ್ರೀ ಬಿ. ಹುಚ್ಚೇಗೌಡರು.—ಕ್ಷಾಮದ ದೆಸೆಯಿಂದ ಇದರ ಆವಶ್ಯಕತೆ ಜರೂರಾಗಿದೆ. ಇದನ್ನು ಒಂದು ಯೋಜನೆಯ ರೂಪವಾಗಿ ತೆಗೆದುಕೊಂಡರೆ ಒಳ್ಳೆಯದು ಈಗಿನ ಕ್ಷಾಮವನ್ನು ತಾತ್ಕಾಲಿಕವಾಗಿ ನಿವಾರಣೆ ಮಾಡುವುದರ ಜೊತೆಗೆ ಖಾಯಮ್ಮಾಗಿ ನಿವಾರಣೆ ಮಾಡುವುದೂ ನಮ್ಮ ಕರ್ತವ್ಯವೆಂದು ಹೇಳಿ ನಾನು ಇದನ್ನು ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ.

ಆ ಮೇಲೆ ರೆವಿನ್ಯೂ ಅಪೀಲುಗಳನ್ನು ಸರಿಯಾಗಿ ಜಾಗ್ರತೆಯಾಗಿ ಫೈಸಲು ಮಾಡುತ್ತಿಲ್ಲ.

ಶ್ರೀ ಕೆ. ಹನುಮಂತಯ್ಯನವರು.—ಇನ್ನು ಮೇಲೆ ಮಾಡುತ್ತೇವೆ. He is doing it very briskly.

ಶ್ರೀ ಬಿ ಹುಚ್ಚೇಗೌಡರು.—ಗ್ರೋ-ಮೋರ್-ಫುಡ್ ಯೋಜನೆ ಬಂದು ಈಗಾಗಲೇ 10 ವರ್ಷಗಳಾದವು. ಅದರಂತೆ ಜಮೀನುಗಳನ್ನು ಕೊಡಬೇಕಾದರೆ ಏನೇನೋ ಕೆಲವು ಷರತ್ತುಗಳನ್ನು ಹಾಕಿದ್ದಿರಿ. ಅದರಂತೆ ಎಲ್ಲಾ ನಡೆದುಕೊಂಡು ಸರಿಯಾಗಿ ಜಮೀನುಗಳನ್ನು ಸಾಗು ಮಾಡುತ್ತಿದ್ದ ಮೇಲೆ, ಮೊದಲು ಹೇಳಿದಂತೆ ಏಕೆ ಇನ್ನೂ ಖಾಯಂ ಮಾಡಿಲ್ಲವೋ ಗೊತ್ತಿಲ್ಲ. ನೀವು ಒಂದು ಪ್ರಶ್ನೆಗೆ ಕೊಟ್ಟಿರುವ ಉತ್ತರದ ಪ್ರಕಾರ ಒಂದು ತಾಲ್ಲೂಕಿನಲ್ಲಿ 2307 ಜನರಿಗೆ ಜಮೀನು ಕೊಟ್ಟಿರುವುದರಲ್ಲಿ ಕೇವಲ ೪ ಜನರಿಗೆ ಮಾತ್ರ ಖಾಯಂ ಮಾಡಿದ್ದೀರೆಂದು ಗೊತ್ತಾಗಿದೆ. ಇದೇನು ನೀತಿಯೋ ಅರ್ಥವಾಗುವುದಿಲ್ಲ. ಅವರುಗಳು ಸರಿಯಾಗಿ ವ್ಯವಸಾಯ ಮಾಡದೆ ತಪ್ಪು ಮಾಡಿದ್ದರೇನೋ ಸರಿ.........

Sri K. HANUMANTHAIYA.—We assure you we will follow a definite policy.

ಶ್ರೀ ಬಿ. ಹುಚ್ಚೇಗೌಡರು.—ಕೇವಲ ಒಂದು ತಾಲ್ಲೂಕಿನಲ್ಲೇ ಇಷ್ಟು ಬಾಕಿ ಇರಬೇಕಾದರೆ ಒಟ್ಟು ಸಂಸ್ಥಾನಾವಳಿ ಎಷ್ಟಿರಬೇಕೆಂದು ಹೇಳಬೇಕಾಗಿಲ್ಲ.

Sri Kadidal MANJAPPA.—Shortly we are goving to lay down definite rules.

ಶ್ರೀ ಬಿ. ಹುಚ್ಚೇಗೌಡರು.—ಆತನೇನಾದರೂ ತಪ್ಪು ಮಾಡಿದ್ದರೆ ಜಮೀನನ್ನು ಕಿತ್ತುಕೊಳ್ಳಿ. ಅದೇನೂ ಇಲ್ಲದೆ, ನೀವು ಹೇಳಿದಂತೆ 5 ವರ್ಷ ಸರಿಯಾಗಿ ಸಾಗುವಳಿ ಮಾಡಿದ ಮೇಲೆ, ತಮ್ಮ ಷರತ್ತುಗಳ ಪ್ರಕಾರ ಕೊಡಬೇಕಾದದ್ದು ನ್ಯಾಯ. ಹಾಗಿಲ್ಲದೆ ಯಾವುದನ್ನೂ ಮಾಡದೆ ಸುಮ್ಮನೆ ಇರುವುದು ಸರಿಯಲ್ಲ.

ಈ ವಿಷಯಗಳನ್ನು ತಮ್ಮ ಗಮನಕ್ಕೆ ತಂದು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಸಿದ್ದಪ್ಪನವರು (ಮಾಗಡಿ).—ಅಧ್ಯಕ್ಷರೇ ಈ ಡಿಮ್ಯಾಂಡಿನ ವಿಚಾರದಲ್ಲಿ ನನ್ನ ಮಾನ್ಯ ಸ್ನೇಹಿತರಾದ ಹುಚ್ಚೇಗೌಡರು ಅನೇಕ ವಿಷಯಗಳನ್ನು ನಮೂದಿಸಿದ್ದಾರೆ. ಕ್ಷಾಮದ ವಿಚಾರದಲ್ಲಿ ಇನ್ನೂ ಕೆಲವು ಕಡೆಗಳಲ್ಲಿ ಕ್ಷಾಮವಿದೆ, ಆ ಕಡೆಗಳಲ್ಲಿ ಖಾಯಮ್ಮಾಗಿ ಕ್ಷಾಮನಿವಾರಣೆ ಮಾಡುವುದಕ್ಕಾಗಿ ನೀರಿನ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕೆಂದು ತಿಳಿಸಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಎಲ್ಲಾ ಕಡೆಯಲ್ಲೂ ಇಂಥಾ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕೆಂದು ಹೇಳಿದ್ದೇನೆ.

ಶ್ರೀ ಎಸ್. ಸಿದ್ದಪ್ಪನವರು.—ಅಂಥ ಅನೇಕ ತಾಲ್ಲೂಕುಗಳ ಪೈಕಿ ಮಾಗಡಿ ತಾಲ್ಲೂಕು ನಿಮ್ಮ ಸಹಾಯವನ್ನು ಜರೂರಾಗಿ ಅಪೇಕ್ಷಿಸುವ ಒಂದು ತಾಲ್ಲೂಕು ಎಂಬುದನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ಏಕೆಂದರೆ ಅದೇನೂ ಇಲ್ಲಿಗೆ ತುಂಬ ದೂರದಲ್ಲಿಲ್ಲ. ಅನೇಕರು ನೋಡಿರಬಹುದು. ಕೆಂಪೇಗೌಡರ ಜನ್ಮಸ್ಥಳ, ಬೆಂಗಳೂರು ಪಟ್ಟಣವನ್ನು ಕಟ್ಟಿದ ಆ ಮಹನೀಯರು ಇದ್ದ ಸ್ಥಳ ಅದು. ಅದು ಬೆಟ್ಟ ಗುಡ್ಡಗಳಿಂದ ತುಂಬಿದ ಪ್ರದೇಶವೆಂದು ಎಲ್ಲರಿಗೂ ತಿಳಿದೇ ಇದೆ. ಅಲ್ಲಿಗೆ ನೀರಿನ ಸೌಕರ್ಯವನ್ನು ಕಲ್ಪಿಸಿಕೊಡಬೇಕಾದದ್ದು ಸರ್ಕಾರದವರ ಕರ್ತವ್ಯ. ಅದಕ್ಕಾಗಿ ಒಂದು ಸ್ಪೆಷಲ್ ಅಸಿಸ್ಟೆಂಟ್ ಇಂಜನಿಯರ ಆಫೀಸನ್ನು ಕೂಡ ನೇಮಕ ಮಾಡಿದೆ. ಅಲ್ಲಿ ಹೆಚ್ಚಿನ ನೀರಾವರಿ ಕೆಲಸ ಕಾರ್ಯಗಳನ್ನು ಕೈಕೊಳ್ಳಬೇಕಾದದ್ದು ಅತ್ಯಾವಶ್ಯಕವಾಗಿದೆ. ತಿಪ್ಪಸಂದ್ರ, ವಾಯುಸಂದ್ರ ಮುಂತಾದ ಅನೇಕ ದೊಡ್ಡ ದೊಡ್ಡ ಕೆರೆಗಳನ್ನು ಮಾಡಿಕೊಟ್ಟರೆ ಅಲ್ಲಿನ ರೈತಾಪಿ ಜನರಿಗೆ ಬಹಳ ಸಹಾಯ ಮಾಡಿದಂತಾಗುತ್ತದೆ.

ಶ್ರೀಮಾನ್ ಹುಚ್ಚೇಗೌಡರು ಒಂದು ವಿಷಯ ಹೇಳಿದರು. ರೆವಿನ್ಯೂ ಅಪೀಲುಗಳ ವಿಷಯದಲ್ಲಿ ಬಹಳ ನಿಧಾನವಾಗುತ್ತಿದ್ದು ಜನರು ಪದೇ ಪದೇ ಇಲ್ಲಿಗೆ ತಿರುಗಾಡಬೇಕಾಗಿ ಬಂದಿದೆಯೆಂದು ಹೇಳಿದರು. ಹೀಗೆ ನಿಧಾನವಾಗಿರುವುದಕ್ಕೆ ಕಾರಣ, ಸರ್ಕಾರದವರು ಹಿಂದೆ ಜಮೀನು ದರಖಾಸ್ತು ಅರ್ಜಿಗಳನ್ನು ವಿಲೇವಾರಿ ಮಾಡುವುದರಲ್ಲಿ ಸರಿಯಾಗಿ ನೋಡಿಕೊಳ್ಳದೆ, ಹೆಚ್ಚಿಗೆ ವ್ಯವಸಾಯಕ್ಕೆ ಜಮೀನು ಕೊಡಬೇಕೆಂಬ ತಮ್ಮ ಆತುರದಲ್ಲಿ ಎಲ್ಲಾ ಜಮೀನುಗಳನ್ನೂ ಕೊಟ್ಟಿದ್ದರಿಂದ ಆಮೇಲೆ ನಾನಾ ತಕರಾರುಗಳು ಬಂದು ಹೀಗೆ ನಿಧಾನಕ್ಕೆ ಕಾರಣವಾಗಿದೆ. ಎಷ್ಟೋ ಸಂದರ್ಭಗಳಲ್ಲಿ ಒಬ್ಬ ರೈತನ ಜಮೀನನ್ನು ಇನ್ನೊಬ್ಬನಿಗೆ ಕೊಟ್ಟಿರುವುದೂ ಅಲ್ಲದೆ ಕೆರೆ ಅಂಗಳಗಳನ್ನೂ, ಗುಂಡುತೋಪುಗಳನ್ನೂ ಊರ ಮುಂದಿನ ಭೂಮಿಯನ್ನೂ ನೋಡದೆ, ವಿಚಾರ ಮಾಡದೆ ಕೊಟ್ಟು ಬಿಟ್ಟಿದ್ದರಿಂದ ಹೀಗೆ ಅಪೀಲುಗಳಿಗೆ ಅವಕಾಶವಾಯಿತು. ಮಾಗಡಿ ತಾಲ್ಲೂಕಿನಲ್ಲಿ ಇಂಥ ಅನೇಕ ಕೇಸುಗಳಿವೆ. ಇಷ್ಟೆಲ್ಲಾ ಇದ್ದರೂ, ಈಗಾಗಲೇ ಕಳೆದ ನಾಲ್ಕು ವರ್ಷಗಳಲ್ಲಿ ಹಿಂದಿನ ಸರ್ಕಾರದಿಂದಲೇ ಸಾವಿರಾರು ಅಪೀಲು ಕೇಸುಗಳು ಫೈಸಲಾಗಿರುವ ಅಂಶವನ್ನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಆದರೂ ನನಗೆ ತಿಳಿದಮಟ್ಟಿಗೆ ಸುಮಾರು ನೂರು ಮುಜರಾಯಿ ಮತ್ತು ರೆವಿನ್ಯೂ ಅಪೀಲುಗಳು ತೀರ್ಮಾನವಾಗದೇ ಉಳಿದಿವೆ.

4 P. M.

ಜಮೀನುಗಳನ್ನು ಸಾಗುವಳಿಗೆ ಕೊಡುವುದರಲ್ಲಿ ಕೊಡಬಾರದ ಸ್ಥಳಗಳಲ್ಲಿ ಕೊಟ್ಟಿರುವುದರಿಂದ ಅನೇಕ ವ್ಯವಹಾರಗಳು ಫೈಸಲಾಗಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮೈಸೂರು ಸಂಸ್ಥಾನದಲ್ಲಿ ಹಿಂದೆ ಕಟ್ಟಿರತಕ್ಕ ಕೆರೆ ಅಂಗಳಗಳನ್ನು ವ್ಯವಸಾಯಕ್ಕೆ ಕೊಟ್ಟಿದ್ದಾರೆ. ಇವನ್ನೆಲ್ಲಾ ವಾಪಸ್ಸು ತೆಗೆದುಕೊಳ್ಳಬೇಕು. ಆಯಾ ಪ್ರದೇಶಗಳಲ್ಲಿ ಯಾವ ಉದ್ದೇಶದಿಂದ ಹಿಂದೆ ಕಟ್ಟಿದರೋ ಯಾರ ಪ್ರಯೋಜನಕ್ಕಾಗಿ ಕಟ್ಟಿದರೋ ಆ ಪ್ರದೇಶದ ಜನರಿಗೆ ಆ ಪ್ರಯೋಜನ ದೊರಕುವ ಹಾಗೆ ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆಮಾಡಬೇಕಾಗಿದೆ. ಕೆರೆಗಳನ್ನು ಬಹಳ ಕಾಲದ ಹಿಂದೆ ಸರ್ಕಾರದವರು ಹೆಚ್ಚು ಹಣ ಖರ್ಚುಮಾಡಿ ಕಟ್ಟಿದಾರೆ ಇಂಥ ಕೆರೆಗಳಿಂದ ಆ ಪ್ರಾಂತದ ಜನರಿಗೆ ಉಪಕಾರವಾಗುವುದು ಹೋಗಿ ಆ ಕೆರೆಗಳ ಅಂಗಳಗಳನ್ನು ಹೀಗೆ ಬೇರೆಕೆಲಸಕ್ಕೆಹೆಉಪಯೋಗಿಸಲು ಕೊಟ್ಟಿರುವುದು ಅನ್ಯಾಯ. ಹೀಗೆ ಕೆರೆಗಳ ಅಂಗಳಗಳನ್ನು ಸಾಗುವಳಿಗೆ ಕೊಡುವುದನ್ನು ತಡೆಗಟ್ಟಿ ರೈತರಿಗೆ ಅನುಕೂಲವಾಗುವ ಹಾಗೆ ಮಾಡಲು ಈಗಾಗಲೇ ಹೀಗೆ ಅನೇಕರಿಗೆ ಕೊಟ್ಟಿರುವ ಕರೆ ಅಂಗಳದ ಜಮೀನುಗಳನ್ನು ವಾಪಸ್ಸುತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡರು (ಸಾಗರ–ಹೊಸನಗರ).—11ನೆಯ ಡಿಮ್ಯಾಂಡನ್ನು ವಿರೋಧಿಸುತ್ತಾ ಜನರಲ್ ಅಡ್ಮಿನಿಸ್ಟ್ರೇಷನ್‌ಗೆ ಸಂಬಂಧಪಟ್ಟಹಾಗೆ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಲಚ್ಛಿಸುತ್ತೇನೆ.

(ಶ್ರೀ ಎಸ್. ಗೋಪಾಲಗೌಡರು)

ಸ್ವಾಮಿ, ನಾವು ಜನರಲ್ ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಕೆಲವು ಮುಖ್ಯವಾದ ಮೂಲಭೂತವಾದ ಅಂಶಗಳನ್ನು ಗಮನಿಸಬೇಕಾಗಿದೆ. ಹದಿನೈದು ನಿಮಿಷಗಳಲ್ಲಿ ನಾನು ಒಂದೊಂಶವನ್ನು ಕೂಡ ಪೂರ್ತಿಯಾಗಿ ಹೇಳುವುದಕ್ಕೆ ಕಾಲ ಸಾಕಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೂ ನಾನು ಎಷ್ಟುದೂರ ಹೋಗಬಹುದೋ ಅಷ್ಟು ದೂರ ಹೋಗಲು ಪ್ರಯತ್ನಮಾಡುತ್ತೇನೆ. ನಮ್ಮಲ್ಲಿರತಕ್ಕ ಅಡ್ಮಿನಿಸ್ಟ್ರೇಷನ್, ಎಂದರೆ ಆಡಳಿತ ಯಂತ್ರದಲ್ಲಿ, ಒಂದು ಐತಿಹಾಸಿಕ ವೈಶಿಷ್ಟ್ಯವಿದೆ. ಬಹಳ ಪುರಾತನ ಕಾಲದಿಂದಲೂ ಬೆಳೆದು ಬಂದ ಪದ್ಧತಿಯ ಮೇಲೆ ನಾವು ಆಳಕ್ಕೆ ಹೋಗಿ ನೋಡುವುದಾದರೆ, ಪಟೇಲ, ಶ್ಯಾನುಭೋಗ ಮುಂತಾದ ಹಳ್ಳಿಯ ಅಧಿಕಾರಿಗಳ ಆಧಾರದ ಮೇಲೆ ಈ ಯಂತ್ರ ನಡೆದುಕೊಂಡು ಬಂದಿದೆ. ಇದು ಬಹಳ ಹಿಂದಿನ ಕಾಲದಿಂದ ಬಂದದ್ದೆಂದು ನಮಗೆ ತಿಳಿಯುತ್ತದೆ. ಇದಾದನಂತರ ಅಮಲ್ದಾರ್, ಶೇಕ್‌ದಾರ್ ಎಂಬ ಶಬ್ದಗಳನ್ನು ನೋಡುವುದಾದರೆ ಇವು ಮೊಗಲರ ಕಾಲದಲ್ಲಿ ಬಂದವೆಂಬುದನ್ನು ಸೂಚಿಸುತ್ತವೆ. ಆಮೇಲೆ ಬ್ರಿಟಿಷರ ಕಾಲದಲ್ಲಿ ನಮ್ಮ ಆಡಳಿತ ಯಂತ್ರ ಈಗಿರುವ ರೂಪಕ್ಕೆ ಬಂತು. ಬ್ರಿಟಿಷರು ಈ ಆಡಳಿತ ಯಂತ್ರವನ್ನು ನಮ್ಮ ದೇಶದಲ್ಲಿ ರಚನೆ ಮಾಡಿದರು. ಅವರ ಉದ್ದೇಶ ನಮ್ಮ ದೇಶದಲ್ಲಿ ಅವರ ಆಳ್ವಿಕೆಯನ್ನು ಹೆಚ್ಚುಕಾಲ ಶಾಶ್ವತವಾಗಿ ನಿಲ್ಲಿಸುವುದೇ ಆಗಿತ್ತು. ಆದ್ದರಿಂದ ಇಂತಹ ಒಂದು ಆಡಳಿತ ಯಂತ್ರಕ್ಕೆ ಒಂದು ವಿಶಿಷ್ಟ ಸ್ವರೂಪ ಬಂದಿರುತ್ತದೆ. ಅದೇನೆಂದರೆ, ಜನರನ್ನು ತುಳಿದು ಇಟ್ಟುಕೊಳ್ಳುವ ಶಕ್ತಿ ಈ ಯಂತ್ರಕ್ಕಿದೆ. ಈ ಮಾತನ್ನು ನಾನು ಹೇಳುವಾಗ ಯಾವ ಅಧಿಕಾರಿಗಳಾಗಲಿ, ನೌಕರರೇ ಆಗಲಿ, ಇದನ್ನು ವೈಯುಕ್ತಿಕವಾಗಿ ತೆಗೆದುಕೊಳ್ಳಬಾರದು. ಇದು, ಈ ಆಡಳಿತ ಯಂತ್ರರಚನೆಯಲ್ಲಿರತಕ್ಕ ಒಂದು ಮನೋಭಾವ. ನಾವು ಸ್ವಾತಂತ್ರ್ಯ ಬಂದನಂತರ, ತಕ್ಷಣದಲ್ಲಿಯೇ ಈ ಯಂತ್ರದಲ್ಲಿರತಕ್ಕ ಮನೋಭಾವವನ್ನು ಮೂಲಭೂತವಾಗಿ ಬದಲಾವಣೆ ಮಾಡಬೇಕಾಗಿತ್ತು. ಆದರೆ ಆ ಕೆಲಸ ಇನ್ನೂ ಆಗಿಲ್ಲವೆಂದು ನಾನು ಹೇಳಬೇಕಾಗಿದೆ. ಏಕೆಂದರೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಒಂದು ರೀತಿಯ ಸರ್ಕಾರವಿತ್ತು. ಅದರಲ್ಲಿ ವೈಸರಾಯರಿರುತ್ತಿದ್ದರು, ಗೌರ್ನರ್ ಜನರಲ್ ಇರುತ್ತಿದ್ದರು, ಅವರ ಸೆಕ್ರೆಟರಿಗಳಿರುತ್ತಿದ್ದರು. ಆ ರೀತಿ ಕೆಲಸ ನಡೆಯುತ್ತಿತ್ತು. ಸರ್ಕಾರಗಳ ಕೈಕೆಳಗೆ ಪ್ರಜೆಗಳಿರುತ್ತಾರೆಂದೂ, ಸರ್ಕಾರಕ್ಕಾಗಿ ಪ್ರಜೆಗಳಿರುತ್ತಾರೆಂದೂ ಮನೋಭಾವವಿತ್ತು. ಈಗ ಅದು ಪೂರ್ಣವಾಗಿ ತಲೆಕೆಳಗಾಗಿದೆ. ಈಗ ಪ್ರಜೆಗಳು ತಮ್ಮ ಅನುಕೂಲಕ್ಕಾಗಿ ಸರ್ಕಾರದವರನ್ನು ರಚಿಸಿರುತ್ತಾರೆ. ಇವರ ಅನುಕೂಲಕ್ಕಾಗಿ ಸರ್ಕಾರ ಕೆಲಸಮಾಡುತ್ತದೆ. ಈ ಧೃಷ್ಟಿಯಿಂದ ನೋಡಿದರೆ, ಪ್ರಜಾಪ್ರಭುತ್ವ ಪದ್ಧತಿಗನುಗುಣವಾಗಿ ಬದಲಾವಣೆಯಾಗಬೇಕು. ಪ್ರಜಾಪ್ರಭುತ್ವ ಕಾರ್ಯಗತವಾಗಬೇಕಾದರೆ ಈಗಿನ ಮನೋಭಾವ ಪೂರ್ಣ ಬದಲಾವಣೆಯಾಗಬೇಕು. ಹೊಸ ಸೀಸೆಯಲ್ಲಿ ಹಳೆಯ ಹೆಂಡವನ್ನು ಹಾಕಿದರೆ ಹೇಗೆ ಆ ಹೆಂಡದ ಸ್ವಭಾವ ಹೋಗುವುದಿಲ್ಲವೋ ಹಾಗೆ ಬ್ರಿಟಿಷರು ಯಾವ ಸರ್ಕಾರದ ಆಡಳಿತಯಂತ್ರವನ್ನು ಸೃಷ್ಟಿಮಾಡಿದ್ದಾರೋ ಅದು ಯಾವ ಹೊಸ ಮಂತ್ರಿಮಂಡಲ ಬಂದು ತನ್ನ ಹುರುಪನ್ನು ಅದಕ್ಕೆ ಕೊಟ್ಟರೂ ಅದರ ಸ್ವಭಾವವನ್ನು ಬಿಡುವುದಿಲ್ಲ. ಆದಕಾರಣ ಸಂಪೂರ್ಣ ಬದಲಾವಣೆ ಅಗತ್ಯ. The entire State machinery will have to be overhauled if the State has to discharge the new functions effectively. ಈ ಹೊತ್ತು ಜನತೆ ಸರ್ಕಾರದ ಮುಂದೆ ಅನೇಕ ಡಿಮ್ಯಾಂಡುಗಳನ್ನಿಡುತ್ತಿದೆ. ನವರಾಷ್ಟ್ರ ನಿರ್ಮಾಣಮಾಡುವ ಒಂದು ದಾರಿಯಲ್ಲಿ ಹೆಜ್ಜೆಯನ್ನಿಡುತ್ತಿದ್ದೇವೆ. ರಾಷ್ಟ್ರ ನಿರ್ಮಾಣ ಈ ಯಂತ್ರದಿಂದ ಮಾಡಲ್ಪಟ್ಟಿರಲಿಲ್ಲ. ಇಂಡಿಯಾದೇಶವನ್ನು ಹತ್ತಿಕ್ಕಿ ಬಹಳ ಕಾಲ ಮುಂದುವರಿಸಿಕೊಂಡು ಹೋಗುವುದೇ ಈ ಯಂತ್ರದ ದೃಷ್ಟಿಯಾಗಿತ್ತು. ಆದುದರಿಂದ ಮೂಲಭೂತವಾದ ಬದಲಾವಣೆ ಅಗತ್ಯ. ದೇಶಾಭಿವೃದ್ಧಿಯ ಯಾವ ಯೋಜನೆಯನ್ನು ಸರ್ಕಾರ ತೆಗೆದುಕೊಂಡರೂ, ಈ ಯಂತ್ರದ ಮೂಲಕ ಹೋಗಬೇಕಾಗಿರುವಾಗ ಈ ಯಂತ್ರ ಪೂರ್ತಿ ಬದಲಾವಣೆಯಾಗದೇ ಹೋದರೆ, ಸಫಲವಾಗುವುದಿಲ್ಲ.

ಅಧ್ಯಕ್ಷರು.—ಹೇಗೆ ಬದಲಾಯಿಸುವುದು ಎಂಬ ವಿಚಾರದಲ್ಲಿ ಏನಾದರೂ ಹೊಸದಾಗಿ ಸಲಹೆಗಳನ್ನು ಕೊಡುವುದಾದರೆ ಇನ್ನು ಐದು ನಿಮಿಷ ಹೆಚ್ಚು ತೆಗೆದುಕೊಳ್ಳಬಹುದು. ಅಷ್ಟೆ.

ಶ್ರೀ ಎಸ್. ಗೋಪಾಲಗೌಡರು.—ಶೋತಾ ನಿರ್ಣಯಗಳನ್ನು ಮಂಡಿಸಿ ಚರ್ಚೆ ಮಾಡುವಾಗ ಒಂದು ವಿಷಯ ವ್ಯಕ್ತವಾಯಿತು. ಅನೇಕ ದೃಷ್ಟಿಯಿಂದ ಚರ್ಚೆಯಾಯಿತು. ಮಲೆನಾಡು ಸದಸ್ಯರು ಅವರ ಹಿತಕ್ಕಾಗಿ ರಸ್ತೆ ಕೇಳಿಕೊಳ್ಳುವುದು, ಬಯಲುಸೀಮೆಯ ಸದಸ್ಯರು ಕ್ಷಾಮಪೀಡಿತ ಪರಿಸ್ಥಿತಿ ಜಾಸ್ತಿಯಾಗಿದೆ, ಪರಿಹಾರ ಜಾಸ್ತಿಕೊಡಿ ಎನ್ನುವುದು, ನಿಮ್ನ ತರಗತಿಯ ಸದಸ್ಯರು ಮಾತನಾಡುವಾಗ ತಮ್ಮವರ ವಿಷಯ ಹೇಳಿಕೊಳ್ಳುವುದು, ಹೀಗೆ ಲಿಂಗಾಯಿತರು ಅವರ ವಿಷಯ ಹೇಳುವುದು, ಇನ್ನೊಬ್ಬರು ತಮ್ಮ ಜನರ ವಿಷಯ ಹೇಳುವುದು ಈ ಚರ್ಚೆ ಹೀಗಾಯಿತು. ಒಬ್ಬೊಬ್ಬರೂ ತಮ್ಮ ತಮ್ಮ ಹಿತದೃಷ್ಟಿಯಿಂದ ಮಾತನಾಡುವುದು ಎಂದರೆ ಅಂಶ ದೃಷ್ಟಿ. ಈ ಅಂಶ ದೃಷ್ಟಿ ಹೋಗಿ ಪೂರ್ಣದೃಷ್ಟಿ ಬೆಳೆಯಲೆಂದು ನನ್ನ ವಿನಯಪೂರ್ವಕ ಸೂಚನೆ. ಮಲೆನಾಡಿನ ಅವಶ್ಯಕತೆಗಳನ್ನು ಸಭೆಯಮುಂದೆ ತರುವಾಗ ಇದಕ್ಕಾಗಿ ಹೋರಾಟ ಮಾಡುವಾಗ ಬೆಂಗಾಡುಕ್ಷಾಮವನ್ನು ಖಂಡಿತ ಮರೆಯಬಾರದು. ಹೀಗೆ ಎಲ್ಲರ ಹಿತದೃಷ್ಟಿಯಿಂದಲೂ ಯೋಚನೆ ಮಾಡಬೇಕು. ಕಾರ್ಮಿಕರ ಹಿತವನ್ನು ಸೂಚನೆಮಾಡುವಾಗಲೂ ಮಾಲೀಕರ ಸ್ಥಿತಿಗತಿಗಳನ್ನೂ ಅವರೂ ಮನುಷ್ಯರೇ ಆಗಿರುವುದರಿಂದ ಅವರ ಕಷ್ಟ ನಿಷ್ಠೂರಗಳನ್ನು ನೋಡಬೇಕು...

Sri A. BHEEMAPPA NAIK.—Is it a speech on General Administraton or a general talk on matters of general importance ?

Mr. SPEAKER.—I had given him 7 minutes. It is now five minutes I will ask him to stop at 10 minutes.

ಶ್ರೀ ಎಸ್ ಗೋಪಾಲಗೌಡರು.—ನಾವು ಈ ಆಡಳಿತ ಯಂತ್ರದಲ್ಲಿ ಬದಲಾವಣೆಗಳನ್ನು ಆಧಾರವಾಗಿಟ್ಟುಕೊಂಡು, ಅನಂತರ Regional, State and Union ಎಂಬ four-pillar ಸ್ಟೇಟನ್ನು ರಚಿಸಬೇಕು. ಈಗ ಹೆಚ್ಚುಕಡಮೆ ಇದೇ ರೀತಿಯಿದೆ ಯಂತ್ರ. ಆದರೆ ಇದರಲ್ಲಿ ಅನೇಕ ನ್ಯೂನತೆಗಳಿವೆ. ಇದನ್ನು ಹೇಗೆ ಪರಿಹರಿಸಬಹುದೆಂದು ಯೋಚನೆಮಾಡಿದರೆ, ನೌಕರ ಷಾಹಿಯಿಂದ Bureaucratism ನಿಂದ ಜನತೆಗೆ ತೊಂದರೆ ತಪ್ಪಬೇಕಾದರೆ ಅದರಲ್ಲಿ ಪೂರ್ಣ ವ್ಯತ್ಯಾಸವಾಗಬೇಕು. Red tapism ಎಂದರೆ ಕೆಂಪು ಪಟ್ಟಿಗಳನ್ನು ಕಟ್ಟಿರುವುದು ವಿಳಂಬಮಾಡುವುದನ್ನು ತೋರಿಸುತ್ತದೆ.

Sri K. HANUMANTHAIYA.—Sir the Hon'ble Member has borrowed the colour of the red tape for his cap (Laughter).

Mr. SPEAKER.—He considers it so sacred that he keeps it on his head. (Laughter)

Sri S. GOPALA GOWDA.—Certainly it is sacred.

Sri Mulka GOVINDA REDDY.—Red indicates revolution, it indicates blood.

ಶ್ರೀ ಎಸ್. ಗೋಪಾಲಗೌಡರು.—ಖಾದಿಗೂ ಖಾಕಿಗೂ ಒಂದು ಚಾರಿತ್ರಿಕ ವೈರತ್ವ ಬೆಳೆದು ಬಂದಿತ್ತು. ಆದರೆ ಕಾಂಗ್ರೆಸ್ಸು ಬಂದ ಮೇಲೆ ಪರಸ್ಪರ ಸಂಪರ್ಕದಿಂದ ಪರಸ್ಪರವಾಗಿ ಅದು ಕಡಮೆಯಾಗ ತ್ತಾ ಬಂದಿದೆಯಾದರೂ ಜನತೆಯ ದೃಷ್ಟಿಯಲ್ಲಿ ಖಾಕಿಯ ಬಗ್ಗೆ ಇದ್ದ ಭಯಭೀತಿ ಇನ್ನೂ ತೊಲಗಿಲ್ಲ.

Sri K. HANUMANTHAIYA.—You are also wearing the same cloth—khadi.

ಶ್ರೀ ಎಸ್. ಗೋಪಾಲಗೌಡರು.—ಅದೂ ನಿಜ. ಮತ್ತು ಜನರಿಗೂ............

Mr. SPEAKER.—The Hon'ble Member has two minutes more.

ಶ್ರೀ ಎಸ್ ಗೋಪಾಲಗೌಡರು.—ಮತ್ತು ಜನರಿಗೂ, ಜನಾಭಿಪ್ರಾಯಕ್ಕೂ ವಿರೋಧವಾಗಿ ವರ್ತಿಸುವುದು, ಒಂದು ತಾತ್ಸಾರ ಮನೋಭಾವ, ಇವೇ ಮುಂತಾದುವುಗಳು ಬ್ರಿಟಿಷರ ಕಾಲದಿಂದಲೂ ಬಂದಿವೆ. ಆದರೆ ಅವರಲ್ಲಿ ಕೆಲವು ಒಳ್ಳೆಯ ವಿಷಯಗಳೂ ಇದ್ದುವು. ಅವರಲ್ಲಿದ್ದ ಕಾರ್ಯನಿಷ್ಠೆ, ದಕ್ಷತೆ, ಉತ್ಸಾಹ ಇತ್ಯಾದಿ ಒಳ್ಳೆಯ ಗುಣಗಳನ್ನು ಕಲಿಯುವ ಬದಲು, ಅಸಾಮರ್ಥ್ಯ, ಅನೀತಿ, ಲಂಚಗೂಳಿತನ, ಸ್ವಜನ ಪಕ್ಷಪಾತ ಇತ್ಯಾದಿ ಅವಗುಣ ಬೆಳೆದು ಬಂದಿರುವುದು ಮತ್ತು ಬರ ತ್ತಿರುವುದು ಅನುಭವಕ್ಕೆ ಬಂದಿದೆ.

ಈ ಯಂತ್ರವನ್ನು ನಾವು ಬುಡದಿಂದ ತುದಿಯವರೆಗೂ ಶುದ್ಧಿಮಾಡದೆ ಹೋದರೆ ಅದು ತೃಪ್ತಿಕರವಾಗಿ ಕಾರ್ಯವನ್ನು ನಿರ್ವಹಿಸಲಾರದು. ಈ ಯಂತ್ರವು ಒಂದು ನ್ಯೂಟ್ರಲ್ ಏಜನ್ಸಿಯಾಗಿ ಕೆಲಸ ಮಾಡಬೇಕಾಗಿದೆ.

ಇದು ಜನತೆಯ ನಾಡಿಯನ್ನು ಹಿಡಿದು ಹೋಗುತ್ತಾ ಕಾರ್ಯಗಳನ್ನು ನಡೆಸುವ ಹಾಗೆ ಇರಬೇಕು. ಆದರೆ ಅದಕ್ಕೆ ಬದಲಾಗಿ ಜನರನ್ನು ತುಳಿದು ಕೆಲಸ ಮಾಡುತ್ತಿದೆ. ಹೇಗೆ ಆ ಖಾಕಿ ಧಾರಿಗಳಾದ ಪೋಲೀಸರನ್ನು ಕಂಡರೆ ಹಿಂದೆ ಒಂದಾನೊಂದು ಕಾಲದಲ್ಲಿ ಜನರು ಹೆದರಿ ಮನೆಯಲ್ಲೇ ಅವಿತುಕೊಳ್ಳುತ್ತಿದ್ದರೋ ಹಾಗೆ, ಈ ದಿವಸ ಈ ಖಾದೀಧಾರಿಗಳನ್ನು ನೋಡಿ ಜನರು ಹೆದರುತ್ತಿದ್ದಾರೆ. ಇಂಥಾದ್ದನ್ನು ಕೂಡಲೇ ಬದಲಾಯಿಸಬೇಕು. ಆದರೆ ಜನರ ದೃಷ್ಟಿಕೋನದಲ್ಲಿ ಏನಿತ್ತೋ ಅದು ಇನ್ನೂ ಹೋಗಲಿಲ್ಲ. ಈ ಆಡಳಿತ ಯಂತ್ರದ ಶುದ್ಧೀಕರಣ ಮಾಡದ ವಿನಾ, ದೇಶವನ್ನು ಕಟ್ಟುವ ದೃಷ್ಟಿಯಿಂದ ಅಥವಾ ಒಂದು ಮಿತವ್ಯಯದ ದೃಷ್ಟಿಯಿಂದ ಕೆಲವರನ್ನು ನೌಕರಿಯಿಂದ ತೆಗೆದು ಹಾಕಿಬಿಟ್ಟರೆ ಸಾಲದು, ಅದರಿಂದ ಕೆಲಸ ನೆಟ್ಟಗಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಸರ್ಕಾರ ಎಲ್ಲರಿಗೂ ಕೆಲಸ ಕೊಡಬೇಕೆಂದರೆ ಸಾಧ್ಯವಿಲ್ಲ. ಹಾಗೆ ಜನರಿಗೆ ಕೆಲಸಗಳನ್ನು ಕೊಡುವುದರಲ್ಲಿ ಸರ್ಕಾರಕ್ಕೆ ಒಂದು ಮಿತಿ ಇದೆ. ಆದ್ದರಿಂದ ಎಲ್ಲರೂ ಈ ನೌಕರಿಗಳನ್ನೇ ನೆಚ್ಚಿಕೊಂಡಿರುವುದು ಸರಿಯಾದದ್ದಲ್ಲ. ಸರ್ಕಾರದವರು ವಿದ್ಯಾವಂತರಾದವರಿಗೆಲ್ಲಾ ಸರ್ಕಾರದಲ್ಲಿ ಸ್ಥಾನ ಮಾಡಿಕೊಡಬೇಕೆಂಬ ನಿಯಮವೇನೂ ಇಲ್ಲ. ವಿದ್ಯಾಭ್ಯಾಸ ಮಾಡಿರತಕ್ಕವರಲ್ಲಿ ಸುಮಾರು 90 ಪರ್ಸೆಂಟ್ ಈ ನೌಕರ್ ಶಾಹಿ ಸ್ಥಾನಗಳಲ್ಲಿರುವುದು ಅವಶ್ಯಕತೆಗಿಂತಲೂ ಹೆಚ್ಚಾಗಿಯೇ ಎಂದು ಹೇಳಬೇಕು. ಆದ್ದರಿಂದ ಈಗ ಇವರು ಏನು ರಿಟ್ರೆಂಚ್‌ಮೆಂಟ್ ಮಾಡಿದ್ದೇವೆಂದು ಹೇಳುತ್ತಿದ್ದಾರೋ ಅದನ್ನು ರಿಟ್ರೆಂಚ್‌ಮೆಂಟ್ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಆ ಒಂದು ವೇಜ್‌ಸ್ಟ್ರಕ್ಚರ್ ಎಂದು ಯಾವುದನ್ನು ಹೇಳುತ್ತಾರೋ ಅದು ಬಹಳ ಹಿಂದಿನದು; ಅದರಲ್ಲಿ ಬಹಳ ಅಂತರವಿದೆ.

Sri A. BHEEMAPPA NAIK.—On a point of order. ot even a single sentence in his speech relates to the general administration as such. I do not think the Chair could give him more time.

ಶ್ರೀ ಎಸ್. ಗೋಪಾಲಗೌಡರು.—ನಾನು ಈಗ ರಿಟ್ರೆಂಚ್‌ಮೆಂಟ್ ವಿಷಯ ಮಾತನಾಡ ತ್ತಿದ್ದೆನು. ಆ ವೇಜ್‌ಸ್ಟ್ರಕ್ಚರ್ ಎಂಬುದು ಬಹಳ ಹಿಂದಿನ ಕಾಲದ್ದು. ನಾವು ಈಗ ಕೊಡುತ್ತಿರುವ ತುಟ್ಟೀ ಭತ್ಯವನ್ನು ಬಹಳ ಕಾಲದಿಂದಲೂ ಕೊಡುತ್ತಾ ಬಂದಿದ್ದೇವೆ. ಇದನ್ನು ಗಮನಿಸಿದರೆ ಕಳೆದ ಹತ್ತು ವರ್ಷಗಳಿಂದಲೂ ಒಂದೇ ಸಮನಾಗಿ ಜೀವನದ ವೆಚ್ಚ ಹೆಚ್ಚಿಕೊಂಡು ಹೋಗುತ್ತಿದೆ. ಜನರೆಲ್ಲರೂ, ತತ್ರಾಪಿ ಅದರಲ್ಲೂ ಈ ಕೆಳ ದರ್ಜೆಯಲ್ಲಿರತಕ್ಕ ನೌಕರರೂ, ಕೂಲಿಗಾರರೂ, ಕಳೆದ ಹತ್ತು ವರ್ಷಗಳಿಂದ ಜೀವನೋಪಾಯಕ್ಕಾಗಿ ಬಹಳ ಕಷ್ಟಪಡುತ್ತಿದ್ದಾರೆ. ಅವರ ಜೀವನವೇ ಬಹಳ ಕಷ್ಟವಾಗಿದೆ. ಆದುದರಿಂದ ಕನಿಷ್ಠಪಕ್ಷ ಈ ದಿವಸ ತಾವು ಯಾವ ನೌಕರನಿಗೇ ಆಗಲಿ ಅವನು ದಫೇದಾರನಾಗಿರಲೀ ಅಥವಾ ಡವಾಲಿ ಹಾಕಿಕೊಂಡು ಕೆಲಸ ಮಾಡುತ್ತಿರುವವನಾಗಲಿ, ತಾವೀಗ ಕೊಡುತ್ತಿರುವ ತುಟ್ಟೀ ಭತ್ಯ ಇತ್ಯಾದಿಗಳೆಲ್ಲಾ ಸೇರಿಸಿ ಆತನಿಗೆ 100 ರೂಪಾಯಿಗಳ ಸಂಬಳಕೊಡಬೇಕಾಗಿದೆ. ಬಡ ನೌಕರನಿಗೂ ಹೊಟ್ಟೆ-ಬಟ್ಟೆಯ ತಾಪತ್ರಯವಿದೆ. ಎಲ್ಲರಿಗೂ ಅನ್ನ ಬಟ್ಟೆ ಬೇಕೇ ಬೇಕು. ಅವರು ಸಂತೃಪ್ತರಾಗಿರುವಷ್ಟು ಚೆನ್ನಾಗಿ ತಿಂದು ಭದ್ರವಾಗಿರುವ ಹಾಗೆ ಸಂಬಳ ಸಾರಿಗೆಗಳನ್ನು ಕೊಟ್ಟರೆ, ಆಗಲೇ ನಮ್ಮ ಈ ಯಂತ್ರ ದಕ್ಷತೆಯಿಂದ ಕೆಲಸ ಮಾಡಲು ಸಾಧ್ಯವಾದೀತು, ಇಲ್ಲದಿದ್ದರೆ ಅವರು ನಿರ್ವಂಚನೆಯಿಂದ ಕೆಲಸ ಮಾಡುವುದಕ್ಕೂ ಆಗುವುದಿಲ್ಲ, ಅತ್ತ ಲಂಚ ವಗೈರೆಗಳನ್ನು ತೆಗೆದುಕೊಳ್ಳುವುದನ್ನೂ ಬಿಡುವುದಿಲ್ಲ. ಆದ್ದರಿಂದ ಈ ಯಂತ್ರವನ್ನು ರೂಢಮೂಲವಾಗಿ ಬದಲಾವಣೆ ಮಾಡಬೇಕು. ಹಾಗೆ ಈ ಯಂತ್ರವನ್ನು ತಾವು ಬದಲಾವಣೆ ಮಾಡಿದರೆ ಮಾತ್ರ ರಾಷ್ಟ್ರ ನಿರ್ಮಾಣ ಮಾಡುವುದಕ್ಕೆ ಅವಕಾಶವಾಗುತ್ತದೆ; ಇಲ್ಲದಿದ್ದರೆ ರಾಷ್ಟ್ರ ಹೀನಸ್ಥಿತಿಗೆ ಬರಲು ಅವಕಾಶವಾಗುತ್ತದೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯನವರು (ಕಡೂರು).—ಸ್ವಾಮಿ, ದಿನ ದಿನಕ್ಕೂ ಈ ಆಹಾರಾಭಾವ ಮತ್ತೂ ದನಗಳ ಮೇವಿನ ಅಭಾವ ಜಾಸ್ತಿಯಾಗುತ್ತಿದೆ. ಕೋಲಾರದ ಕ್ಷಾಮ ಪರಿಸ್ಥಿತಿಯ ಬಗ್ಗೆ ಒಂದು ಹೇಳಿಕೆಯನ್ನು ಕೊಡತಕ್ಕ ಕಾಲದಲ್ಲಿ ಸಾಮಾನ್ಯವಾಗಿ ಹೀಗೆ ಮಳೆ ಬೀಳದೆ ಹೋಗಿರುತ್ತದೆಯೆಂಬ ಅಂಶ ಈಗಾಗಲೇ ಹೊರಬಿದ್ದಿದೆ. ಸಾಮಾನ್ಯ ವಿಚಾರಗಳ ಮೇಲೆ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು

(ಶ್ರೀ ವೈ. ಎಂ. ಚಂದ್ರಶೇಖರಯ್ಯನವರು)

ಮಾತನಾಡಿದ್ದಾರೆ. ಈ ಡಿಮ್ಯಾಂಡಿನ ವಿಚಾರವಾಗಿ ಮಾತನಾಡುತ್ತಾ ಶ್ರೀಮಾನ್ ಬಿ. ಹುಚ್ಚೇಗೌಡರು ಹೇಳಿದರು : ಹಂಗಾಮಿ ಸಾಗುವಳಿಗೆ ಸರ್ಕಾರದವರು ಕೊಡಲಾಗಿದ್ದಂಥ ಜಮಿಾನುಗಳ ಪೈಕಿ ನೂರಕ್ಕೆ 95 ರಷ್ಟನ್ನು ಸರ್ಕಾರ ಇನ್ನೂ ಮಂಜೂರು ಮಾಡಿಲ್ಲ, ಅದರಿಂದ ರೈತರಿಗೆ ಬಹಳ ಅನಾನುಕೂಲವಾಗಿದೆ ಎಂದು. ನಾವು ಮಾನ್ಯ ರೆವಿನ್ಯೂ ಮಂತ್ರಿಗಳಿಗೆ, ಅವರು ಪ್ರಧಾನ ಬಂದಿದ್ದ ಕಾಲದಲ್ಲಿ ಇಂಥಾ ನಿದರ್ಶನಗಳನ್ನು ಗಮನಕ್ಕೆ ತಂದೆವು. ಆಗ ಅವರು ಇವುಗಳಿಗೆ ಇನ್ನು ಮುಂದಕ್ಕೆ ಹೆಚ್ಚಿನ ನಿಗಾ ಕೊಡುವಂತೆ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದರು. ಕಡೂರು ತಾಲ್ಲೂಕಿನಲ್ಲಿ ಈಗ 2 ತಿಂಗಳಿಂದಲೂ ಮಳೆಯಿಲ್ಲ. ದನಕರುಗಳಿಗೆ ಬಹಳ ತೊಂದರೆಯಾಗಿದೆ. ಅಲ್ಲಿ ರೈತರು ವ್ಯವಸಾಯ ಮಾಡಿ ಇಟ್ಟಿದ್ದ ಾಗಿ ಜೋಳದ ಬೆಳೆಗಳೆಲ್ಲಾ ಒಣಗಿ ಹೋಗುತ್ತಿವೆ. ಸ್ವಲ್ಪ ಹೆಚ್ಚು ಕಡಮೆ ಕಡೂರು ತಾಲ್ಲೂಕಿನಲ್ಲೇ ಮಳೆ ಬಾರದೆ ಕ್ಷಾಮ ಪೀಡಿತ ಪ್ರದೇಶಗಳ ಪೈಕಿ ಇದೂ ಒಂದಾಗುವಂತಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ತಪಶೀಲುಗಳನ್ನೆಲ್ಲಾ 30ನೇ ಡಿಮ್ಯಾಂಡನ್ನು ಚರ್ಚೆಗೆ ತೆಗೆದುಕೊಂಡಾಗ ವಿವರಿಸಿದರೆ ಒಳ್ಳೆಯದು. ಈಗ ಇದಕ್ಕೆ ಸಂಬಂಧಪಟ್ಟ ವಿಚಾರಗಳೇನಾದರೂ ಇದ್ದರೆ ತಿಳಿಸಬಹುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಇಷ್ಟೇ. ಇನ್ನು ನಾನು ತಿಳಿಸಬೇಕಾದ ಹೆಚ್ಚಿನ ಹೊಸ ವಿಚಾರಗಳೇನೂ ಇರುವುದಿಲ್ಲ.

*ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ಸ್ವಾಮಿ ಈ ಜನರಲ್ ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಹೊಗಳುವುದೂ ಬಹಳ ಸುಲಭ ಮತ್ತೂ ಟೀಕೆ ಮಾಡುವುದೂ ಬಹಳ ಸುಲಭ. ಆದರೆ ಈ ಎರಡಕ್ಕೂ ನಿದರ್ಶನಗಳು ಬೇಕು. ಆದರೆ ಇದರಲ್ಲಿ ಒಂದು ಮಾತನ್ನು ಹೇಳುತ್ತೇನೆ. ಇಲ್ಲಿಯವರೆಗೆ ಆಗಿರತಕ್ಕ ವ್ಯತ್ಯಾಸಗಳಿಗೆ ಈಗಿರತಕ್ಕ ಸರ್ಕಾರವೂ ಜವಾಬ್ದಾರಿಯಲ್ಲ, ಹಿಂದಿದ್ದ ಸರ್ಕಾರವೂ ಜವಾಬ್ದಾರಿಯಲ್ಲ. ನನಗೆ ತಿಳಿದ ಮಟ್ಟಿಗೆ ಇದಕ್ಕೆಲ್ಲಾ ಕಾರಣ ಈ ಜಿ. ಎಂ. ಎಫ್. ಲೆಕ್ಕಪತ್ರಗಳನ್ನು ಸುಳ್ಳುಸುಳ್ಳಾಗಿ ಬರೆದ ಶ್ಯಾನುಭೋಗರುಗಳು. 5 ವರ್ಷಗಳವರೆಗೆ ಎಲ್ಲವೂ ಇರುವುದು, ಆ ಮೇಲೆ ಖಾಯಂ ಮಾಡಿಕೊಡಿ ಎಂದು ಹೇಳುವುದು...... ... .

Mr. SPEAKER.–On the first demand 'Land Revenue' you could have spoken about this.

ಶ್ರೀ ಎಂ. ಶಂಕರಲಿಂಗೇಗೌಡರು.—ಅದನ್ನು ತಾವೇ ನಿಲ್ಲಿಸಿದಿರಿ. ಅದು ಮುಗಿದು ಹೋಯಿತು. ನಾವೇನು ಮಾಡೋಣ ? ಇದೂ ಸಾಮಾನ್ಯವಾಗಿ ಜನರಲ್ ಅಡ್ಮಿನಿಸ್ಟ್ರೇಷನ್‌ಗೇ ಸಂಬಂಧಪಟ್ಟಿದೆ. ಈಗ ನನ್ನ ತಾಲ್ಲೂಕಿನಲ್ಲಿ ಎರಡು ಉದಾಹರಣೆ ಕೊಡುತ್ತೇನೆ. 15 ಸಾವಿರ ರೂಪಾಯಿಗಳ ವರಮಾನ ಬರುವುದನ್ನು ಒಂದು ಕಡೆ 5 ರೂಪಾಯಿಗಳಿಗೆ ಕೊಟ್ಟಿದ್ದಾರೆ. ಇನ್ನೊಂದು 3 ಸಾವಿರ ರೂಪಾಯಿಗಳಿಗೆ ಹರಾಜಾಗಿದೆ. ಇವನ್ನು ಹಿಂದಿನ ಮಂತ್ರಿಗಳು ತಿಳಿದುಕೊಂಡಿದ್ದಾರೆ. ರಿಕಾರ್ಡು ನಡೆಯುತ್ತಿದೆ, ಸರ್ಕಾರದವರು ಜಮಿಾನಿಲ್ಲದಿರುವವರಿಗೆ ಕೊಡಬೇಕೆಂದು ಹೇಳುತ್ತಾರೆ, ಅಪ್ಪನ ಹೆಸರಿಗೆ 150 ರೂಪಾಯಿಗಳು ಕಂದಾಯ ಕೊಡುವ ಜಮಿಾನು ಖಾತೆಯಾಗಿದ್ದರೂ ಜಮಿಾನಿಲ್ಲ ಎಂದು ಮಗ ಅರ್ಜಿ ಹಾಕಬಹುದು. ನಿಮ್ಮ ವರ್ಗದವರಿಗೆ ಜಮಿಾನಿಲ್ಲದಿರುವವರಿಗೆ ಕೊಟ್ಟರೂ ಕೊಡಬಹುದು. ಅದನ್ನು ಬಿಟ್ಟು ಬೆಂಗಳೂರು, ಮೈಸೂರುಗಳಲ್ಲಿದ್ದು ಕೊಂಡು ಅನುಕೂಲವಾಗಿರುವವರಿಗೆ ಜಮಿಾನನ್ನು ಕೊಡುತ್ತಿದೆ. ಈ ರೀತಿ ಅನೇಕ ಜಮಿಾನುಗಳನ್ನು ಪಡೆದುಕೊಂಡಿದ್ದಾರೆ. ಅದಕ್ಕೆ ಹೊಡೆದಾಡುವವರೇ ಇಲ್ಲ. ಹೀಗೆ ಮಾಡುತ್ತಾರೆಂದು ಯಾರಾದರೂ ಅರ್ಜಿಕೊಟ್ಟಿದ್ದರೆ ಆ ರೀತಿ ಮಾಡುತ್ತಾ ಇರಲಿಲ್ಲ. ಈಗ ಬೇಕಾದಷ್ಟು ಜಮಿಾನಿದೆ. ಹಿಂದೆ ಬಹು ಕಡಮೆ ಬೆಲೆಗೆ ಕೊಂಡಿರುವುದಕ್ಕೆ ಈಗ $1\frac{1}{2}$ ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಸಿದ್ಧವಾಗಿದ್ದಾರೆ, ಅದನ್ನು ನೋಡುವವರು ಕೇಳುವವರು ಯಾರೂ ಇಲ್ಲ, ಅಂಥಾದ್ದನ್ನು ಹರಾಜು ಮಾಡಬೇಕು. ಬೇಕಾದವರು ಹರಾಜಿನಲ್ಲಿ ತೆಗೆದುಕೊಳ್ಳಲಿ. ಅರ್ಧ ಅಥವಾ ಒಂದು ಎಕರೆ ಜಮಿಾನಿದ್ದು ತೊಂದರೆಯಾಗಿರುವವರಿಗೆ, ಇಲ್ಲದಿರುವವರಿಗೆ ಕೊಡಬಹುದು. ಹರಾಜು ಮಾಡಿದರೆ ಸುಮ್ಮನೆ ಗಲಾಟೆಯಾಗುತ್ತದೆಂದರೆ, ಅಂಥ ಸಂದರ್ಭಗಳಲ್ಲಿ ಕೊಡಬಹುದು. ಅದನ್ನು ಬಿಟ್ಟು ಒಳ್ಳೆಯ ಈಚಲು ವನದಲ್ಲಿ 15 ಎಕರೆಗಳನ್ನು ನಾಗಮಂಗಲ ತಾಲ್ಲೂಕಿನಲ್ಲಿ ಕೊಟ್ಟಿದ್ದಾರೆ, 20 ಸಾವಿರ ರೂಪಾಯಿಗಳಿಗೆ ಅದು ಹರಾಜಾಗುತ್ತದೆ. ಅಂಥಾದ್ದನ್ನು 5 ರೂಪಾಯಿಗಳಿಗೆ ಕೊಡುವುದು ಹೇಗೆ ? ಅಂಥಾದ್ದನ್ನು ತಪ್ಪಿಸಬೇಕು. ತಂದೆ ಹೆಸರಿನಲ್ಲಿ ಬೇಕಾದಷ್ಟು ಜಮಿಾನಿರುವಾಗ ಮಗನಿಗೆ ಕೊಡಬಾರದು. ಹೆಚ್ಚು ಆಹಾರ ಬೆಳೆಯುವ ಯೋಜನೆ ಪ್ರಕಾರ ಒಳ್ಳೆ ದನಗಳು ಮೇಯಲು ಅನುಕೂಲವಾಗಿರುವ ಜಮಿಾನನ್ನು ಕೊಡಬಾರದು. ಈ ಸೂಚನೆಯನ್ನು ನಮ್ಮ ಸರ್ಕಾರ ಗಮನಿಸುವುದಾದರೆ ನಮ್ಮ ಬರ ಹರಿಯುವುದು. ದೇಶದಲ್ಲಿ ಹಣವಿಲ್ಲವೆಂದು ಹೇಳುವುದು ತಪ್ಪುತ್ತದೆ. ಇದರಿಂದ ಎರಡು ಕೋಟಿ ರೂಪಾಯಿಗಳು ಉತ್ಪತ್ತಿಯಾಗುತ್ತದೆ. ಈ ರೀತಿಯಾಗಿ ಪಡೆದು ಹಣವನ್ನು ಖಜಾನೆಗೆ ಭರ್ತಿಮಾಡಬೇಕು ಎಂದು ಹೇಳುತ್ತೇನೆ.

Sri S. SRINIVASA IYENGAR (T.-Narasipur).—Mr. Speaker, while opposing the Demand under this head 'District Administration,'' I beg to place before this House a few important points which I have noticed under 'Government Hospitality Organisation'. The head 'Government Hospitality Organisation' contains a provision for Rs. 2,77,000 or so. Out of that, I really fail to understand why such a large amount as Rs. 1,65,124 has been provided for under Contingency and Postal Charges. Should Government Hospitality Organisation have a provision of nearly Rs. 1,65,124 as postal charges ? There is no explanation. It is nowhere seen in the Budget why it is provided for.

A VOICE. Have you seen the receipt side ?

Sri S. SRINIVASA IYENGAR.—I am quite conscious about it. The receipt side shows Rs. 2,84,000. From Hotel Metropole, Krishnaraja

Hotel, and Irrigation we get a realisation, of Rs. 2,84,000. Even after deducting that receipt, you spend Rs. 2,77,000 for Government Hospitality Organisation. These things existed when there was foreign rule. I do not understand why such a large amount is to be made available for this organisation.

Even apart from that, under this head, out of Rs. 2,77,000, a provision has been made for Establishment to the tune of Rs. 91,223. No doubt it is quite correct and necessary to make provision for the High Price and Dearness Allowances. But I cannot really understand how provisions are necessary under the following Heads.—Other Allowances: Other Charges: Bonus: Miscellaneous. All these things are included in the Budget and I fail to understand why, nor are they easily understandable. Therefore in opposing this demand, I would say that if retrenchment is to be effected, it is only under this head you could avoid a heavy expenditure.

ಶ್ರೀ ಆರ್. ಅನಂತರಾಮಯ್ಯರವರು (ಚಾಮರಾಜಪೇಟೆ).—ಅಧ್ಯಕ್ಷರೇ, ಈ ಸಾಮಾನ್ಯಾಡಳಿತದ ಡಿಮ್ಯಾಂಡನ್ನು ಸಮರ್ಥಿಸುತ್ತಾ ಒಂದು ಸಲಹೆಯನ್ನು ಮಾತ್ರ ಮಂತ್ರಿಗಳಲ್ಲಿ ಮಾಡಬೇಕೆಂದು ಆಶಿಸುತ್ತೇನೆ. ಕೆಲವು ದಿವಸಗಳ ಹಿಂದೆ ಪಂಡಿತ ಜವಾಹರ್‌ಲಾಲ್ ನೆಹ್ರೂರವರು ಕಾನ್ಪುರದ ಕೈಗಾರಿಕಾ ಕೂಲಿಗಾರರು ವಾಸಮಾಡುವ ಸ್ಥಳಕ್ಕೆ ಹೋಗಿ ಅವರ ಮನೆಗಳನ್ನು ನೋಡಿಕೊಂಡು ಬಂದಿರುವುದು ಅನೇಕರಿಗೆ ಗೊತ್ತಿರಬಹುದು. ಕೊಳಕು ಪ್ರದೇಶದಲ್ಲಿ ಚಿಕ್ಕಗುಡಿಸಲುಗಳಲ್ಲಿ ಬಹುಮಂದಿ ಕಷ್ಟಪಟ್ಟುಕೊಂಡು ವಾಸಮಾಡುತ್ತಿದ್ದುದನ್ನು ನೋಡಿ ಒಂದು ಮಾತು ಹೇಳಿದ್ದಾರೆ. ಆ ಗುಡಿಸಲುಗಳನ್ನು ಆದಷ್ಟು ಬೇಗ ಆ ಜಾಗದಿಂದ ಸಾಗಿಸಿ ಅವರಿಗೆ ಮನೆ ಕಟ್ಟಿಕೊಡಿ ಎಂದು ಆಜ್ಞೆ ಮಾಡಿದ್ದಾರೆ. ಮತ್ತು ಅವರು ಯಾವ ಕಡೆ ಹೋದರೂ ತಮ್ಮ ಭಾಷಣದಲ್ಲಿ ಈ ವಿಚಾರವನ್ನು ಒತ್ತಿ ಒತ್ತಿ ಹೇಳುತ್ತಿದ್ದಾರೆ. ಈಗ ನಮ್ಮ ಬಡ್ಜೆಟ್ಟಿನ ಆರನೆಯ ಪುಟದಲ್ಲಿ ಕೂಲಿಕಾರರ ಮನೆಗಳಿಗಾಗಿ 51-52ನೆಯ ಸಾಲಿನಲ್ಲಿ ಇಂಡಿಯಾ ಸರ್ಕಾರದವರು 20 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ನಮೂದಾಗಿದೆ. ಇಷ್ಟು ಕೊಟ್ಟರೂ ನಮ್ಮ ಅಧಿಕಾರಿಗಳೇಕೆ ಮೈಸೂರು, ಬೆಂಗಳೂರು, ಕೋಲಾರದ ಚಿನ್ನದ ಗಣಿ ಪ್ರದೇಶ, ಭದ್ರಾವತಿ ಮುಂತಾದ ಪಟ್ಟಣಗಳಲ್ಲಿ ವಾಸಮಾಡುವ ಕೂಲಿಗಾರರಿಗೆ ಚಿಕ್ಕ ಮನೆಗಳನ್ನು ಕಟ್ಟಿಲ್ಲ ಎಂದು ಟೀಕೆ ಮಾಡಬೇಕಾದದ್ದು ನನ್ನ ಕರ್ತವ್ಯ. ಬೆಂಗಳೂರು ನಗರದಲ್ಲಿ ಮತ್ತು ಕೆಲವು ಪಟ್ಟಣಗಳಲ್ಲಿ ಚಿಕ್ಕ ಚಿಕ್ಕ ರೂಮುಗಳಲ್ಲಿ ಗಂಡ, ಹೆಂಡತಿ, ಮಗ, ಸೊಸೆ ಎಲ್ಲಾ ಸೇರಿ ಸುಮಾರು 8-10 ಜನರು ವಾಸಮಾಡುತ್ತಿರುವ ನೂರಾರು ನಿದರ್ಶನಗಳಿವೆ. ಹಿಂದೆ ಟ್ರಸ್ಟ್ ಬೋರ್ಡಿನ ಮಂತ್ರಿಗಳಾಗಿದ್ದ ಶ್ರೀ ಎಚ್. ಸಿ. ದಾಸಪ್ಪನವರನ್ನೂ ಮತ್ತು ಇತರ ಕೆಲವು ಮಹನೀಯರನ್ನೂ ಚಾಮರಾಜಪೇಟೆಯಲ್ಲಿರುವ ಕೂಲಿಗಾರರ ಮನೆಗಳ ಬಳಿಗೆ ಕರೆದುಕೊಂಡು ಹೋಗಿ ಅವರ ಅವಸ್ಥೆಯನ್ನು ತೋರಿಸಿದ್ದೆ. ಚಿಕ್ಕ ಮನೆಗಳಲ್ಲಿ 10-12 ಮಂದಿ ವಾಸಮಾಡುವುದನು ನೋಡಿ ಅವರು ಬಹಳ ಚಿಂತೆಪಟ್ಟರು. ಹೀಗೆ ಪಟ್ಟಣದಲ್ಲಿ ಬಹಳ ಕಷ್ಟವಿದೆ. ಕೂಲಿಗಾರರೆಂದರೆ ವ್ಯವಸಾಯ ಮಾಡುವವರೂ ಮತ್ತು ಕೈಗಾರಿಕೆಗಳಲ್ಲಿ ಕೆಲಸ ಮಾಡುವವರೂ ಸೇರಿದ್ದಾರೆ. ಮುಖ್ಯವಾಗಿ ಬಡವರಿಗೆ ಈಗ ಎಷ್ಟೋ ಕಷ್ಟವಾಗಿದೆ. ಈಗ ಎಲ್ಲಿ ನೋಡಿದರೂ ಬೆಂಗಳೂರು ನಗರದಲ್ಲಿ ಒಂದು ಚಿಕ್ಕ ರೂಮಿಗೆ 15 ರೂಪಾಯಿಗಳು ಬಾಡಿಗೆ ಕೊಡಬೇಕಾಗಿದೆ. ರೆಂಟ್ ಕಂಟ್ರೋಲ್ ಮಾಡಿದ್ದರೂ ಅವರಿಗೆ ಅನುಕೂಲ ದೊರೆತಿಲ್ಲ. ಹೀಗಿದ್ದರೂ ಇಂಡಿಯಾ ಸರ್ಕಾರದವರು 20 ಸಾವಿರ ರೂಪಾಯಿಗಳನ್ನು ಕೊಟ್ಟಿರುವಾಗ ಏಕೆ ನಿಧಾನ ಮಾಡುವುದು?

Sri A. BHEEMAPPA NAIK.—Would they spend any amount before it is sanctioned? It has been just brought for sanction.

4-30 P.M.

ಶ್ರೀ ಆರ್. ಅನಂತರಾಮನ್ ಅವರು.—ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ಕೆಲವು ಮನೆಗಳನ್ನು ಕಟ್ಟಿದ್ದಾರೆ. ಕಟ್ಟುತ್ತಾ ಇರುವುದು ಬಹಳ ನಿಧಾನ. ಪಟ್ಟಣಗಳಲ್ಲಿ ಜನಸಂಖ್ಯೆ ಬಹಳವಾಗಿ ಹೆಚ್ಚುತ್ತಾ ಇದೆ.........

ಶ್ರೀ ಡಿ. ದೇವರಾಜ ಅರಸ್‌ರವರು—ಕೂಲಿಗಾರರಿಗೆ ಮನೆ ಕಟ್ಟುವ ವಿಚಾರ ಇದರಲ್ಲಿ ಮಾತನಾಡಬಹುದು. ಸಾಮಾನ್ಯವಾಗಿ ಮಾತನಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಟಿ. ಹನುಮಯ್ಯನವರು.—ಜನಸಂಖ್ಯೆ ಪಟ್ಟಣಗಳಲ್ಲಿ ಒಂದೇ ಕಡೆ ಅಲ್ಲ, ಎಲ್ಲಾ ಕಡೆಯೂ ಹೆಚ್ಚುತ್ತಾ ಇದೆ.

ಶ್ರೀ ಆರ್. ಅನಂತರಾಮಯ್ಯರವರು.—ಹೀಗೆ ಹಣ ಒದಗಿಸಿದ್ದರೂ ಸಂಸ್ಥೆಗಳವರು ಬಹಳ ನಿಧಾನ ಮಾಡುತ್ತಾ ಇದ್ದಾರೆ.

Mr. SPEAKER.—You have got one minute more.

ಶ್ರೀ ಆರ್. ಅನಂತರಾಮಯ್ಯರವರು.—ಬಡವರಿಗೆ ಮನೆಗಳನ್ನು ಒದಗಿಸುವುದು ಬಹಳ ನಿಧಾನವಾಗಿದೆ. ಆದ್ದರಿಂದ ನಾನು ಒತ್ತಿಹೇಳುವುದೇನೆಂದರೆ, ಆದಷ್ಟು ಬೇಗ ಮಂತ್ರಿ ಮಂಡಲದವರು ಆಲೋಚನೆ ಮಾಡಿ ಈ ಬಡಜನರಿಗಿರುವ ಮನೆ ಅಭಾವವನ್ನು ಹೋಗಲಾಡಿಸಲು ಸಹಾಯ ಮಾಡಬೇಕೆಂದು ಹೇಳುತ್ತೇನೆ.

***Sri T. MARIAPPA** (Mysore City North).—If there is no objection, I would like to speak. ಅಧ್ಯಕ್ಷರೇ, ಈ ಸಂದರ್ಭದಲ್ಲಿ ಮಾತನಾಡಬಾರದು ಎಂದು ಇದ್ದೆ. ಆದರೆ ಮಾನ್ಯ ಗೋಪಾಲಗೌಡರು ಮಾತನಾಡಿದ ಮೇಲೆ ಮಾತನಾಡಬೇಕೆಂದು ಎನಿಸಿದೆ. ಇದು ಪ್ರಜಾಪ್ರಭುತ್ವ. ಒಂದು ವೇಳೆ ಯಾವ ತರಹ ಆಡಳಿತ ಇರಬೇಕೆಂದು ಅವರು ಪ್ರಸ್ತಾಪಿಸಿದ್ದಾರೋ ಅದರಲ್ಲೂ ರಾಜಕೀಯದಲ್ಲಿ ದುಡಿದಿರತಕ್ಕವರು ಯಾವಾಗಲೂ ಬಹಳ ತೀವ್ರವಾಗಿ ಆಲೋಚಿಸುತ್ತಾ ಇದ್ದಾರೆ. ಪಾಶ್ಚಿಮಾತ್ಯ ದೇಶಗಳ ವಿಚಾರ ಹೇಳುವುದಾದರೆ, ಅವರ ದೇಶದ ಆಡಳಿತವನ್ನು ಸಮರ್ಪಕವಾಗಿ ನಡೆಸುವುದಕ್ಕೆ, ಕಂದಾಯ ವಸೂಲು ಮಾಡುವುದಕ್ಕೆ ನಿರ್ಮಾಣಮಾಡಿದ ಯಾವ ಯಂತ್ರವನ್ನು ಇಟ್ಟುಕೊಂಡಿದ್ದಾರೋ ಅದರಿಂದ ಜನಗಳಿಗೆ ಸಹಾಯ

(SRI T. MARIAPPA)

ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಆಲೋಚನೆ ಮಾಡುತ್ತಾ ಇದ್ದಾರೆ. ಹಾಗೆಯೇ ಶ್ರೀಮಾನ್ ಗೋಪಾಲಗೌಡರು ಆಲೋಚಿಸಿದರೆ, ಇದು ಒಂದೇ ಕಡೆಯಲ್ಲ, ದೇಶದ ನಾನಾ ಕಡೆಗಳಲ್ಲಿ ಈ ವಿಚಾರ ಬಹಳ ತೀವ್ರವಾಗಿ ಚರ್ಚೆಯಾಗಿದೆ. ಪ್ರಾಯಶಃ ವಿರೋಧ ಪಕ್ಷದಲ್ಲಿದ್ದಾಗ ನಾವೂ ಎಷ್ಟೋ ಸಾರಿ ಟೀಕೆ ಮಾಡಿದ್ದೇವೆ. ಈ ಟ್ರಸ್ಟೆಡ್ ಮೆಷಿನರಿ ಜನರ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಅಡ್ಡಿ ಬರುತ್ತಿದೆ ಎಂಬ ಭಾವನೆ ಇತ್ತು. ಪ್ರಾಯಶಃ ಪೂರ್ಣ ಸ್ವಾತಂತ್ರ್ಯ ಬಂದು ಜವಾಬ್ದಾರಿ ಸರ್ಕಾರ ಸ್ಥಾಪನೆಯಾದ ಮೇಲೆ ಇದನ್ನು ಸ್ಕ್ರಾಪ್ ಮಾಡಬಹುದು ಎಂದು ಆಲೋಚನೆಯಿಟ್ಟುಕೊಂಡಿದ್ದೆವು. ಆದರೆ ಮಾನ್ಯ ಗೋಪಾಲಗೌಡರಿಗೆ ತಿಳಿಸುತ್ತೇನೆ, ಸಂಪೂರ್ಣವಾಗಿ ಈ ಮೆಷಿನರಿ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ನೋಡಿದ ಮೇಲೆ ಇದನ್ನು ರೀಪ್ಲೇಸ್ ಮಾಡುವುದಕ್ಕಾಗುವುದಿಲ್ಲ. ಇದನ್ನು ತೆಗೆದರೆ ಬೇರೆ ಇಲಾಖೆ, ಬೇರೆ ಯಂತ್ರ ನಿರ್ಮಾಣ ಮಾಡಬೇಕಾಗುತ್ತದೆ ಎಂದು ಮನವರಿಕೆಯಾಯಿತು. ಯಂತ್ರ ಸರಿಯಾಗಿದೆ. ಯಂತ್ರದಲ್ಲಿ ತೊಂದರೆ ಇಲ್ಲ. ನಮ್ಮ ದೇಶದ ವಾತಾವರಣಕ್ಕೆ ಈ ಯಂತ್ರ ಹೊಂದಿಕೊಳ್ಳಬೇಕು. ಆದ್ದರಿಂದ ಪ್ರಜಾಪ್ರಭುತ್ವಕ್ಕೆ ಈ ಯಂತ್ರ ಹೊಂದಿಕೊಂಡೇ ಹೊಂದಿಕೊಳ್ಳುತ್ತದೆ. ಆದರೆ ಆತುರ ಮಾಡಬಾರದು. ಬಹಳ impatient ಆಗಿದ್ದೇವೆ. ಎಲ್ಲಾ ಒಂದೇ ದಿನದಲ್ಲಿ ಆಗಬೇಕೆಂದರೆ ಸಾಧ್ಯವಿಲ್ಲ. ತಳಹದಿ ಹಾಕಬೇಕು, ಗೋಡೆ ಕಟ್ಟಬೇಕು, ಇದೆಲ್ಲಾ ಒಂದೇ ದಿನದಲ್ಲಿ ಆಗುವುದಿಲ್ಲ. ಅನೇಕ ವರ್ಷಗಳ ಕಾಲ ಆಡಳಿತ ಯಂತ್ರ ನಡೆಸಿಕೊಂಡು ಬರುತ್ತಿರುವಾಗ ಯಂತ್ರದಲ್ಲಿ ಮಾರ್ಪಾಡು ಆಗಬೇಕು. ಮನುಷ್ಯಮಾತ್ರದವರು ಅದನ್ನು ನಡೆಸುವಾಗ ಕೆಲವು ಲೋಪದೋಷಗಳು ಬರಬಹುದು. ಆದ್ದರಿಂದ ಅವರು ಯೋಚಿಸಿರುವಷ್ಟು ಮಟ್ಟಿಗೆ ಕೆಟ್ಟು ಹೋಗಿದೆಯೆಂದು ಯಾರೂ ತಿಳಿದುಕೊಳ್ಳಬೇಕಾಗಿಲ್ಲ. ಆಗಸ್ಟ್ 15, 1947ರಿಂದೀಚೆಗೆ ಈಯಂತ್ರ ಮಾಡಿರತಕ್ಕ ಕೆಲಸವನ್ನು ತುಲನಮಾಡಿ ನೋಡಿದರೆ ಬೇರೆ ಯಾವ ಯಂತ್ರದಿಂದಲೂ ಅದು ನಿರ್ವಹಿಸಿರತಕ್ಕ ಕಾರ್ಯ ಸಾಧ್ಯವಾಗುತ್ತಾ ಇರಲಿಲ್ಲ. ಅಷ್ಟೊಂದು ಪ್ರೆಷರ್ ಸ್ಟ್ರೆಸ್, ಸ್ಟ್ರೇನ್ ಅದು ನಿರ್ವಹಿಸಿದೆ. ದೇಶ ವಿಭಾಗವಾದ ಮೇಲೆ ಪಶ್ಚಿಮ ಪಾಕೀಸ್ತಾನದಿಂದ 60 ಸಾವಿರ ಜನ ಇಲ್ಲಿಗೆ ಬಂದರು. ಹೈದರಾಬಾದಿನ ಪೋಲೀಸ್ ಆಕ್ಷನ್ ಆಗುವುದಕ್ಕಿಂತ ಮುಂಚೆ ಎಷ್ಟೋ ಜನ ಬಂದರು, ಇದನ್ನೆಲ್ಲಾ ಈ ಆಡಳಿತ ಯಂತ್ರ with-tand ಮಾಡಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಆದ್ದರಿಂದ ಈ ಯಂತ್ರ ಬಹಳ ಕೆಟ್ಟು ಹೋಗಿದೆ, ತೀರ ಮಾರ್ಪಾಡು ಮಾಡಬೇಕೆಂದು ಬಾಯಲ್ಲಿ ಹೇಳುವುದು ಸುಲಭ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಅನೇಕ ಜನ ಪಾಕೀಸ್ತಾನಕ್ಕೆ ಹೋಗಿದ್ದಾರೆ. ಯಾವ ರೀತಿ ಮಾರ್ಪಾಡು ಮಾಡಿದರೆ ನಮ್ಮ ಕಾರ್ಯಕ್ಕೆ ಅಳವಡಿಸುವುದಕ್ಕೆ ಸಾಧ್ಯ ಎಂಬುದನ್ನು ವಿಚಾರಪೂರ್ವಕವಾಗಿ ಪರಿಶೀಲನೆ ಮಾಡಿದ ಗೋರ್‌ವಾಲಾರವರು ಒಂದು ವರದಿ ಕೊಟ್ಟಿದ್ದಾರೆ. ಪ್ರಜಾ ಪ್ರಭುತ್ವದಲ್ಲಿ ಸ್ಥಾಪನೆಯಾಗಿರತಕ್ಕ ಈ ಹೊಸ ಸೆಟ್‌ಅಪ್‌ಗೆ, ಇಂಡಿಯಾ ದೇಶದ ಸನ್ನಿವೇಶಕ್ಕೆ ಈ ಆಡಳಿತ ಯಂತ್ರ ಹೊಂದಿಕೊಳ್ಳುತ್ತದೆಯೇ ಇಲ್ಲವೇ; ಹೊಸದಾಗಿ ಬಂದಿರತಕ್ಕ ಪ್ರಜಾ ಮಂತ್ರಿಗಳಿಗೂ, ಸಿವಿಲಿಯನ್ಸ್‌ಗೂ ಸಂಬಂಧ ಹೇಗಿರಬೇಕು, ಸ್ಟ್ರೇನ್ ಆಗುತ್ತದೆಯೇ ಇಲ್ಲವೇ, ಲೆಜಿಸ್ಲೇಟರುಗಳು ಯಾವ ರೀತಿ ಪ್ರಭಾವವನ್ನು ಬೀರುತ್ತಾರೆ, ಸಾರ್ವಜನಿಕ ಕೆಲಸ ಕಾರ್ಯಗಳು ನಿಧಾನವಾಗುತ್ತವೆಯೇ, ಚೆನ್ನಾಗಿ ನಡೆಯುತ್ತವೆಯೇ, ಎಂಬುದನ್ನೆಲ್ಲಾ ಪರಿಶೀಲನೆ ಮಾಡಲು ಇಂಡಿಯಾ ಸರ್ಕಾರದವರು ಗೋರ್‌ವಾಲಾರವರನ್ನು ನೇಮಕ ಮಾಡಿದ್ದರು. ಅವರು ಇಂಡಿಯಾ ದೇಶವನ್ನೆಲ್ಲಾ ಸುತ್ತಿ ಪ್ರಾಂತೀಯ ಸರ್ಕಾರದ ಮಂತ್ರಿಗಳು ಸಿವಿಲಿಯನ್ನುಗಳು, ಸಾರ್ವಜನಿಕರು ಇವರನ್ನೆಲ್ಲಾ ಭೇಟಿ ಮಾಡಿ ಅವರೆಲ್ಲರ ಅಭಿಪ್ರಾಯಗಳನ್ನು, ತೆಗೆದುಕೊಂಡು ಬಹಳ ಸೊಗಸಾದ ವರದಿ ಒಪ್ಪಿಸಿದ್ದಾರೆ. ಪ್ರಾಯಶಃ ಲೆಜಿಸ್ಲೇಟರ್ಸ್ ಎಲ್ಲರೂ ಅದನ್ನು ಓದಬೇಕೆಂದು ವಿನಯಪೂರ್ವಕವಾಗಿ ಮನವಿಮಾಡಿಕೊಳ್ಳುತ್ತೇನೆ. ಪ್ರಜಾಪ್ರಭುತ್ವ ಚೆನ್ನಾಗಿ ನಡೆಯಬೇಕಾಗಿದ್ದರೆ ಇಂಥ ಯಂತ್ರ ಇರಬೇಕು. ಇಲ್ಲದೇ ಇದ್ದರೆ ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ.

Sri Mulka GOVINDA REDDY.—Has the Hon'ble ex-Minister supplied copies of the report to the legislators?

Sri T. MARIAPPA.—I hope the Government will supply these reports to the legislators. It is a very valuable document.

Mr. SPEAKER.—A brief report is published in several newspapers.

Sri M. SANKAR LINGE GOWDA.—How can we believe newspaper reports? (Laughter).

Sri T. MARIAPPA.—It is a very valuable report. After all, we are working the Constitution and when working the Constitution it is absolutely essential to translate policies into action. Therefore I would like to make a benevolent appeal to Sri Gopala Gowda to disabuse his mind of these ideas. These ideas are no doubt natural to a man who is not fully conversant with the working machinery. No doubt this machinery was once used by the foreign bureaucracy with a view to collect taxes and to maintain law and order, but that old machinery is doing an excellent work, making an allowance here and there for human lapses. With these words I support the demand.

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು (ಚಿತ್ರದುರ್ಗ).—ಸ್ವಾಮಿ, ಈಗಿನ ಯಂತ್ರ ಸರಿಯಾಗಿದೆ, ಸಮರ್ಪಕವಾಗಿದೆ ಎಂದು ಮಾಜಿ ಮಂತ್ರಿಗಳು ಹೇಳಿದರು. ಆದರೆ ಈಗಿನ 5 ವರ್ಷಗಳಲ್ಲಿ ಈ ಯಂತ್ರದಿಂದ ಅಷ್ಟು ಸುಖ ಕಂಡುಬಂದಿಲ್ಲ. ಈ ಯಂತ್ರದಿಂದ ಜನಗಳಿಗೆ ಅನುಕೂಲವಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಇದೇ ರೀತಿ ಎಲ್ಲೆಲ್ಲಿ ಬೇರೆ ದೇಶಗಳಲ್ಲಿ ಪ್ರಜಾಪ್ರಭುತ್ವ ಜಾರಿಗೆ ಬಂದಿದೆಯೋ ಅಲ್ಲೆಲ್ಲಾ ಈ ಯಂತ್ರ ಬಹಳವಾಗಿ ಬದಲಾವಣೆಯಾಗಿ ಜನಗಳಿಗೆ ಬಹಳ ಅನುಕೂಲವಾಗಿದೆ. ಚೈನಾದಲ್ಲಾಗಲಿ, ಯೂರೋಪಿನ ಈಸ್ಟರ್ನ್ ಡೆಮಾಕ್ರೆಸಿನಲ್ಲಾಗಲಿ ಅಲ್ಲಿನ ಜನ ಬಹಳ ಮಾರ್ಪಾಡು ಮಾಡಿದ್ದಾರೆ, ಆದರಿಂದ

ಜನರ ಏಳಿಗೆ ಮುಂದುವರಿದಿದೆ. ಇಂಡಿಯಾ ದೇಶದಲ್ಲಿ ಆ ರೀತಿ ಏನೂ ಆಗಿಲ್ಲ. ಅಂಥಾ ಒಂದು ದೊಡ್ಡ ಮಾರ್ಪಾಡ ಆಗಿ ಇಲ್ಲೂ ಸಹ ಜನಗಳಿಗೆ ಬಹಳ ಅನುಕೂಲವಾಗುವಂತೆ ಆಗಬೇಕೆಂಬದನ್ನು ನನ್ನ ಮಿತ್ರರಾದ ಶ್ರೀಮಾನ್ ಮರಿಯಪ್ಪನವರು ತಿಳಿಯಬೇಕು. ಆ ರೀತಿ ಮಾಡಲು ಈಗಿನ ಸರ್ಕಾರ ಈ ಯಂತ್ರದಲ್ಲಿ ಮಾರ್ಪಾಡು ಮಾಡಬೇಕೆಂದು ಹೇಳುತ್ತೇನೆ.

Sri T. MARIAPPA—Is he quoting the example of China or of any democracy ? If he could only give an example of any democratic set-up where such a thing exists, I will be very glad.

Sri Mulka GOVINDA REDDY.—Yes, I am quoting the example of China and Eastern democracies in Europe. But the time at my disposal is very short and therefore I am not going into the details of it. I will take another opportunity to give these details if the Member wants them.

ಇನ್ನೊಂದೇನೆಂದರೆ, ಈಗಿನ ಅಧಿಕಾರಿಗಳು ಮೊದಲು ಯಾವ ಒಂದು Bureaucratic ಆಡಳಿತ ಪದ್ಧತಿಯಿತ್ತೋ ಪರದೇಶದವರು ಯಾರಿದ್ದರೋ ಅವರ ಕೈಕೆಳಗೆ subordinate ಆಗಿದ್ದು ಆತ್ಮ ಸ್ವಾತಂತ್ರತೆಯನ್ನು ಕಳೆದುಕೊಂಡಿದ್ದು, ಬೇರೆಯವರಿಗೆ subordinate ಆಗಿರುವ ಮನೋಭಾವನೆಯಿಂದಲೇ ಕೂಡಿರುವವರಾಗಿ ಸುಲಭವಾಗಿ influencesಗಳಿಗೆ ಮನಸೋಲುವವರಾಗಿದ್ದಾರೆ. ಆದ್ದರಿಂದ ಇದು ಮಾರ್ಪಾಟಾಗಬೇಕೆಂದು ಹೇಳುತ್ತೇನೆ.

(Several Members rose)

Mr. SPEAKER.—We have got 20 minutes more. Discussion can go on for 10 minutes and stop and then the Minister may reply.

ಶ್ರೀ ಗೋಪಾಲಗೌಡರು.—ಒಂದು ವಿಷಯವನ್ನು ಸ್ಪಷ್ಟಪಡಿಸಬೇಕು, ಸ್ವಾಮಿ. ಶ್ರೀಮಾನ್ ಮರಿಯಪ್ಪನವರು ಭಾಷಣ ಮಾಡುವಾಗ, ನಾನು ಗೋರ್‌ವಾಲಾ ಕಮಿಟಿಯ ವರದಿಯನ್ನು ಓದಿಲ್ಲವೋ ಏನೋ, ಅದನ್ನು ಓದಿ ಹೆಚ್ಚಿನ ವಿಷಯವನ್ನು ತಿಳಿದುಕೊಂಡು ಮಾತನಾಡಲಿ ಎಂದು ಒಂದು ಬುದ್ಧಿವಾದದ ಮಾತನ್ನು ಹೇಳಿದರು. ನಾನೂ ಅದನ್ನು ನೋಡಿ ಅದರಲ್ಲಿರುವುದನ್ನು ಚೆನ್ನಾಗಿ ಗ್ರಹಿಸಿದ್ದೇನೆಂದು ಹೇಳಬಲ್ಲೆ. ಜನತೆಯ ಮನಸ್ಸನ್ನು ಒಲಿಸಿಕೊಂಡು ಅವರಿಗೆ ಹೊಂದಿಕೊಂಡು ಕೆಲಸಮಾಡದಿರುವುದರಿಂದಲೇ ನಿಮ್ಮ ಯೋಜನೆಗಳೊಂದೂ ನಡೆದಿಲ್ಲ. ಅದರಿಂದಲೇ ನಿಮ್ಮ ಯೋಜನೆಗಳು ನಿಷ್ಫಲವಾಗಿವೆಯೆಂದು ಹೇಳುತ್ತೇನೆ.

Sri B. NARAYANASWAMY.—(Mysore City South).—Mr. Speaker, Sir, I am very much amused to hear the other side delivering some sermons. The Leader of the Opposition seems to be delivering the sermon on the mount. He thinks that this is a class room and we are students here to take lessons on morals as to how to run an administration. Mr. Speaker, Sir, the opposite side should know that this party is running the Government for the past five years and we have become expert administrators.

Janab J. MOHAMED IMAM.—Question !

Sri B. NARAYANASWAMY.—Secondly, I see from the budget that the administration is being run splendidly well and I think in no Government of any of the States the administration is so efficiently and so marvellously conducted as is here done. Besides, Sri Gopala Gowda was pleased to say that there was a time when the British bureaucracy was exploiting us making use of the administrative machinery to their own ends. They have gone. The present Civil Service men or Government servants who are helping us are our own men. Sri Gopala Gowda should understand that his own cousin or brother or brother-in-law may be a Government servant and if he is doing a service in the best interest of the administration, he cannot throw any aspersion on him. After all, we are still in an infant stage and a State is not so easily run by democracy as it is run by Dictators. In this country democracy is still in the beginning. Democracy cannot be reproduced from books or from Western methods. Sri Mulka Govinda Reddy was just now pleased to say that in China there is democracy. It is absolutely false. It is a wrong statement. He cannot make references to countries which, perhaps. he has not seen or about which he might not have read

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—On a point of explanation, Sir ಅವರು ಹೇಳಿದರು, ನಾನು ಆ ದೇಶಗಳನ್ನಾವುದನ್ನೂ ನೋಡಿಲ್ಲ ಎಂದು. ಹೌದು, ಅದು ನಿಜ. ಏಕೆಂದರೆ, ಸರ್ಕಾರದವರು ನನಗೆ ಯಾವರೀತಿಯಲ್ಲೂ ದುಡ್ಡುಕೊಟ್ಟು ಕಳುಹಿಸಿಲ್ಲ; ಯಾವ ಡೈರೆಕ್ಟರ್-ಕೆಲಸವನ್ನೂ ಕೊಟ್ಟಿಲ್ಲ! ಅದರಿಂದ ಹೋಗುವುದಕ್ಕಾಗಲಿಲ್ಲ ಅಷ್ಟೆ. ಆದರೂ ಅವುಗಳ ವಿಚಾರವನ್ನೆಲ್ಲಾ ಓದಿದ್ದೇನೆ. ಬೇಕಾದರೆ ಅವರಿಗೂ ಆ ಪುಸ್ತಕಗಳನ್ನೆಲ್ಲಾ ತಂದುಕೊಡುವುದಕ್ಕೂ ಸಿದ್ಧವಾಗಿದ್ದೇನೆ.

Sri B. NARAYANASWAMY.—I am sorry, Mr. Speaker. Sri Mulka Govinda Reddy has made a personal reference to me that I was a Director ....

Sri Mulka GOVINDA REDDY.—I did not make any personal reference.

Sri B. NARAYANASWAMY.—I can only say, Mr. Speaker, that whatever arguments have been advanced from the other side, have been just made for argument's sake and in their heart of hearts they know that the administration is well run and the administration that we have got now is very good. I can only say that it is not a practical suggestion to say that the administration should be changed in a day. Rome was not built in a day.' I know Sri Gopala Gowda, in his enthusiasm, has said all this. A day may come when you may be on this side and you will find what the difficulty is. You must therefore be very careful in making statements. When you come to Government, you may say that it is not possible to change the administration as the opposite side suggests.

Mr. Speaker, I conclude by saying that there is no use by merely theorizing on this doctrine or making some dogmatic statements. We are all administrators here. We should know that we are running the Government. We should be practical in whatever we say. The demand that is now put before this House, should be supported.

Sri M. SHANKAR LINGE GOWDA.—Is it Administrators' Government or Advisors'?

Sri B. NARAYANASWAMY.—I am sorry that Sri Shankar Linge Gowda, in spite of being a Member of the Assembly, says it. It is Administrators' and not Advisors". I say that we are all administrators helping the administration.

ಶ್ರೀ ಕಡಿದಾಳ್ ಮಂಜಪ್ಪನವರು (ಪಬ್ಲಿಕ್ ವರ್ಕ್ಸ್ ಮತ್ತು ರೆವಿನ್ಯೂ ಮಂತ್ರಿಗಳು).- ಅಧ್ಯಕ್ಷರೇ, ಜನಾಬ್ ಇಮಾಂರವರು ಮಾತನಾಡುವಾಗ, ಈ ಅಸೆಂಬ್ಲಿಯ ಹಾಲನ್ನು ಪರಿವರ್ತಿಸಿದ್ದಕ್ಕೆ ಅನಾವಶ್ಯಕವಾಗಿ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರು ಎಂದು ಹೇಳಿದರು. ಅವರು ಹೇಳಿದಂತೆ ಈ ಹಾಲ್‌ಗೆ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆದರೆ ಇಲ್ಲಿರತಕ್ಕ ಎಲ್ಲಾ ಸಾಮಗ್ರಿಗಳನ್ನೂ ಕೂಡ ಇನ್ನೊಂದು ಅಸೆಂಬ್ಲಿ ಭವನವನ್ನು ಕಟ್ಟಿದಾಗ ಉಪಯೋಗಿಸಲು ಸಾಧ್ಯವಿದೆ. ಇದರಲ್ಲಿ ಯಾವುದೊಂದು ವಿಧವಾದ Wasteನ್ನೂ ಕೂಡ ಮಾಡಿಲ್ಲವೆಂದು ಹೇಳಬಯಸುತ್ತೇನೆ.

ಜನಾಬ್ ಜೆ. ಮಹಮದ್ ಇಮಾಂರವರು.—ಆದರೂ ಒಂದು ಸೀಟಿಗೆ 300 ರೂಪಾಯಿಗಳೇ! 100 ಸೀಟುಗಳಿಗೆ 30,000 ರೂಪಾಯಿಯಾದರೆ ಒಂದೊಂದು ಸೀಟಿಗೆ 300 ರೂಪಾಯಿ ಬಿತ್ತು!!

ಶ್ರೀ ಕಡಿದಾಳ್ ಮಂಜಪ್ಪನವರು.—ಅದನ್ನು ಕೇಳಿದರೆ ನನಗೆ ಕನ್ನಡದ ಒಂದು ಗಾದೆ ನೆನಪಿಗೆ ಬರುತ್ತದೆ. "ಕೊಡುವುದು ಒಂದು ಕಾಸು, ಕೋಣೆ ತುಂಬ...... ......" ಎಂದು ನಮಗೆ ಅನುಕೂಲತೆ ಬೇಕಾದಾಗ ಸ್ವಲ್ಪ ಜಾಸ್ತಿಯಾಗಿ ಖರ್ಚು ಮಾಡುವುದಕ್ಕೆ ಸಿದ್ಧವಾಗಿರಬೇಕು.

ಕೆಲವು ಸದಸ್ಯರು.—ಅವರು ಹೇಳಿದ ಗಾದೆ ಉಚಿತವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದರಲ್ಲೇನೂ ತಪ್ಪಿಲ್ಲ; ಎಲ್ಲಾ ಪಾಠದ ಪುಸ್ತಕಗಳಲ್ಲೂ ಈ ಗಾದೆ ಇದೆ. ಆದ್ದರಿಂದ ಅದರಲ್ಲೊಂದು ಅಪರಾಧ ಬರುವಂತೆ ಅರ್ಥ ಕಲ್ಪಿಸಬೇಕಾಗಿಲ್ಲ.

Sri L. SIDDAPPA.—The Treasury Bench ought not to be so sensitive.

Janab J. MOHAMED IMAM.—What about the difficuties of the Press? They are not hearing properly.

Mr. SPEAKER.—The Minister cannot be expected to say everything at once. He is answering the points raised in the discussion one by one. The Members may please have patience and listen to him.

ಶ್ರೀ ಕಡಿದಾಳ್ ಮಂಜಪ್ಪನವರು.—ನಾವು ಹೊಸದಾಗಿ ಒಂದು ಕಟ್ಟಡವನ್ನು ತುರ್ತಾಗಿ ಕಟ್ಟಿಸುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಇರತಕ್ಕ ಸನ್ನಿವೇಶದಲ್ಲಿ ಸಾಧ್ಯವಾದಷ್ಟು ಅನುಕೂಲತೆಗಳನ್ನು ಕಲ್ಪಿಸಲು ಪ್ರಯತ್ನಪಟ್ಟಿದ್ದೇವೆ.

ಆ ಮೇಲೆ ಶ್ರೀಮಾನ್ ಗೋಪಾಲಗೌಡರು ಮಾತನಾಡುವಾಗ ಆಡಳಿತದ ಯಂತ್ರ ಸಮರ್ಪಕವಾಗಿ ನಡೆಯುವುದಿಲ್ಲ, ಆ ಯಂತ್ರ ಬ್ರಿಟಿಷರ ಕಾಲದಲ್ಲಿ ನಿರ್ಮಿತವಾದದ್ದು, ಅದು ಈಗಿನ ಕಾಲಕ್ಕನುಗುಣವಾಗಿಲ್ಲ ಎಂದು ಹೇಳಿದರು. ಆ ವಾದಕ್ಕೆ ನನ್ನ ಮಿತ್ರರಾದ ಶ್ರೀಮಾನ್ ಮರಿಯಪ್ಪನವರೇ ಉತ್ತರ ಹೇಳಿದ್ದಾರೆ. ಅದಕ್ಕಿಂತ ಹೆಚ್ಚು ಹೇಳಬೇಕಾದದ್ದು ಅನಗತ್ಯವೆಂದು ತೋರುತ್ತದೆ. ಒಂದಂಶವನ್ನು ಮಾತ್ರ ಹೇಳಿ ಮುಗಿಸುತ್ತೇನೆ. ಏನೆಂದರೆ, ಆಡಳಿತ ಯಂತ್ರವೆಂಬುದು ಒಂದು ಜೀವವಿಲ್ಲದ ಯಂತ್ರವಲ್ಲ, ಸಜೀವವಾದ ವಸ್ತುಗಳಿಂದ ಕೂಡಿದಂಥಾದ್ದು; ಆದ್ದರಿಂದ ಅದರಲ್ಲಿ ಸ್ವಲ್ಪ ನ್ಯೂನಾತಿರಿಕ್ತಗಳಿದ್ದೇ ಇರುತ್ತವೆ. ಯಾವ ಮುಂದುವರಿದ ರಾಷ್ಟ್ರದಲ್ಲಿಯೂ ಕೂಡ ಆಡಳಿತದ ಯಂತ್ರದ ಮೇಲೆ ಟೀಕೆಗಳನ್ನು ಮಾಡುತ್ತಿರುವುದನ್ನು ಕೇಳುತ್ತಿದ್ದೇವೆ. ಇಂಗ್ಲೆಂಡಿನಲ್ಲಿ ನೋಡಿದರೆ ಅಲ್ಲಿಯೂ ಟೀಕೆಗಳಾಗುತ್ತಿರುವುದನ್ನು ಕೇಳಿದ್ದೇವೆ; ರಷ್ಯಾಕ್ಕೆ ಹೋದರೂ ಕೂಡ ಅಲ್ಲಿಯೂ ಕೇಳುತ್ತೇವೆ.

ಶ್ರೀ ಟಿ. ಮರಿಯಪ್ಪನವರು.—ರಷ್ಯಾದಲ್ಲಿ ಟೀಕೆ ಮಾಡುವುದಕ್ಕೆ ಬಿಡುವುದೇ ಇಲ್ಲ!

ಶ್ರೀ ಎಂ. ಶಂಕರಲಿಂಗೇಗೌಡರು.—ಯಾರೂ ರಷ್ಯಾವನ್ನೇ ನೋಡಿಲ್ಲ!!

ಶ್ರೀ ಕಡಿದಾಳ್ ಮಂಜಪ್ಪನವರು.—ಆ ಮೇಲೆ ಅಧಿಕಾರಿಗಳು ಬ್ಯೂರೋಕ್ರಾಟಿಕ್ ಮನೋಭಾವದಿಂದ ಕೂಡಿದ್ದಾರೆಂದು ಆಪಾದನೆ ಮಾಡಿದರು. ನಿಜವಾಗಿಯೂ ನಮ್ಮ ಅಧಿಕಾರಿಗಳಿಗೆ ಆ ರೀತಿಯ ಮನೋಭಾವವಿಲ್ಲವೆಂದು ಖಂಡಿತವಾಗಿ ಹೇಳುತ್ತೇನೆ.

ಸ್ವಾತಂತ್ರ್ಯ ಬಂದನಂತರ ಈಗಿನ ಹೊಸ ವಾತಾವರಣಕ್ಕನುಸಾರವಾಗಿ ನಮ್ಮ ಅಧಿಕಾರಿಗಳು ವರ್ತಿಸುತ್ತಾ ಇದ್ದಾರೆ. ಅಧಿಕಾರಿಗಳು ಸರ್ವರಿಗೂ ಸಂಬಂಧಪಟ್ಟವರು ನಿಜ. ಅಂದ ಮಾತ್ರಕ್ಕೇ ಅವರು ಯಾರೊಬ್ಬರ ಸೇವಕರೂ ಅಲ್ಲ, ಯಾರೊಬ್ಬರು ಬಂದರೂ ಅವರಿಗೆ ಅಡಿಯಾಳಾಗಿರಬೇಕೆಂದೂ ಇಲ್ಲ. ನೀವುಗಳೇನಾದರೂ ಅಧಿಕಾರಿಗಳು ಅಷ್ಟು ಅಡಿಯಾಳಾಗಿರಬೇಕೆಂದು ನಿರೀಕ್ಷಿಸಿದರೆ ಆಡಳಿತ ಯಂತ್ರ ಇನ್ನೂ ಸಡಿಲವಾಗಿ ನಾವೇನು ಫಲವನ್ನು ಅವರಿಂದ ನಿರೀಕ್ಷಿಸುತ್ತಿದ್ದೇವೋ ಅದಕ್ಕೆ ವ್ಯತಿರಿಕ್ತವಾದ ಫಲ ಬರಬಹುದೆಂದು ಹೇಳುತ್ತೇನೆ. ಅಧಿಕಾರಿಗಳು ಬಿಗಿಯಿಂದ ವರ್ತಿಸಬೇಕು. They should be firm but at the same time polite and sympathetic towards the public. ಅದೇ ರೀತಿಯಾಗಿ ನಮ್ಮ ನೀತಿಯನ್ನು ನಮ್ಮ ಅಧಿಕಾರಿಗಳಿಗೂ ಸ್ಪಷ್ಟಪಡಿಸಿದ್ದೇವೆ. ಅದನ್ನು ಅವರು ಕಾರ್ಯರೂಪಕ್ಕೆ ತರುತ್ತಿದ್ದಾರ, ತಂದಿದ್ದಾರೆ. ಆದ್ದರಿಂದ ಆ ವಿಚಾರದಲ್ಲಿ ಇನ್ನು ಹೆಚ್ಚು ಮಾತನಾಡುವುದು ಅನಗತ್ಯ. ಜನಾಬ್ ಇಮಾಂರವರು ಮಲೆನಾಡಿನ ವಿಚಾರದಲ್ಲಿ ಮಾತನಾಡಿ ಮಲೆನಾಡು ಸುಭಿಕ್ಷವಾಗಿದೆ, ಅಲ್ಲಿ ಇನ್ನೇನೂ ಮಾಡಬೇಕಾಗಿಲ್ಲವೆಂದು ಅರ್ಥ ಬರುವ ರೀತಿಯಲ್ಲಿ ಅಪ್ಪಣೆ ಕೊಡಿಸಿದರು. ಆದರೆ ಸರ್ಕಾರದ ದೃಷ್ಟಿಯಲ್ಲಿ ಮಲೆನಾಡೂ ಒಂದೇ, ಮೈದಾನವೂ ಒಂದೇ. ಮಲೆನಾಡು ಅನಾರೋಗ್ಯ ಸ್ಥಳವಾದುದರಿಂದ ಆ ಕಡೆ ಹೆಚ್ಚು ಗಮನ ಕೊಡಬೇಕೆಂದು ಉದ್ದೇಶಿಸಿದ್ದಾರೆ. ಇದು ತಪ್ಪೇನೂ ಅಲ್ಲ. ಮಲೆನಾಡಿನಲ್ಲಿ ಬೇಕಾದಷ್ಟು ಭೂ ಸಂಪತ್ತೂ ಇತರ ಸೌಕರ್ಯಗಳೂ ಇವೆ; ಅಲ್ಲಿ ಆರೋಗ್ಯ ಉತ್ತಮವಾದರೆ ಬೆಂಗಾಡು ಪ್ರದೇಶದಿಂದ ಜನರು ಅಲ್ಲಿ ನೆಲಸುವುದಕ್ಕೆ ಅನುಕೂಲವಾಗುತ್ತದೆಂದು ಶ್ರೀಮಾನ್ ಇಮಾಂರವರಲ್ಲಿ ಅರಿಕೆ. ಬೆಂಗಾಡು ಸೀಮೆಯಲ್ಲಿ ಲಕ್ಷಗಟ್ಟಲೆ ಹಣವನ್ನು ಖರ್ಚುಮಾಡುವುದರ ಬದಲು ಮಲೆನಾಡಿನಲ್ಲಿ ಖರ್ಚುಮಾಡಿದರೆ ಉಭಯ ಪ್ರದೇಶಗಳಿಗೂ ಅನುಕೂಲವಾಗುತ್ತದೆ.

ಶ್ರೀಮಾನ್ ಹುಚ್ಚೇಗೌಡರು ರೆವಿನ್ಯೂ ಅಪೀಲುಗಳ ವಿಲೇ ನಿಧಾನವಾಗುತ್ತಿದೆಯೆಂದು ಅಪ್ಪಣೆ ಕೊಡಿಸಿದರು. ಕೆಲವು ನಿಧಾನವಾಗುವುದು ನಿಜ. ಆದರೆ ಇದಕ್ಕೆ ಅನೇಕ ಕಾರಣಗಳಿವೆ. ಸ್ಥಳೀಯ ಅಧಿಕಾರಿಗಳ ವರದಿ ಕಾಲಕ್ಕೆ ಸರಿಯಾಗಿ ಬಾರದೇ ಇರುವುದು ಒಂದು. ಅನೇಕ ಸಂದರ್ಭಗಳಲ್ಲಿ ಲಾಯರುಗಳು ಕಾಲಕ್ಕೆ ಸರಿಯಾಗಿ ಕೋರ್ಟಿಗೆ ಬಂದು ಆರ್ಗ್ಯುಮೆಂಟ್ ನಡೆಸದೇ ಇರುವುದು ಇನ್ನೊಂದು. ಇನ್ನು ಕೆಲವು ಸಂದರ್ಭಗಳಲ್ಲಿ ಸಂಬಂಧಪಟ್ಟ ಪಾರ್ಟಿಗಳು ಕೋರ್ಟಿಗೆ ಬಾರದೆ ನಿಂತುಬಿಡುತ್ತಾರೆ. ಈ ಕಾರಣಗಳಿಂದ ನಿಧಾನವಾಗುವುದು ನಿಜ. ಮೊನ್ನೆ ನಾನು ಅರಿಕೆ ಮಾಡಿಕೊಂಡಹಾಗೆ ರೆವಿನ್ಯೂ ಬೋರ್ಡನ್ನು ನಿರ್ಮಾಣ ಮಾಡುವ ಯೋಚನೆಯಲ್ಲಿದ್ದೇವೆ. ಈ ವಿಚಾರದಲ್ಲಿ ಎರಡು ಮೂರು ತಿಂಗಳಲ್ಲಿ ತೀರ್ಮಾನಕ್ಕೆ ಬರುತ್ತೇವೆಂದು ಮನವಿ ಮಾಡಿಕೊಳ್ಳುತ್ತೇವೆ.

Sri. B. HUTCHE GOWDA.—Petitions under grow more food Schemes can be disposed of without lawyers.

Mr. SPEAKER.—The Hon'ble Minister may tell him that in the case of the revenue appeals and muzrai appeals, as the answer to that question reveals, 1141 appeals are disposed of within the last $4\frac{1}{2}$ years.

Sri Kadidal MANJAPPA.—I suppose that fact is known to them, Sir.

ಆ ಮೇಲೆ ಅಧಿಕಾರಿಗಳು ಪ್ರಭಾವಕ್ಕೊಳಗಾಗುತ್ತಾರೆಂದು ಶ್ರೀಮಾನ್ ಮುಲ್ಕಾ ಗೋವಿಂದರೆಡ್ಡಿಯವರು ಹೇಳಿದರು. ಈ ಆಪಾದನೆಗೆ ಎಳ್ಳಷ್ಟೂ ಬುಡವಿಲ್ಲವೆಂದು ಹೇಳಬಲ್ಲೆ. ಅನೇಕ ಸಂದರ್ಭಗಳಲ್ಲಿ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಇರಬೇಕೆಂಬ ಬಲವಾದ ಇಚ್ಛೆಯಿಂದ ಕೂಡಿರುತ್ತಾರೆ. ಇದನ್ನು ಯಾರಾದರೂ ಬ್ಯೂರಾಕ್ರೆಟಿಕ್ ಎಂತಲೋ, ಅಥವಾ ಯಾವುದಾದರೂ ಸಂದರ್ಭಗಳಲ್ಲಿ ತಮಗೆ ಬೇಕಾದ ವಿಷಯಗಳಲ್ಲಿ ತಾವು ಇಚ್ಛೆಪಟ್ಟ ಹಾಗೆ ಕೆಲಸ ಕಾರ್ಯಗಳನ್ನು ಅವರು ನಡೆಯಿಸದೇ ಇದ್ದರೂ ಅವರು ತಮ್ಮ ಪ್ರಭಾವಕ್ಕೊಳಗಾಗುತ್ತಾರೆಂದು ತಿಳಿದುಕೊಂಡರು, ಅದು ಅಧಿಕಾರಿಗಳ ತಪ್ಪಲ್ಲ.

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು.—ನಮ್ಮ ಕೆಲಸವನ್ನು ಮಾಡಿದರೆ ಒಳ್ಳೆಯವರು, ಇಲ್ಲದಿದ್ದರೆ ಅಲ್ಲವೆಂದಲ್ಲ. ನಿಷ್ಪಕ್ಷಪಾತ ದೃಷ್ಟಿಯಿಂದಿದ್ದರೆ ಸಾಕು.

ಶ್ರೀ ಕಡಿದಾಳ್ ಮಂಜಪ್ಪನವರು.—ಆ ಮೇಲೆ ಹೇಮಾವತಿ ಯೋಜನೆಯ ವಿಚಾರದಲ್ಲಿ ಶ್ರೀಮಾನ್ ಹುಚ್ಚೇಗೌಡರು ಪ್ರಸ್ತಾಪ ಮಾಡಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಒಂದು ವಿಷಯವನ್ನು ಅವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಅವರಿಗೆ ಗೊತ್ತಿರುವ ಹಾಗೆ ಸರ್ಕಾರದಲ್ಲಿ ಹಣದ ಅಭಾವವಿದೆ. ನಾವು ನಮ್ಮ resources scatter ಮಾಡಿದರೆ ಸರಿಯಾದ ಪ್ರತಿಫಲಕ್ಕೆ ಬದಲು ಪ್ರತಿಕೂಲವೇ ಹೆಚ್ಚು. ಈಗ ಒಂದು ಕಡೆ ತುಂಗಾ ಯೋಜನೆ ಮುಕ್ಕಾಲು ಪಾಲು ಆಗಿದೆ. ಮುಂದಿನ ವರ್ಷ ಹೆಚ್ಚು ಕಡಮೆ ಪೂರ್ತಿಯಾಗಬಹುದು. ನುಗು, ಲಕ್ಕವಳ್ಳಿ ಜಲಾಶಯಗಳ ಕೆಲಸಗಳು ನಡೆಯುತ್ತಿವೆ. ಹೀಗೆ ಇನ್ನೂ ಅನೇಕ ಕೆಲಸಗಳು ನಡೆಯುತ್ತಿವೆ. ಇವುಗಳ ಜೊತೆಗೆ ಇದನ್ನು ತೆಗೆದುಕೊಂಡರೆ ತೊಂದರೆಯಾಗುತ್ತದೆ. ಯೋಜನೆಯನ್ನೇನೋ ಮಂಜೂರು ಮಾಡಬಹುದು. ಆದರೆ ಹಣದ ಅಭಾವದಿಂದ ನಾವು ನಿರೀಕ್ಷೆ ಮಾಡುವಷ್ಟು ಬೇಗ ಕಾರ್ಯವನ್ನು ಕೈಕೊಳ್ಳುವುದಕ್ಕೆ ಸಾಧ್ಯವೆಂದು ಹೇಳುವುದಕ್ಕಾಗುವುದಿಲ್ಲ.

Sri M. SHANKAR LINGE GOWDA.—So Hemavthi project is not abandoned?

Sri Kadidal MANJAPPA.—It is not abandoned.

ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತರುತ್ತೇವೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ದೊಡ್ಡ ದೊಡ್ಡ ಹಿರಾಕುಡ್‌ನಂತಹ ನೀರಾವರಿ ಯೋಜನೆಗಳೆಲ್ಲಾ ಉತ್ತರ ದೇಶಕ್ಕೆ ಹೋಗಿವೆ. ಮೈಸೂರು ದೇಶದ ಯೋಜನೆಗಳೆಲ್ಲಾ ಮಲೆನಾಡಿಗೆ ಹೋಗಿವೆ. ಮೈದಾನಕ್ಕೆ ಏನೂ ಬೇಡವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಒಂದಂಶವನ್ನು ಸ್ಪಷ್ಟಪಡಿಸಬೇಕಾಗಿದೆ. ಮಲೆನಾಡಿನಲ್ಲಿ ಯಾವ ಯೋಜನೆಗಳಿದ್ದರೂ ಆ ಯೋಜನೆಗಳಿಂದ ಮಲೆನಾಡಿಗೆ ಪ್ರಯೋಜನವಿಲ್ಲ, ಮೈದಾನಕ್ಕೇ ಪ್ರಯೋಜನವೆಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಲಕ್ಕವಳ್ಳಿ ಯೋಜನೆಯಿಂದ ಚಿತ್ರದುರ್ಗ ಜಿಲ್ಲೆಗೆ ಪ್ರಯೋಜನ, ತುಂಗಾ ಯೋಜನೆಯಿಂದ ಹೊನ್ನಾಳಿ, ಶಿವಮೊಗ್ಗಕ್ಕೆ ಪ್ರಯೋಜನ,

ಶ್ರೀ ಎಚ್. ಎಸ್. ರುದ್ರಪ್ಪನವರು.— ನಾವು ಕಬ್ಬಿಣ ತಿಂದು ಮೈದಾನದವರಿಗೆ ಆಹಾರ ಕೊಡುತ್ತೇವೆ. (ನಗು !)

(Sri N. C. NAGIAH REDDY rose.)

Sri Kadidal MANJAPPA.—I do not yield, Sir. ಮಾನ್ಯ ಸದಸ್ಯರು Appendix B. ನೋಡಿದ್ದರೆ, ಟೀಕೆ ಮಾಡುತ್ತಿರಲಿಲ್ಲ. ಕಂಟಿಂಜೆನ್ಸಿ ಎಂದು ಹೇಳಿ ಹೆಚ್ಚು ಖರ್ಚು ಮಾಡುತ್ತಾರೆ, ವಿವರಗಳನ್ನು ಕೊಡುವುದಿಲ್ಲವೆಂದು ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರು ಆಪಾದನೆ ಮಾಡಿದ್ದಾರೆ. ಗೆಸ್ಟ್ ಹೌಸ್‌ನಲ್ಲಿ ಅತಿಥಿಗಳು ಬಂದರೆ ಅವರ ಅನುಕೂಲತೆಗಳ ಬಗ್ಗೆ ಅಗತ್ಯವಾದ ಸಾಮಗ್ರಿಗಳನ್ನು ಕೊಂಡುಕೊಳ್ಳಬೇಕಾಗುತ್ತದೆ. ಉಪ್ಪಿಗೆ ಇಷ್ಟು, ಮೆಣಸಿನಕಾಯಿಗೆ ಇಷ್ಟು ಎಂಬುದನ್ನೆಲ್ಲಾ ಬರೆಯುವುದಕ್ಕಾಗುವುದಿಲ್ಲ. ಆದುದರಿಂದ ಎದುರು ಪಕ್ಷದವರು ಎತ್ತಿರುವ ಆರೋಪಣೆಗಳಲ್ಲಿ ಹೆಚ್ಚು ತಿರುಳಿಲ್ಲವೆಂದು ಹೇಳಬೇಕಾಗಿದೆ.

5 P.M.

Mr. SPEAKER.—The question is :

"That a sum not exceeding Rs. 20,98,700 be granted to the Government to complete the sum necessary to defray the charges which will come in course of payment during the year ending 31st day of March 1953 in respect of 'General Administration (Except sub-major heads B.C. and F.)"

The motion was adopted.

Personnel of the Committee on Estimates.

Mr. SPEAKER.—The Chair desires to announce that till 3 P.M. to-day twelve candidates had signified their intention to stand for election to the Committee on Estimates. As the number of candidates is equal to the number of places to be filled up, the following members are declared elected :

Sri B. P. Nagaraja Murthy
,, S. Srinivasa Iyengar
,, J. Mohamed Imam
,, B. N. Boranna Gowda
,, G. Basappa
,, G. Narayana Gowda
,, B. Narayanaswamy
,, D. Devaraj Urs
,, B. C. Nanjundaiya
,, K. V. Shankara Gowda
,, B M. Seenappa
,, K. Prabhakar

The House will now adjourn and meet again at 12 NOON tomorrow.

The Assembly adjourned at Two Minutes past Five of the Clock to meet again at Twelve of the Clock on Friday, the 4th July 1952.

AD 2802—GPB—500—24-10-52